ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ



ಚಿಟ್ಟಾಣಿ ರಾಮಚಂದ್ರ ಹೆಗಡೆ ಇನ್ನಿಲ್ಲ

ಸಂಪುಟ 11 | ಸಂಚಿಕೆ 42 | ಪುಟ 16 | ಅಕ್ಟೋಬರ್ 9–15, 2017 | ರೂ. 10/– web: www.janashakthi.co.in e-mail : js_weekly@yahoo.com



ಯಶಸ್ವಿ 11ನೇ ಡಿವೈಎಫ್ಐ ರಾಜ್ಯ ಸಮ್ಮೇಳನ

ಕಿಸಾನ್ ಸಭಾ 34ನೇ ಸಮ್ಮೇಳನ


"ಪ್ರತಿ ಹಳ್ಳಿಯಲ್ಲೂ ಕಿಸಾನ್ ಸಭಾ ಪ್ರತಿ ರೈತ ಕಿಸಾನ್ ಸಭಾದಲ್ಲಿ"



ಮಸೂದೆಯಲ್ಲಿ 'ಮೂಢನಂಬಿಕೆ' ಮಾಯ!



ಇಂದಿರಾ ಕ್ಯಾಂಟೀನ್ ಗೊಣಗಾಟವೇಕೆ?



ಅಮಿತ್ ಶಾ "ಎನ್‌ಕೌಂಟರ್" ರಾಜಕಾರಣ

ಬರಪೀಡಿತ ರೈತರಿಗೆ ಬಿಜೆಪಿಯ 'ಬೆತ್ತಲೆ ಪರಿಹಾರ'



ಜನಗಳ ಬದುಕನ್ನು ಹದಗೆಡಿಸುತ್ತಿರುವ ಧೋರಣೆಗಳ ವಿರುದ್ಧ ದೊಡ್ಡ ಜನಹೋರಾಟಗಳು –ಸಿಪಿಐ(ಎಂ) ಪೊಲಿಟ್‌ಬ್ಯುರೊ ಬೆಂಬಲ

ರಾಜಸ್ತಾನ, ಮಹಾರಾಷ್ಟ್ರ, ಮಧ್ಯಪ್ರದೇಶ ಮತ್ತು ಛತ್ತೀಸ್‌ಗಡದ ರೈತರ ಹೋರಾಟಗಳು ಈಗ ದೇಶದ ವಿವಿಧ ಇತರ ಭಾಗಗಳಿಗೂ ಹರಡುತ್ತಿವೆ. ಅಕ್ಟೋಬರ್ 2ರಂದು ಸಭೆ ಸೇರಿದ ಸಿಪಿಐ(ಎಂ) ಪೊಲಿಟ್‌ಬ್ಯುರೊ ಇದನ್ನು ಪ್ರಶಂಸಿಸುತ್ತ ಮೋದಿ ಸರಕಾರ ತಕ್ಷಣವೇ ರೈತರಿಗೆ ಉತ್ಪಾದನಾ ಖರ್ಚಿನ ಒಂದೂವರೆ ಪಟ್ಟು ಕನಿಷ್ಟ ಬೆಂಬಲ ಬೆಲೆಯನ್ನು ಪ್ರಕಟಿಸುವ ಮತ್ತು ಸಾಲ ಮನ್ನಾದ ತನ್ನ ಚುನಾವಣಾ ಭರವಸೆಯನ್ನು ಜಾರಿಗೆ ತರಬೇಕು ಎಂದು ಆಗ್ರಹಿಸಿದೆ. ಸರಕಾರ ರೈತರಿಂದ ಕನಿಷ್ಟ ಬೆಂಬಲ ಬೆಲೆಯಲ್ಲಿ ರೈತರ ಉತ್ಪನ್ನಗಳನ್ನು ಕಡ್ಡಾಯವಾಗಿ ಖರೀದಿಸುವಂತೆ ಮಾಡುವ ಒಂದು ಕೇಂದ್ರೀಯ ಕಾಯ್ದೆಯನ್ನು ತರಬೇಕು ಎಂದೂ ಸಿಪಿಐ(ಎಂ) ಆಗ್ರಹಿಸಿದೆ.

ವಿವಿಧ ಜನವಿಭಾಗಗಳು ವಿನಾಶಕಾರಿ ಆರ್ಥಿಕ ಧೋರಣೆಗಳ ವಿರುದ್ಧ ಮತ್ತು ತಮ್ಮ ಬದುಕಿನ ಪರಿಸ್ಥಿತಿಗಳು ತ್ವರಿತವಾಗಿ ಹದಗೆಡುತ್ತಿರುವುದರ ವಿರುದ್ಧ ದೊಡ್ಡ ಹೋರಾಟಗಳಿಗೆ ಸಿದ್ಧಗೊಳ್ಳುತ್ತಿದ್ದಾರೆ. ಕಾರ್ಮಿಕ ಸಂಘಗಳು, ರೈತ ಸಂಘಟನೆಗಳು ಮತ್ತು ಯುವಜನರು ಹೋರಾಟಗಳಿಗೆ ಮತ್ತು ಇವುಗಳಲ್ಲಿ ಭಾರೀ ಸಂಖ್ಯೆಯಲ್ಲಿ ಜನಗಳನ್ನು ಅಣಿನೆರೆಸಲು ಸ್ವತಂತ್ರವಾಗಿ ಕರೆ ನೀಡಿವೆ. ವಿವಿಧ ಎಡ ಸಾಮೂಹಿಕ ಸಂಘಟನೆಗಳು ಮತ್ತು ಜನಾಂದೋಲನಗಳ ಜನ ಏಕತಾ ಜನ ಅಧಿಕಾರ್ ಆಂದೋಲನ ಎಂಬ ಒಂದು ಜಂಟಿ ವೇದಿಕೆ ರಚನೆಗೊಂಡಿದೆ. ಈ ಮೋದಿ ಸರಕಾರದ ಆರ್ಥಿಕ ಧೋರಣೆಗಳ ವಿಧ್ವಂಸಕಾರಿ ಪ್ರತಿಣಾಮಗಳಿಂದ ನರಳುತ್ತಿರುವ ಜನಗಳು ಈ ಪ್ರತಿಭಟನೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಸೇರಿಕೊಳ್ಳಬೇಕು ಎಂದು ಪೊಲಿಟ್‌ಬ್ಯುರೊ ಜನಗಳಿಗೆ ಕರೆ ನೀಡಿದೆ.

ಮತ್ತೆ-ಮತ್ತೆ ಇಂಧನ ಬೆಲೆ ಏರಿಕೆ

ಅಂತರ್ರಾಷ್ಟ್ರೀಯ ತೈಲ ಬೆಲೆಗಳು ಗಮನಾರ್ಹವಾಗಿ ಇಳಿಯುತ್ತಿರುವಾಗ ಮೋದಿ ಸರಕಾರ ಇಂಧನ ಬೆಲೆಗಳನ್ನು ಮತ್ತೆ ಹೆಚ್ಚಿಸುತ್ತಿದೆ. ಕಳೆದ ವರ್ಷ ಅಂತರ್ರಾಷ್ಟ್ರೀಯ ಬೆಲೆಗಳು 85%ದಷ್ಟು ಇಳಿದಿವೆ. ಆದರೆ ಇಳಿದ ಬೆಲೆಗಳ ಪ್ರಯೋಜನ ಜನಗಳಿಗೆ ದೊರೆಯುವಂತೆ ಮಾಡುವ ಬದಲು ಈ ಮೋದಿ ಸರಕಾರ ಅಬಕಾರಿ ಸುಂಕವನ್ನು 125%ದಷ್ಟು ಹೆಚ್ಚಿಸಿದೆ. ಆಮೂಲಕ ತನ್ನ ರೆವಿನ್ಯೂ ಸಂಗ್ರಹದಲ್ಲಿ ಭಾರೀ ಹೆಚ್ಚಳದ ಬಕ್ಷೀಸು ಬಾಚಿಕೊಂಡಿದೆ. ಏರುತ್ತಿರುವ ಇಂಧನ ಬೆಲೆಗಳ ಪರಿಣಾಮವಾಗಿ ಹೆಚ್ಚುತ್ತಿರುವ ಹಣದುಬ್ಬರದಿಂದ ಭಾರತೀಯ ಜನತೆಯ ಬಹುಪಾಲು ಮಂದಿ ನರಳುವಂತೆ ಮಾಡಿ ಅವರ ಖರ್ಚಿನಲ್ಲಿ ಸರಕಾರ ಇದನ್ನು ಬಾಚಿಕೊಂಡಿದೆ. ಈ ಹೆಚ್ಚಳವನ್ನು ಹಿಂತೆಗೆದುಕೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಎಡಪಂಥೀಯರ ಮೇಲೆ ಆರೆಸ್ಸೆಸ್ ಗುರಿ

ಆರೆಸ್ಸೆಸ್ ಸರಸಂಘಚಾಲಕ ಮೋಹನ ಭಾಗವತ್‌ರ ವಿಜಯದಶಮಿ ಭಾಷಣ ಎಡಪಕ್ಷಗಳ ಬಲಿಷ್ಟ ನೆಲೆಗಳಾದ ಕೇರಳ ಮತ್ತು ಪಶ್ಚಿಮ ಬಂಗಾಲದ ಮೇಲೆ ನೇರ ದಾಳಿ ಮಾಡಿದೆ., ಕೇರಳದ ಎಲ್‌ಡಿಎಫ್ ಸರಕಾರ ರಾಜ್ಯದಲ್ಲಿ ಜಿಹಾದಿ ಚಟುವಟಿಕೆಗಳು ಬೆಳೆಯಲು ಅವಕಾಶ ಮಾಡಿಕೊಡುತ್ತಿದೆ ಎನ್ನುವಷ್ಟರ ಮಟ್ಟಿಗೆ ಅದು ಹೋಗಿದೆ. ಇದು ಬರೀ ಸುಳ್ಳು ಮಾತ್ರವೇ ಅಲ್ಲ, ಸಿಪಿಐ(ಎಂ) ಮತ್ತು ಎಡಪಂಥದ ಮೇಲೆ ಗುರಿಯಿಡುವುದು ಇದರ ಉದ್ದೇಶ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಮಾಧ್ಯಮ ವ್ಯಕ್ತಿಗಳ ಮೇಲೆ ದಾಳಿಗಳು

ಪ್ರಗತಿಪರ ಬುದ್ಧಿಜೀವಿಗಳು ಮತ್ತು ಪತ್ರಕರ್ತರ ಮೇಲೆ ದಾಳಿಗಳು ಮುಂದುವರೆಯುತ್ತಿರುವುದನ್ನು ಪೊಲಿಟ್‌ಬ್ಯುರೊ ಖಂಡಿಸಿದೆ. ಗೌರಿ ಲಂಕೇಶ್ ಅವರ ಅಮಾನುಷ ಹತ್ಯೆಯ ನಂತರ ತ್ರಿಪುರಾದ ಯುವ ಟಿವಿ ಪತ್ರಕರ್ತ ಶಂತನು ಭೌಮಿಕ್ ಅವರನ್ನು ಬಿಜೆಪಿ ಬೆಂಬಲಿತ ಐಪಿಎಫ್‌ಟಿ ಹತ್ಯೆ ಮಾಡಿದೆ. ವಿವಿಧ ಆರೆಸ್ಸೆಸ್ ಸಂಯೋಜಿತ ಹಿಂದುತ್ವ ಸಂಘಟನೆಗಳು ಪತ್ರಕರ್ತರಿಗೆ ಬೆದರಿಕೆಗಳನ್ನು ಹಾಕುತ್ತಿರುವುದನ್ನು ಬಲವಾಗಿ ಖಂಡಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಮತ್ತು ಮಾಧ್ಯಮಗಳ ಹಕ್ಕುಗಳಿಗೆ ಚ್ಯುತಿ ಬರದಂತೆ ನೋಡಿಕೊಳ್ಳಬೇಕು ಎಂದು ಸಂಬಂಧಪಟ್ಟ ಸರಕಾರಗಳಿಗೆ ಕರೆ ನೀಡಿದೆ. ಇಂತಹ ಬೆದರಿಕೆಗಳು ಮತ್ತು ಕೊಲೆಗಡುಕ ದಾಳಿಗಳ ವಿರುದ್ಧ ಜನಗಳ ಪ್ರತಿಭಟನೆಗಳು ತೀವ್ರಗೊಳ್ಳಬೇಕು ಎಂದು ಅದು ಹೇಳಿದೆ.

ಬಿಹೆಚ್‌ಯು ವಿದ್ಯಾರ್ಥಿನಿಯರ ಮೇಲೆ ದಾಳಿ

ಬನಾರಸ್ ಹಿಂದೂ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯರ ಮೇಲೆ ಅನಗತ್ಯವಾಗಿ ಪೋಲೀಸರು ದಾಳಿ ಮಾಡಿರುವುದನ್ನು ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ಲೈಂಗಿಕ ಕಿರುಕುಳಗಳ ವಿರುದ್ಧ ಪ್ರತಿಭಟಿಸುತ್ತಿರುವ ವಿದ್ಯಾರ್ಥಿನಿಯರ ದೂರುಗಳನ್ನು ಪರಿಹರಿಸುವ ಬದಲು ಉಪಕುಲಪತಿಗಳು ವಿದ್ಯಾರ್ಥಿಗಳ ವಿರುದ್ಧವೇ ಕಾರ್ಯಾಚರಣೆ ನಡೆಸುವಂತೆ ಪೋಲೀಸರಿಗೆ ಆದೇಶ ನೀಡಿದ್ದಾರೆ. ಪುರುಷ ಪೋಲೀಸ್ ಸಿಬ್ಬಂದಿ ವಿದ್ಯಾರ್ಥಿನಿಯರನ್ನು ಥಳಿಸಿದ್ದಾರೆ. ಇದು ದೇಶಾದ್ಯಂತ ಉನ್ನತ ಅಧ್ಯಯನದ ಸಂಸ್ಥೆಗಳ ಮೇಲೆ ಆರೆಸ್ಸೆಸ್/ಬಿಜೆಪಿ ಸರಕಾರಗಳ ದಾಳಿಗಳ ಭಾಗ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಉಪಕುಲಪತಿಗಳನ್ನು ತಕ್ಷಣವೇ ತೆಗೆಯಬೇಕು ಮತ್ತು ಪ್ರತಿಭಟಿಸುತ್ತಿರುವ ವಿದ್ಯಾರ್ಥಿನಿಯರ ದೂರುಗಳನ್ನು ಕೂಡಲೇ ಪರಿಹರಿಸಬೇಕು ಎಂದು ಅದು ಆಗ್ರಹಿಸಿದೆ.

ಚುನಾಯಿತ ಮುಖ್ಯಮಂತ್ರಿಗಳಿಗೆ ಸಂದೇಶ ನೀಡಲು ಅವಕಾಶವಿಲ್ಲ ಚುನಾಯಿತರಲ್ಲದವರಿಗೆ ವಿಭಜನಕಾರಿ ಪ್ರಚಾರಕ್ಕೆ ಪೂರ್ಣ ಅವಕಾಶ

'ದೂರದರ್ಶನ' ನಾಗಪುರದಿಂದ ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರ ದಸರಾ ಭಾಷಣದ ನೇರ ಪ್ರಸಾರ ಮಾಡಿ ಮತ್ತೊಮ್ಮೆ ವಿವಾದಕ್ಕೆ ಒಳಗಾಗಿದೆ. ಒಂದೂವರೆ ತಿಂಗಳ ಹಿಂದೆ ಅದು ತ್ರಿಪುರಾ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಅವರ ಭಾಷಣವನ್ನು ಪ್ರಸಾರ ಮಾಡಿಸಲು ನಿರಾಕರಿಸಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಆಗ ದೂರದರ್ಶನ ಮತ್ತು ಆಕಾಶವಾಣಿ ಪ್ರಜಾಸತ್ತಾತ್ಮಕವಾಗಿ ಚುನಾಯಿತರಾಗಿದ್ದ ತ್ರಿಪುರಾದ ಮುಖ್ಯಮಂತ್ರಿಗಳ ಭಾಷಣವನ್ನು ಪ್ರಸಾರ ಮಾಡಬೇಕಾದರೆ ಅದರಲ್ಲಿ ಕೆಲವು ಬದಲಾವಣೆ ಮಾಡಬೇಕು ಎಂದು ಹೇಳಿದ್ದವು. ಇದೊಂದು ಅಭೂತಪೂರ್ವ, ಅಪ್ರಜಾಸತ್ತಾತ್ಮಕ, ನಿರಂಕುಶತ್ವ ಮತ್ತು ಅಸಹಿಷ್ಣು ಕ್ರಮ ಎಂದು ಮಾಣಿಕ್ ಸರ್ಕಾರ್ ತಮ್ಮ ಭಾಷಣದಲ್ಲಿ ಬದಲಾವಣೆ ಮಾಡಲು ನಿರಾಕರಿಸಿ ಅದನ್ನು ಬೇರೆ ಮಾಧ್ಯಮಗಳ ಮೂಲಕ ಪ್ರಕಟಿಸಿದರು.

ಈ ಕುರಿತ ಪ್ರಸಾರ ಭಾರತಿ ಮತ್ತು ದೂರದರ್ಶನ, ಅಗರ್ತಲಾದ ಪತ್ರ ಹೀಗೆ ಹೇಳಿತ್ತು: "ಮುಖ್ಯಮಂತ್ರಿಗಳ ಸಂದೇಶವನ್ನು ಸಂಬಂಧಪಟ್ಟ ಅಧಿಕಾರಿಗಳು ಸೂಕ್ಷ್ಮವಾಗಿ ಪರೀಕ್ಷಿಸಿದರು. ಸಂದರ್ಭದ ಪಾವಿತ್ರ್ಯತೆ, ಪ್ರಸಾರ ಸಂಹಿತೆ ಮತ್ತು ಸಾರ್ವಜನಿಕ ಪ್ರಸಾರಕರ ಹೊಣೆಗಾರಿಕೆಯಿಂದಾಗಿ ಅದನ್ನು ಈಗಿರುವ ರೂಪದಲ್ಲಿ ಪ್ರಸಾರ ಮಾಡಲು ಸಾಧ್ಯವಿಲ್ಲ".

ಕೇಂದ್ರ ಸೂಚನೆ ಮತ್ತು ಪ್ರಸಾರ ಮಂತ್ರಾಲಯದ ಅಡಿಯಲ್ಲಿರುವ ಅದೇ 'ಸಾರ್ವಜನಿಕ ಪ್ರಸಾರಕರು' ಸಪ್ಟಂಬರ್ 29ರಂದು ನಾಗಪುರದಿಂದ ಒಂದು ಸರಕಾರೇತರ ಸಂಘಟನೆಯ ಮುಖ್ಯಸ್ಥರ ಭಾಷಣದ ನೇರ ಪ್ರಸಾರವನ್ನು ಮಾಡಿದೆ. ಇದರಲ್ಲಿ ಇವನ್ನೆಲ್ಲ ಗಮನದಲ್ಲಿಟುಕೊಳ್ಳಲಾಗಿದೆಯೇ ಎಂಬ ಪ್ರಶ್ನೆ ಸಹಜವಾಗಿ ಎದ್ದಿದೆ.

ಈ ಇಬ್ಬಂದಿತನವನ್ನು ಬಲವಾಗಿ ಟೀಕಿಸಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ "ಆರೆಸ್ಸೆಸ್ ಮುಖ್ಯಸ್ಥರಿಗೆ ರಾಷ್ಟ್ರೀಯ, ರಾಜ್ಯ ಟಿವಿಯಲ್ಲಿ ಪ್ರಚಾರ ಕೊಡಲಾಗುತ್ತಿದೆ. ಅವರ ಭಾಷಣವನ್ನು ಪರೀಕ್ಷಿಸಲಾಗಿದೆಯೇ? ಈ ಸರಕಾರ ತ್ರಿಪುರಾದ ಮುಖ್ಯಮಂತ್ರಿಗಳ ಆಗಸ್ಟ್ 15ರ ಭಾಷಣವನ್ನು ಪ್ರಸಾರ ಮಾಡದಿರುವ ಭಂಡತನ ತೋರಿತ್ತು ಎಂಬುದನ್ನು ನೆನಪಿಸಿಕೊಳ್ಳಿ. ಈಗ ನಾಗಪುರದಿಂದ ಪ್ರಸಾರ ಮಾಡುವ ಆದೇಶ ಈ ಸರಕಾರ ಪ್ರಜಾಪ್ರಭುತ್ವದೊಂದಿಗೆ ಹೇಗೆ ವರ್ತಿಸುತ್ತಿದೆ ಎಂಬುದನ್ನು ಪ್ರಕಟಗೊಳಿಸುತ್ತದೆ. ಪ್ರತಿಪಕ್ಷದ ಮುಖ್ಯಮಂತ್ರಿಗಳನ್ನು ತೋರಿಸಲಾರದು, ಆದರೆ ಚುನಾಯಿತರಲ್ಲದ ಆರೆಸ್ಸೆಸ್ ಯಜಮಾನರುಗಳಿಗೆ ತಮ್ಮ ವಿಭಜನಕಾರಿ ಸಿದ್ಧಾಂತಗಳನ್ನು ಪ್ರಚಾರ ಮಾಡಲು ಪೂರ್ಣ ಅವಕಾಶ ಒದಗಿಸಲಾಗುತ್ತದೆ." ಎಂದು ಹೇಳಿದ್ದಾರೆ.

ಆರೆಸ್ಸೆಸ್ ಮುಖ್ಯಸ್ಥರು ತಮ್ಮ ಭಾಷಣದಲ್ಲಿ ಗೋರಕ್ಷಕರು ಮತ್ತು ಅದನ್ನು ಉತ್ತೇಜಿಸುವವರು ಸರಕಾರದಲ್ಲಿ ಉನ್ನತ ಸ್ಥಾನಗಳಲ್ಲಿರುವವರು ಅಥವ ಸುಪ್ರಿಂ ಕೋರ್ಟ್ ಏನನ್ನುತ್ತಾರೆ ಎಂಬುದರ ಬಗ್ಗೆ ಬೇಸರ ಪಡಬಾರದು ಮತ್ತು ವಿಚಲಿತರಾಗಬಾರದು ಎಂದಿದ್ದಾರೆ. ಸರಕಾರ ಮತ್ತು ಆಡಳಿತ ಈ ಕುರಿತ ತಪ್ಪು ವ್ಯಾಖ್ಯಾನಗಳಿಂದ ದೂರ ಇರಬೇಕು ಎಂದು ಸಲಹೆ ನೀಡಿದ್ದಾರೆ!

ರೊಹಿಂಗ್ಯ ಜನಗಳ ಬಗ್ಗೆ ಹೀನಾಯವಾಗಿ ಮಾತಾಡುತ್ತ ಅವರು ತಮ್ಮ ಹಿಂಸಾತ್ಮಕ ಮತ್ತು ಕ್ರಿಮಿನಲ್ ಪ್ರತ್ಯೇಕತಾವಾದಿ ಚಟುವಟಿಕೆಗಳು ಮತ್ತು ಭಯೋತ್ಪಾದಕ ಗುಂಪುಗಳೊಂದಿಗೆ ಸಂಪರ್ಕದಿಂದಾಗಿ ಮ್ಯಾನ್ಮಾರ್‌ನಿಂದ ಹೊರಗಾಗಿದ್ದಾರೆ ಎಂದು ಯಾವುದೇ ಆಧಾರವಿಲ್ಲದೆ ಹೇಳಿದ್ದಾರೆ.

ಆದರೆ ಹೀಗೆ ಹೇಳಲು ಅವಕಾಶ ನೀಡುವಾಗ ಈಗ ದೂರದರ್ಶನಕ್ಕೆ ತನ್ನ 'ಸಾರ್ವಜನಿಕ ಪ್ರಸಾರಕರ ಹೊಣೆಗಾರಿಕೆ' ಅಡ್ಡಿಯೇನೂ ಆಗಿಲ್ಲ.

ಬಿಜೆಪಿ ಅಧ್ಯಕ್ಷರು ದಿಲ್ಲಿಯಲ್ಲಿ ಸಿಪಿಐ(ಎಂ) ಮುಖ್ಯ ಕಚೇರಿ ಎಕೆಜಿ ಭವನದ ಎದುರು ಅಕ್ಟೋಬರ್ 16 ರವರೆಗೆ ಪ್ರತಿದಿನ ಪ್ರತಿಭಡಟನೆ ನಡೆಸಲು ಬಿಜೆಪಿ ಕಾರ್ಯಕರ್ತರಿಗೆ ಕರೆ ನಿಡಿದ್ದಾರೆ. ಈ ಬೆದರಿಕೆಗೆ ಸವಾಲಾಗಿ ಕೇರಳದಲ್ಲಿ ಆರೆಸ್ಸೆಸ್‌ನ ಭಯೋತ್ಪಾದನೆಯನ್ನು ಬಯಲು ಮಾಡುವ ಪೋಸ್ಟರ್ ಪ್ರದರ್ಶನವನ್ನು ಎಕೆಜಿ ಭವನದ ಮುಂದೆ ಏರ್ಪಡಿಸಲಾಗಿದೆ.



ರೊಹಿಂಗ್ಯ ಬಾಲ ನಿರಾಶ್ರಿತರನ್ನು ಹೊರಕಳುಹಿಸುವುದರ ವಿರುದ್ಧ ಸುಪ್ರಿಂ ಕೋರ್ಟಿನಲ್ಲಿ ಡಿವೈಎಫ್‌ಐ ಅರ್ಜಿ

ಭಾರತಕ್ಕೆ ನಿರಾಶ್ರಿತರಾಗಿ ಬಂದಿರುವ ರೊಹಿಂಗ್ಯ ಮಕ್ಕಳನ್ನು ಹಿಂದಕ್ಕೆ ಅಲ್ಪಸಂಖ್ಯಾತರ ವಿರುದ್ಧ ಒಂದು ಸಾಮೂಹಿಕ ಹತ್ಯಾಕಾಂಡ ನಡೆಯುತ್ತಿರುವ ಮ್ಯಾನ್ಮಾರ್‌ಗೆ ಕಳಿಸದಂತೆ ರಕ್ಷಿಸಬೇಕು ಎಂದು ಒಂದು ಅರ್ಜಿಯನ್ನು ಡಿವೈಎಫ್‌ಐ ಸುಪ್ರಿಂ ಕೋರ್ಟಿನಲ್ಲಿ ಹಾಕಿದೆ.

ಈ ಹಿಂಸಾಚಾರದಿಂದ ತಪ್ಪಿಸಿಕೊಂಡು ಭಾರತಕ್ಕೆ ಓಡಿ ಬಂದಿರುವ 40,000 ನಿರಾಶ್ರಿತರಲ್ಲಿ 12,000ಕ್ಕೂ ಹೆಚ್ಚು ಮಕ್ಕಳಿದ್ದಾರೆ ಎಂದು ಅಂದಾಜು ಮಾಡಲಾಗಿದೆ. ಬಿಜೆಪಿ ನೇತೃತ್ವದ ಕೇಂದ್ರದ ಎನ್‌ಡಿಎ ಸರಕಾರ ಇವರನ್ನೆಲ್ಲ ಹೊರಹಾಕಲು ಕಟಿಬದ್ಧವಾದಂತಿದೆ. ಅವರನ್ನು 'ರಾಷ್ಟ್ರೀಯ ಭದ್ರತೆಗೆ ಬೆದರಿಕೆ' ಎಂದೂ ಹೇಳಿದೆ.

ಆದರೆ ಭಾರತ 1992ರಲ್ಲಿ ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ರಕ್ಷಣೆಯ ಅಧಿನಿರ್ಣಯಕ್ಕೆ ಸಹಿ ಹಾಕಿದೆ. ಎಂಬುದನ್ನು ನೆನಪಿಸಿರುವ ಡಿವೈಎಫ್‌ಐ, ಈ ಅಧಿನಿರ್ಣಯ ನಿರಾಶ್ರಿತರಾಗಿ ಬರುವ ಮಕ್ಕಳನ್ನು ಅವರು ಬಿಟ್ಟು ಬಂದಿರುವ ದೇಶದಲ್ಲಿ ಅವರ ಜೀವಕ್ಕೆ ಬೆದರಿಕೆ ಇದ್ದರೆ ಅವರನ್ನು ಹಿಂದಕ್ಕೆ ಕಳಿಸಬಾರದು ಎಂದು ಆದೇಶಿಸಿದೆ, ಅಲ್ಲದೆ ಈ ಮಕ್ಕಳ ಆರೋಗ್ಯ ಮತ್ತು ಶಿಕ್ಷಣದ ಹಕ್ಕುಗಳನ್ನು ರಕ್ಷಿಸಬೇಕು ಎಂದಿದೆ.

ಇದಕ್ಕೆ ಸಹಿ ಹಾಕಿರುವ ಭಾರತ ಎಲ್ಲ ಮಕ್ಕಳನ್ನು, ಭಾರತದ ರಾಷ್ಟ್ರೀಯರಲ್ಲದ ಮಕ್ಕಳನ್ನೂ ನಮ್ಮ ಸಂವಿಧಾನದಲ್ಲಿ ಹೇಳಿರುವ ಮಕ್ಕಳ ಎಲ್ಲ ಹಕ್ಕುಗಳೊಂದಿಗೆ ರಕ್ಷಿಸಲು ಬದ್ಧವಾಗಿದೆ ಎಂದು ಡಿವೈಎಫ್‌ಐ ಹೇಳಿದೆ.

ರೊಹಿಂಗ್ಯ ಮಕ್ಕಳನ್ನು ಮ್ಯಾನ್ಮಾರ್‌ಗೆ ಹಿಂದಕ್ಕೆ ಕಳಿಸುವುದು ಈ ವಿಶ್ವಸಂಸ್ಥೆಯ ಅಧಿನಿರ್ಣಯದ ಕಲಮು 2,6,7,19,20,22,31ಮತ್ತು 37ರ ಉಲ್ಲಂಘನೆಯಾಗುತ್ತದೆ ಎಂದು ಅದು ಹೇಳಿದೆ.

ಡಿವೈಎಫ್‌ಐ ಸಂವಿಧಾನದ 32ನೇ ಕಲಮಿನ ಅಡಿಯಲ್ಲಿ ಈ ಅರ್ಜಿಯನ್ನು ಹಾಕಿದೆ. ಈ ಮಕ್ಕಳನ್ನು /ಜನಗಳನ್ನು ಹಿಂದಕ್ಕೆ ಕಳಿಸಿದರೆ ದಾರಿಯಲ್ಲಿ ಅಥವ ತಮ್ಮ ದೇಶವನ್ನು ತಲುಪಿದಾಗ ಸಾಯಿಸಬಹುದು ಎಂಬ ಪೂರ್ಣ ಅರಿವು ಇದ್ದರೂ ಭಾರತ ಸರಕಾರ ಹೀಗೆ ಮಾಡುತ್ತಿದೆ. ಇದು ಭಾರತದ ಸಂವಿಧಾನದ ಕಲಮು 14 ಮತ್ತು 21ರಲ್ಲಿ ಭರವಸೆ ನೀಡಿರುವ ಮೂಲಭೂತ ಹಕ್ಕಿನ ಉಲ್ಲಂಘನೆಯೂ ಅಗುತ್ತದೆ ಎಂದಿರುವ ಡಿವೈಎಫ್‌ಐ ಅರ್ಜಿ ನ್ಯಾಯಾಲಯ ಭಾರತ ಸರಕಾರ ಈಗ ದೇಶದಲ್ಲಿ ಇರುವ ರೊಹಿಂಗ್ಯ ಮಕ್ಕಳನ್ನು ಹೊರಕಳಿಸಬಾರದು, ಅವರು ಮಾನವೀಯ ಪರಿಸ್ಥಿತಿಗಳಲ್ಲಿ ಬದುಕಲು ಸಾಧ್ಯವಾಗುವಂತೆ ಮೂಲ ಸವಲತ್ತುಗಳ:ನ್ನು ಅಂತರ್ರಾಷ್ಟ್ರೀಯ ಕಾನೂನಿನಂತೆ ಲಭ್ಯಗೊಳಿಸಬೇಕು ಎಂದು ನಿರ್ದೇಶನ ನೀಡಬೇಕು ಎಂದು ಕೇಳಿಕೊಂಡಿದೆ.

ಡಿವೈಎಫ್‌ಐನ ಒಂದು ನಿಯೋಗ ಇತ್ತೀಚೆಗಷ್ಟೇ ರೊಹಿಂಗ್ಯ ನಿರಾಶ್ರಿತ ಶಿಬಿರಗಳಿಗೆ ಭೇಟಿ ನೀಡಿತ್ತು.

ಅಡ್ವೊಕೇಟ್ ಸುಭಾಷ್ ಚಂದ್ರನ್ ಡಿವೈಎಫ್‌ಐ ಕೇಂದ್ರೀಯ ಕಾರ್ಯಕಾರಿ ಸಮಿತಿಯ ಕಾನೂನು ಉಪಸಮಿತಿಯ ಪರವಾಗಿ ಈ ಅರ್ಜಿಯನ್ನು ಸಲ್ಲಿಸಿದ್ದಾರೆ.

ಹಿರಿಯ ಅಡ್ವೊಕೇಟ್ ಪಿ.ವಿ.ಸುರೇಂದ್ರನಾಥ್ ಮತ್ತು ಅಡ್ವೊಕೇಟ್ ರಶ್ಮಿತ ಆರ್. ಚಂದ್ರನ್ ಡಿವೈಎಫ್‌ಐ ಪರವಾಗಿ ಈ ಕೇಸಿನಲ್ಲಿ ವಾದಿಸುತ್ತಾರೆ.

ಈಗಾಗಲೇ ಸುಪ್ರಿಂ ಕೋರ್ಟ್ ರೊಹಿಂಗ್ಯಗಳನ್ನು ಹೊರಹಾಕುವುದರ ವಿರುದ್ಧ ಪ್ರಶಾಂತ ಭೂಷಣ್ ಮತ್ತು ಇತರರ ಅರ್ಜಿಗಳ ವಿಚಾರಣೆ ನಡೆಸುತ್ತಿದೆ, ಇದು ನ್ಯಾಯಾಲಯದ ವ್ಯಾಪ್ತಿಗೆ ಸೇರಿದ ಸಂಗತಿಯಲ್ಲ ಎಂಬ ಸರಕಾರದ ವಾದವನ್ನು ಅದು ಒಪ್ಪಿಲ್ಲ.

ಮೌಢ್ಯ ಪ್ರತಿಬಂಧಕ ನಿಷೇಧ ಕಾಯ್ದೆ : ಮಂಡನೆ ಸ್ವಾಗತಾರ್ಹ, ಆದರೆ ...

ಸಂಪಾದಕೀಯ

ಮೌಢ್ಯ ಪ್ರತಿಬಂಧಕ ನಿಷೇಧ ಕಾಯ್ದೆ ಮಸೂದೆ ಜಾರಿಗೆ ತರಲು ಸಚಿವ ಸಂಪುಟ ಸಭೆ ಅನುಮೋದನೆ ನೀಡಿರುವುದಾಗಿ ಸಚಿವ ಟಿಬಿ ಜಯಚಂದ್ರ ತಿಳಿಸಿದ್ದಾರೆ. ಸೆಪ್ಟೆಂಬರ್ 28ರಂದು ಮೌಢ್ಯ ನಿಷೇಧ ಕಾಯ್ದೆ ಜಾರಿಗೆ ತರುವ ಕುರಿತು ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ನಿರ್ಧಾರ ಕೈಗೊಳ್ಳಲಾಗಿದೆ. ಮೌಢ್ಯ ಪ್ರತಿಬಂಧಕ ನಿಷೇಧ ಕಾಯ್ದೆಯನ್ನು ಬೆಳಗಾವಿಯಲ್ಲಿ ನಡೆಯುವ ಮುಂದಿನ ಅಧಿವೇಶನದಲ್ಲಿ ಮಂಡಿಸಲು ನಿರ್ಧರಿಸಲಾಗಿದೆ ಎಂದೂ ಅವರು ಹೇಳಿದರು.

ವಿಧಾನಸಭಾ ಚುನಾವಣೆಯ ಬಿಸಿ ಏರುತ್ತಿರುವ, "ಧಾರ್ಮಿಕ ಭಾವನೆ"ಗಳನ್ನು ಮುಟ್ಟುವುದು ರಾಜಕೀಯವಾಗಿ ಅಪಾಯಕಾರಿ ಎಂಬ ಅಭಿಪ್ರಾಯ ಇರುವ ಹೊತ್ತಿನಲ್ಲಿಯೂ ಸರ್ಕಾರ ಈ ಮಸೂದೆಯನ್ನು ಮುಂದಿನ ಅಧಿವೇಶನದಲ್ಲಿ ಮಂಡನೆ ಮಾಡುವ ನಿರ್ಧಾರ ಮಾಡಿರುವುದು ಸ್ವಾಗತಾರ್ಹ. ಆದರೆ ಸಚಿವ ಸಂಪುಟ ಅಂಗೀಕರಿಸಿದ ಮಸೂದೆಯ ಕರಡು ಮೂಲ ಮಸೂದೆಗಿಂತ ಬಹಳ ಭಿನ್ನವಾಗಿದೆ. ಅದರ ತಿರುಳನ್ನು ತಿರುಚಲಾಗಿದೆ. ಅದರ ಮೂಲಾಶಯಕ್ಕೆ ಧಕ್ಕೆಯಾಗಿದೆ ಎಂದು ಹೇಳಲಾಗಿರುವುದು ಆತಂಕಕಾರಿ.

'ಕರ್ನಾಟಕ ಮೂಢನಂಬಿಕೆ ಆಚರಣೆ ಪ್ರತಿಬಂಧಕ ಮಸೂದೆ" ಎಂಬ ಹೆಸರೇ ಬದಲಾಗಿ 'ಕರ್ನಾಟಕ ಅಮಾನವೀಯ, ದುಷ್ಟ ಮತ್ತು ವಾಮಾಚಾರ ಪ್ರತಿಬಂಧಕ ಮತ್ತು ನಿರ್ಮೂಲನಾ ಮಸೂದೆ– 2017' ಎಂದಾಗಿದೆ. ನಿಗೂಢ ರೀತಿಯಲ್ಲಿ "ಮೂಢನಂಬಿಕೆ' ಎಂಬ ಪದವನ್ನೇ ಪ್ರತಿಬಂಧಿಸಿ "ಮಾಯ" ಮಾಡಲಾಗಿದೆ. "ನಂಬಿಕೆ" ಮತ್ತು "ಮೂಢನಂಬಿಕೆ"ಗಳ ನಡುವೆ ಗೆರೆ ಎಳೆಯುವುದು ಕಷ್ಟ ಎನ್ನುವ "ಮೂಢನಂಬಿಕೆ'ಯಿಂದ ಸಂಪುಟದಲ್ಲೂ ಆಳುವ ಪಕ್ಷದ ಶಾಸಕರಲ್ಲೂ ಹಾಗೂ ಪ್ರಮುಖ ವಿರೋಧ ಪಕ್ಷದಲ್ಲೂ ಬರಬಹುದಾದ ವಿರೋಧದ ನಿರೀಕ್ಷೆಯಿಂದಾಗಿ ಹೀಗಾಗಿರಬೇಕು. 'ಯಾವುದೇ ಒತ್ತಡಕ್ಕೆ ಒಳಗಾಗದೇ ಸ್ವಇಚ್ಛೆಯಿಂದ, ವೈಯಕ್ತಿಕ ಸಿದ್ಧಿಗಾಗಿ ಪಾಲಿಸುವ ಆಚಾರ–ವಿಚಾರ ಮತ್ತು ಪದ್ಧತಿಗಳು– ನಂಬಿಕೆ'. ಬೇರೆಯವರನ್ನು ಮಾನಸಿಕವಾಗಿ ಬ್ಲ್ಯಾಕ್‌ಮೆಲ್ ಮಾಡಿ ಒತ್ತಡಕ್ಕೆ ಸಿಲುಕಿಸಿ ಆಚರಿಸುವಂತೆ ಮಾಡುವುದು 'ಮೂಢನಂಬಿಕೆ'. ಎಂದು ಮಸೂದೆಯಲ್ಲಿ ವ್ಯಾಖ್ಯಾನಿಸಲಾಗಿದೆಯಂತೆ. "ಯಾವುದೇ ಪುರಾವೆ ಇಲ್ಲದೆ, ಪುರಾವೆಯ ನಿರೀಕ್ಷೆಯೂ ಇಲ್ಲದೆ ಒಂದು ಶಕ್ತಿ, ವ್ಯಕ್ತಿ, ಸಂಗತಿ ಇದೆ, ನಡೆಯುತ್ತೆ ಎಂದು ಭಾವಿಸುವ ಮನಸ್ಥಿತಿ 'ನಂಬಿಕೆ'. ಇಂಥ ನಂಬಿಕೆಗೆ ವಿರುದ್ಧವಾದ ಪುರಾವೆ ದೊರಕಿದ ನಂತರವೂ ಅದನ್ನು ಉಪೇಕ್ಷಿಸಿ ಹಿಂದಿನ ನಂಬಿಕೆಯನ್ನು ಮುಂದುವರಿಸಿಕೊಂಡು ಹೋಗುವುದು 'ಮೂಢನಂಬಿಕೆ'. ಜನರಲ್ಲಿ ಭಯ, ಅನಿಶ್ಚಿತತೆ, ಅಸಮರ್ಪಕ ಆಸೆ ಇತ್ಯಾದಿ ಕಾರಣ–ಕ್ಕಾಗಿ ಮನೆ ಮಾಡಿರುವ ಈ ಮೌಢ್ಯವನ್ನೇ ಬಂಡವಾಳ ಮಾಡಿಕೊಂಡು ಅನೇಕ ಧಾರ್ಮಿಕ, ವಾಣಿಜ್ಯ, ಮಾಧ್ಯಮ ಕಾರ್ಯಾಚರಣೆಗಳು ಧಾಳಾಗಿ ನಡೆಯುತ್ತಿವೆ ಎಂಬುದನ್ನು ಮಸೂದೆ ನಿರ್ಲಕ್ಷಿಸಿದೆ.

ಈ ಮಸೂದೆ ಪ್ರಕಾರ ಮಡೆಮಡೆಸ್ನಾನ, ಸಿಡಿ ಮುಂತಾದ ಅವಮಾನಕರ ಹಿಂಸಾತ್ಮಕ ಆಚರಣೆಗಳನ್ನು ನಿಷೇಧಿಸಲಾಗಿದೆ. ಆದರೆ ಜ್ಯೋತಿಷ ಮತ್ತು ವಾಸ್ತುಗಳನ್ನು ಈ ಮಸೂದೆಯ ಮತ್ತು "ಮೂಢನಂಬಿಕೆ"ಯ ಅಳವಿನಿಂದ ಹೊರಗಿಡಲಾಗಿದೆಯಂತೆ. ಈ ರೀತಿ ಮಾಡಲು ರಾಜಕೀಯ ಲಾಬಿಗಳು ಮಾತ್ರವಲ್ಲ, ಪ್ರಬಲ ಟಿವಿ ಮಾಧ್ಯಮ ಲಾಬಿಗಳೂ ಕೆಲಸ ಮಾಡಿವೆ ಎಂಬುದು ಸ್ಪಷ್ಟ. ಮಸೂದೆ ಪರಿಶೀಲನಾ ಸಮಿತಿ ತನ್ನ ನಿಲುವನ್ನು ಸಮರ್ಥಿಸಿಕೊಳ್ಳುತ್ತಾ, 'ಜ್ಯೋತಿಷ ಮತ್ತು ವಾಸ್ತು ಎರಡೂ ಮಾನ್ಯತೆ ಪಡೆದ ವಿಜ್ಞಾನ ವಿಷಯಗಳಾಗಿವೆ. ವಿಶ್ವವಿದ್ಯಾಲಯಗಳಲ್ಲಿ ಈ ವಿಷಯಗಳಿಗೆ ಸಂಬಂಧಿಸಿದ ಪದವಿ ನೀಡಲಾಗುತ್ತದೆ' ಎಂದಿರುವುದು ಇನ್ನೊಂದು ದುರಂತ. ವಿಶ್ವವಿದ್ಯಾಲಯಗಳು ಮಾಡುವುದೆಲ್ಲಾ ವೆಜಾನಿಕ ಎಂದು ನಂಬಲು ಸಾಧ್ಯವಿಲ್ಲ. ಪ್ರತಿಯೊಂದನ್ನೂ ಸಾರ್ವತ್ರಿಕ ಮಟ್ಟದಲ್ಲಿ ಪ್ರಯೋಗದ ಮೂಲಕ ಸಾಬೀತುಪಡಿಸಿ ಆ ಹೊತ್ತಿಗೆ ದೊರಕಿದ ಸತ್ಯದ ಅತ್ಯಂತ ಹತ್ತಿರದ ಅಂದಾಜು ಎಂದು ಒಪ್ಪಿಕೊಳ್ಳುವ ವಸ್ತುನಿಷ್ಠ ಸತ್ಯ ಎಂಬುದು ವಿಜ್ಞಾನ. ಆದರೂ, 'ಜ್ಯೋತಿಷದಲ್ಲಿ ಹೀಗೇ ಆಗುತ್ತದೆ ಎಂದು ಲಿಖಿತವಾಗಿ ಹೇಳುವುದಿಲ್ಲ. ಹೀಗಾಗಿ ಅದನ್ನು ಕಾಯ್ದೆಯ ವ್ಯಾಪ್ತಿಗೆ ತಂದು ಅಪರಾಧ ಎಂದು ಪರಿಗಣಿಸಿದರೆ ಸಾಬೀತುಪಡಿಸುವುದು ಕಷ್ಟ' ಎಂದೂ ಸಮಿತಿ ಬಲವಾಗಿ ಪ್ರತಿಪಾದಿಸಿದೆ. ಜ್ಯೋತಿಷ, ವಾಸ್ತು, ದೈವಿಕ ಶಕ್ತಿಯುಳ್ಳ ವಸ್ತುಗಳು ಇವೆಲ್ಲವೂ ಬಹುದೊಡ್ಡ ವಾಣಿಜ್ಯ ಸರಕುಗಳಾಗಿವೆ. ಇಂತಿಷ್ಟು ಎಂದು ಹಣವನ್ನು ಪಡೆದು ಗ್ರಾಹಕ ಸೇವೆ ಮತ್ತು ವಸ್ತುಗಳನ್ನು ಒದಗಿಸುತ್ತವೆ. ಆದರೂ ಇವು ಗ್ರಾಹಕ ಹಿತರಕ್ಷಣೆಯ ಕಾಯ್ದೆಗೆ ಒಳಪಡುವುದಿಲ್ಲ. ಅಷ್ಟೇ ಏಕೆ, ಎಲ್ಲಾ ವಾಣಿಜ್ಯ ಅಂಗಡಿಗಳು ಇರುವ ಬೀದಿಗಳಲ್ಲಿಯೇ ಅವಕ್ಕೆ ಸಮನಾಗಿ ದೊಡ್ಡ ನಾಮಫಲಕಗಳನ್ನು ಹಾಕಿಕೊಂಡು ದಂಧೆ ನಡೆಸುವ ಜ್ಯೋತಿಷ್ಯಾಲಯಗಳು ನಗರ ಪಾಲಿಕೆಗಳಿಂದ ಯಾವ 'ಟ್ರೇಡ್ ಲೈಸೆನ್ಸ್' ಪಡೆದಿರುತ್ತವೆ? ಮೂಢನಂಭಿಕೆಗಳು, ಮೋಸದ ಸರಕು–ಸೇವೆ ಮಾರಾಟವೂ ಆಗಿರುವ ಜ್ಯೋತಿಷ ಮತ್ತು ವಾಸ್ತುಗಳ ಮೇಲೆ ನಿರ್ಬಂಧ ಹೇರುವ ಅಗತ್ಯವಂತೂ ಇದೆ.

ಮಸೂದೆ ಮಂಡಿಸುವ ಮೊದಲು ಸಾರ್ವಜನಿಕ ವಿಮರ್ಶೆಗೆ ತೆರೆದಿಡಲಾಗುತ್ತದೆ. ಆಗ ಮಸೂದೆಯಲ್ಲಿ ಯಾವುದನ್ನು ನಿಷೇಧಿಸಲಾಗಿದೆ, ಯಾವುದಕ್ಕೆ ರಿಯಾಯಿತಿ ನೀಡಲಾಗಿದೆ ಎನ್ನುವುದನ್ನು ಪರಿಶಿಲಿಸಿ ಪ್ರತಿಕ್ರಿಯೆಯನ್ನು ನೀಡಬೇಕಾಗಿದೆ.





ಚಿಟ್ಟಾಣಿ ರಾಮಚಂದ್ರ ಹೆಗಡೆ ಇನ್ನಿಲ್ಲ

ಯಕ್ಷಗಾನದ ಮೇರು ಕಲಾವಿದ, ಪದ್ಮಶ್ರೀ ಪುರಸ್ಕೃತ ಚಿಟ್ಟಾಣಿ ರಾಮಚಂದ್ರ ಹೆಗಡೆ (84) ಅವರು ಮಣಿಪಾಲ ಆಸ್ಪತ್ರೆಯಲ್ಲಿ ಅ. 3ರಂದು ರಾತ್ರಿ 9.30ರ ವೇಳೆಗೆ ನಿಧನ ಹೊಂದಿದರು. ನವರಾತ್ರಿ ನಿಮಿತ್ತ ಸೆ. 21ರಿಂದ 4 ದಿನ ಬಂಗಾರಮಕ್ಕಿಯಲ್ಲಿ ನಡೆದ ಯಕ್ಷಗಾನದಲ್ಲಿ ಅವರು ಪಾತ್ರ ನಿರ್ವಹಿಸಿದ್ದರು. ಭೀಷ್ಮನ ತಂದೆ ಶಂತನು ಪಾತ್ರ ಅವರ ಕೊನೆಯ ವೇಷ. 7ನೇ ವರ್ಷದಲ್ಲಿ ರಂಗ ಪ್ರವೇಶ ಮಾಡಿದ ಅವರು 14ರ ಹರೆಯದಲ್ಲೇ ಪ್ರಮುಖ ಪಾತ್ರಗಳಲ್ಲಿ ಮಿಂಚಿದ್ದರು

ಚಿಟ್ಟಾಣಿ ಎಂಬ ಮೂರಕ್ಷರದ ಶಬ್ದಕ್ಕೆ ಯಕ್ಷಗಾನ ವಲಯದಲ್ಲಿ ಚೆಂಡೆ ಮದ್ದಳೆಗಳ ನಿನಾದಕ್ಕಿಂತಲೂ ಹೆಚ್ಚು ಶಕ್ತಿಯಿದೆ. ಬಡಗುತಿಟ್ಟಿನ ಯಕ್ಷಗಾನ ಪ್ರಪಂಚದ ಮೇರು ನಟರಾದ ಚಿಟ್ಟಾಣಿ ರಾಮಚಂದ್ರ ಹೆಗಡೆಯವರು ನೃತ್ಯ ಮತ್ತು ಅಭಿನಯಕ್ಕೆ ಪರ್ಯಾಯ ಹೆಸರು. ಶಿಕ್ಷಣ, ವ್ಯವಸ್ಥಿತ ಕಲಿಕೆ, ಆನುವಂಶೀಯತೆಗಳಿಲ್ಲದೆ ಕೇವಲ ಸ್ವಂತ ಪರಿಶ್ರಮದಿಂದ ಮೂಡಿ ಬಂದವರು. ಕೆಲವು ಪಾತ್ರಗಳಿಗೆ ಅವರೇ ಅನಿವಾರ್ಯವೆಂದೆನಿಸುವಷ್ಟು ಜನಮಾನಸದಲ್ಲಿ ನೆಲೆ ನಿಂತ ಪ್ರತಿಭಾವಂತರು. ವಿಶೇಷವಾಗಿ ಶೃಂಗಾರರಸದ ಅಭಿವ್ಯಕ್ತಿಯಲ್ಲಂತೂ ಹೊಸ ಇತಿಹಾಸವನ್ನೇ ಬರೆದ ಅಪ್ರತಿಮ ಕಲಾವಿದ, ಕೀಚಕ, ಭಸ್ಮಾಸುರ, ಸಾಲ್ವ, ಕಾರ್ತವೀರ್ಯ, ಕೌರವ ಮುಂತಾದ ಪಾತ್ರಗಳ ರಂಗ ವೈಭವದಲ್ಲಿ ಮೆರೆದು ಅರ್ಧಶತಮಾನಕ್ಕೂ ಹೆಚ್ಚು ಕಾಲ ಯಕ್ಷಗಾನ ರಂಗಭೂಮಿಯನ್ನು ಆಳಿದ ನಟ ಸಾಮ್ರಾಟರು ಅವರು. ರಂಗಪ್ರವೇಶದಿಂದ ತೊಡಗಿ ಕೊನೆಯ ದೃಶ್ಯದವರೆಗೂ ಒಂದೇ ರೀತಿ ರಂಗವನ್ನು ಜೀವಂತವಾಗಿರಿಸಬಲ್ಲ ರಸ ಚೈತನ್ಯ ಅವರದು. ಮಿಂಚುನಡೆ, ಅದ್ಭುತ ಲಯಸಿದ್ಧಿ, ಆಕರ್ಷಕ ನೃತ್ಯಗಳಿಂದ ಪರಂಪರೆ ಮತ್ತು ಹೊಸತನಗಳನ್ನು ಏಕಕಾಲದಲ್ಲಿ ಮೊಗೆಮೊಗೆದು ಕೊಡಬಲ್ಲ ಪ್ರತಿಭೆ.



ಚಿಟ್ಟಾಣಿ ರಾಮಚಂದ್ರ ಹೆಗಡೆಯವರು ಸಾಮಾನ್ಯ ಬಡಕುಟುಂಬವೊಂದರಲ್ಲಿ 18ನೇ ಸೆಪ್ಟೆಂಬರ್ 1935ರಂದು ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಹೊಸಕುಳಿ ಎಂಬಲ್ಲಿ ಜನಿಸಿದರು. ಪುರೋಹಿತ ವಂಶದ ಅವರ ಮನೆಯಲ್ಲಿ ಯಕ್ಷಗಾನವೆಂದರೆ ತುಸು ಮೈಲಿಗೆಯೇ. ಶಾಲೆಗೆ ಹೋಗುವುದನ್ನು ಬಿಟ್ಟು ಗೇರುಗುಡ್ಡದ ಮೇಲೆ ಯಕ್ಷಗಾನ ಕುಣಿತಕ್ಕೆ ಮೊದಲು ಮಾಡಿದ ಬಾಲಕ ಚಿಟ್ಟಾಣಿಯನ್ನು ಅವರ ಅಧ್ಯಾಪಕ ಕರ್ಕಿ ಭಟ್ಟ ಮಾಸ್ತರರು ಬೆನ್ನು ತಟ್ಟಿ ಪ್ರೋತ್ಸಾಹಿಸಿದರು. ಅವರ ವೃತ್ತಿ ಜೀವನ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳ ಹತ್ತಾರು ಮೇಳಗಳಲ್ಲಿ ಮುಂದುವರಿಯಿತು. ಮೂರೂರು ಮೇಳ (1957), ಗುಂಡಬಾಳಾ ಮೇಳ (1962), ಇಡಗುಂಜಿ ಮೇಳ (1965), ಕೊಳಗಿಬೀಸ್ ಮೇಳ (1967), ಅಮೃತೇಶ್ವರ ಮೇಳ, ಪಂಚಲಿಂಗೇಶ್ವರ ಮೇಳ (1984), ಸಾಲಿಗ್ರಾಮ ಮೇಳ, ಬಚ್ಚಗಾರ ಮೇಳ (1989), ಮಾರಿಕಾಂಬಾ ಮೇಳ, ಪೆರ್ಡೂರ ಮೇಳ, ಹೀಗೆ ಚಿಟ್ಟಾಣಿಯವರ ವೃತ್ತಿ ಮೇಳದ ವ್ಯವಸಾಯ ಐದು ದಶಕಗಳ ಕಾಲಾವಧಿಯನ್ನು ದಾಟಿ ನಿಂತಿದೆ. ಕೊನೆಗಾಲದಲ್ಲೂ ಅವರು ಸಕ್ರಿಯರಾಗಿ ತಮ್ಮ ಮಗನೇ ನಡೆಸುತ್ತಿರುವ ಬಂಗಾರಮಕ್ಕಿ ಎಂಬ ಮೇಳದಲ್ಲಿ ಕಲಾವ್ಯವಸಾಯ ನಡೆಸುತ್ತಿದ್ದಾರೆ.

ಬಡಾಬಡಗುತಿಟ್ಟು ಎಂದು ಹೇಳಲಾಗುವ ಉತ್ತರ ಕನ್ನಡ ಪರಂಪರೆಯಲ್ಲಿ ದಿ. ಮೂಡ್ಕಣಿ ನಾರಾಯಣ ಹೆಗಡೆ ಮತ್ತು ದಿ. ಕೆರೆಮನೆ ಶಿವರಾಮ ಹೆಗಡೆಯವರ ಹಸ್ತಾಭಿನಯ, ನೃತ್ಯ, ರಂಗ ಚಲನೆಗಳು, ಒಂದು ಘರಾನಾ ಎಂಬ ಖ್ಯಾತಿಗೆ ಪಾತ್ರವಾಗಿದೆ. ಚಿಟ್ಟಾಣಿಯವರು ಈ ಇಬ್ಬರು ಕಲಾವಿದರ ಉತ್ತಮಾಂಶಗಳನ್ನು ತನ್ನದಾಗಿಸಿಕೊಂಡು ಸೃಜನಶೀಲತೆಯಿಂದ ಅದಕ್ಕೆ ಹೊಸಮೆರುಗನ್ನು ನೀಡಿರುವುದು ಐತಿಹಾಸಿಕ ಸತ್ಯ. ಅವರ ನೃತ್ಯಕ್ಕೆ ಅವರದೇ ಆದ ಭಾಷೆ ವ್ಯಾಕರಣಗಳಿವೆ. ಅಸಮಾನ್ಯವಾದ ಲಯಪ್ರಜ್ಞೆ ಅದರ ಜೀವಧಾತು. ಪ್ರತಿನಿತ್ಯವೂ ವಿನೂತನವಾದ ಚಿಂತನೆಯಿಂದ ಪಾತ್ರಾಭಿವ್ಯಕ್ತಿಯಲ್ಲಿ ವೈವಿಧ್ಯವನ್ನು ಸಾಧಿಸುವ ಅವರ ಕಲೆಗಾರಿಕೆ ಅಪೂರ್ವವಾದುದು. ಅವರ ಅಭಿನಯದಲ್ಲಿ ಹುಬ್ಬು, ತುಟಿ, ಕಣ್ಣು, ಗಲ್ಲ, ಹಸ್ತ, ಪ್ರತಿಯೊಂದೂ ಸಮರಸದಿಂದ ಪಾಲ್ಗೊಳ್ಳುತ್ತವೆ. ಶೃಂಗಾರದ ಅಭಿವ್ಯಕ್ತಿಯಲ್ಲಂತೂ ಚಿಟ್ಟಾಣಿಯವರ ಅಭಿನಯ ಅಕ್ಷರಗಳನ್ನು ಮೀರಿದ ಅನನ್ಯ ಸೃಷ್ಟಿ, ಅದು ಕೇವಲ ಅನುಭವವೇದ್ಯ. ಸಾವಿರ ಮಾತುಗಳನ್ನು ಒಂದು ಕಣ್ಣ ನೋಟದಲ್ಲಿ ಹೇಳುವ ಅವರ ಆಂಗಿಕಾಭಿನಯಕ್ಕೆ ಚಿಟ್ಟಾಣಿಗೆ ಚಿಟ್ಟಾಣಿಯೇ ಸಾಟಿ. ಅದಕ್ಕೆಂದೇ ಯಕ್ಷಗಾನ ಕಲಾಭಿಮಾನಿಗಳು ಅವರನ್ನು ಶೃಂಗಾರರಾಜ ಎಂದೇ ಪ್ರೀತಿಯಿಂದ ಕೊಂಡಾಡುತ್ತಾರೆ.

ಗೌರಿ ಲಂಕೇಶ್ ಹಂತಕರ ಬಂಧನಕ್ಕೆ ಆಗ್ರಹಿಸಿ ಪ್ರತಿಭಟನೆ

ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ನಡೆದು ಒಂದು ತಿಂಗಳಾಗುತ್ತಿದ್ದರೂ ಹಂತಕರನ್ನು ಪತ್ತೆ ಹಚ್ಚಲಾಗದ ರಾಜ್ಯ ಸರ್ಕಾರದ ವೈಫಲ್ಯವನ್ನು ಖಂಡಿಸಿ ಹಾಗೂ ಗಾಂಧಿಯನ್ನು ಕೊಂದವರೇ ಗೌರಿಯನ್ನು ಕೊಂದರೇ ಎಂಬ ಪ್ರಶ್ನೆಯನ್ನು ಮುಂದಿಟ್ಟು ಗೌರಿ ಲಂಕೇಶ್ ಹತ್ಯೆ ವಿರೋಧಿ ಸಮಿತಿ ರಾಜ್ಯಾದ್ಯಂತ ಅಕ್ಟೋಬರ್ 2 ರಂದು ಹಮ್ಮಿಕೊಂಡಿರುವ ಕಾರ್ಯಕ್ರಮದ ಭಾಗವಾಗಿ ಉಡುಪಿ ಮತ್ತು ಮಂಗಳೂರಿನಲ್ಲಿ ಪ್ರತಿಭಟನೆ ನಡೆಸಲಾಯಿತು. ಎರಡೂ ಕರೆ ಪ್ರತಿಭಟನಾಕಾರರು ನಾನು ಗೌರಿ, ನಾವೆಲ್ಲ ಗೌರಿ ಎಂಬ ಘೋಷಣೆಗಳನ್ನು ಕೂಗಿದರು.

ಉಡುಪಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಲೇಖಕ ಜಿ.ರಾಜಶೇಖರ್, ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಮಾತನಾಡಿದರು. ಚಿಂತಕ ಪ್ರೊ.ಕೆ.ಫಣಿರಾಜ್, ದಸಂಸ ಮುಖಂಡ ಜಯನ್ ಮಲ್ಪೆ, ಸಿಪಿಐ(ಎಂ) ಜಿಲ್ಲಾ ಮುಖಂಡ ಕೆ.ಶಂಕರ್, ಫಾ.ವಿಲಿಯಂ ಮಾರ್ಟಿಸ್, ರಂಗಕರ್ಮಿ ನಾಗೇಶ್ ಕುಮಾರ್ ಉದ್ಯಾವರ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಮಂಗಳೂರು ಪುರಭವನದ ಎದುರಿನ ಮಹಾತ್ಮಾ ಗಾಂಧಿ ಪ್ರತಿಮೆಯ ಎದುರು ನಡೆದ ಪ್ರತಿಭಟನೆಯನ್ನು ಉದ್ದೇಶಿಸಿ ಗೌರಿ ಲಂಕೇಶರ ಆಪ್ತ ಲೇಖಕ ಶಿವಸುಂದರ್, ಪತ್ರಕರ್ತ ಹರ್ಷಕುಮಾರ್ ಕುಗ್ವೆ, ಸುರೇಶ್‌ಭಟ್ ಬಾಕ್ರಬೈಲ್ ಮಾತನಾಡಿದರು. ಸಮುದಾಯದ ವಾಸುದೇವ ಉಚ್ಚಿಲ ಭಾಗವಹಿಸಿದ್ದರು.

– ವಾಸುದೇವ ಉಚ್ಚಿಲ

ಬೈಂದೂರಿನಲ್ಲಿ ನಿವೇಶನ ರಹಿತರಿಂದ ಗ್ರಾಮ ಪಂಚಾಯತ್ ಕಚೇರಿಗೆ ಮುತ್ತಿಗೆ:

ಕರ್ನಾಟಕ ಪ್ರಾಂತ ಕೃಷಿ ಕೂಲಿಗಾರರ ಸಂಘದ ಕುಂದಾಪುರ ತಾಲೂಕು ಸಮಿತಿ ಮತ್ತು ಯಡ್ತರೆ ಗ್ರಾಮ ನಿವೇಶನ ರಹಿತರ ಹೋರಾಟ ಸಮಿತಿ ನೇತೃತ್ವದಲ್ಲಿ ಯಡ್ತರೆ ಗ್ರಾಮದ ಬಡ ನಿವೇಶನ ರಹಿತರಿಗೆ ನಿವೇಶನ ಹಕ್ಕುಪತ್ರ ನೀಡಬೇಕೆಂದು ಆಗ್ರಹಿಸಿ ಯಡ್ತರೆ ಗ್ರಾಮ ಪಂಚಾಯತ್‌ಗೆ ಮುತ್ತಿಗೆ ಹಾಗೂ ಸಾಮೂಹಿಕ ಅರ್ಜಿ ಸಲ್ಲಿಕೆ ಕಾರ್ಯಕ್ರಮ ಅಕ್ಟೋಬರ್ 2 ರಂದು ನಡೆಸಲಾಯಿತು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಪ್ರಾಂತ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ, ಹೋರಾಟ ಸಮಿತಿಯ ಮುಖಂಡ ಗಣೇಶ ತೊಂಡೆಮಕ್ಕಿ, ಸಂಘದ ಕುಂದಾಪುರ ತಾಲೂಕು ಕಾರ್ಯದರ್ಶಿ ನಾಗರತ್ನ ನಾಡ ಭಾಗವಹಿಸಿದ್ದರು. ನಿವೇಶ ರಹಿತರ 264 ಅರ್ಜಿಗಳನ್ನು ಗ್ರಾಮ ಪಂಚಾಯತಿಗೆ ಸಾಮೂಹಿಕವಾಗಿ ಹಸ್ತಾಂತರಿಸಲಾಯಿತು.

ಅಕ್ಟೋಬರ್ 3ರಂದು ಬೈಂದೂರು ಗ್ರಾಮಪಂಚಾಯತ್ ತೆಗ್ಗರ್ಸೆ ಗ್ರಾಮದ ನಿವೇಶನ ರಹಿತರು ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘ ಹಾಗೂ ಬೈಂದೂರು ತೆಗ್ಗರ್ಸೆ ನಿವೇಶನ ರಹಿತರ ಹೋರಾಟ ಸಮಿತಿಗಳ ನೇತೃತ್ವದಲ್ಲಿ ಬೈಂದೂರು ಗ್ರಾಮ ಪಂಚಾಯತ್ ಕಚೇರಿಗೆ ಬಂದು ಮನವಿ ಸಲ್ಲಿಸಿದರು.



ಮಂಗಳೂರಿನಲ್ಲಿ ನಿವೇಶನ ರಹಿತರ ಹಕ್ಕೊತ್ತಾಯ ಚಳುವಳಿ:



ಮೂರು ವರ್ಷಗಳ ಹಿಂದೆ ಸಮಾವೇಶಗೊಂಡ ಮಂಗಳೂರು ನಗರದ ನಿವೇಶನ ರಹಿತರು ಸಿಪಿಐ(ಎಂ) ಮಾರ್ಗದರ್ಶನದಲ್ಲಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ತಮಗೆ ನಿವೇಶನ ಒದಗಿಸಬೇಕೆಂದು ಪಾಲಿಕೆಯನ್ನು ಆಗ್ರಹಿಸಿ ಹಲವು ಹಂತಗಳಲ್ಲಿ ಹೋರಾಟಗಳನ್ನು ನಡೆಸಿದ್ದಾರೆ. ಈ ಅವಧಿಯಲ್ಲಿ ಅವರು ನಡೆಸಿದ ಹೋರಾಟಗಳ ಸಂಖ್ಯೆ 11 ಆಗಿದ್ದು, 3 ಬಾರಿ ಸಮಾವೇಶ ನಡೆಸಿ ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಚರ್ಚಿಸಿದ್ದಾರೆ. ಈ ಹೋರಾಟಗಳ ಫಲವಾಗಿ ಈ ಕೆಲವು ಸಾಧನೆಗಳನ್ನು ಮಾಡಲಾಗಿದೆ.

ಪಾಲಿಕೆಯು ನಿವೇಶನ ರಹಿತರ ಪಟ್ಟಿ ತಯಾರಿಸಿದೆ. ನಿವೇಶನ ರಹಿತರ ಪರಿಶೀಲನೆ ನಡೆಸಲಾಗಿದೆ. ನಿವೇಶನಕ್ಕಾಗಿ ಮಂಗಳೂರು ಪಾಲಿಕೆ ವ್ಯಾಪ್ತಿಯ ಶಕ್ತಿನಗರ, ಇಡ್ಯಾ, ಸುರತ್ಕಲ್, ಕನ್ನಗುಡ್ಡೆಗಳಲ್ಲಿ ಜಮೀನು ಕಾದಿರಿಸಿದ ಬಗ್ಗೆ ನಗರಪಾಲಿಕೆ ಅಧಿಕೃತ ಪ್ರತಿ ನೀಡಿದೆ. ಆಯ್ಕೆ ಮಾಡಲಾದ ನಿವೇಶನ ರಹಿತರ ಪಟ್ಟಿಯನ್ನು ಪಾಲಿಕೆ ಬಿಡುಗಡೆ ಮಾಡಿದೆ. ಜಿಲ್ಲೆಯಲ್ಲಿರುವ ಅನರ್ಹರನ್ನು ಕೈಬಿಡುವ ಬಗ್ಗೆ ಪರಿಶೀಲಿಸುವ ಕಾರ್ಯ ಆರಂಭವಾಗಿದೆ. ಮೊದಲ ಹಂತದಲ್ಲಿ ಶಕ್ತಿನಗರದ 11 ಎಕ್ರೆ ನಿವೇಶನದಲ್ಲಿ 1100 ಫಲಾನುಭವಿಗಳಿಗೆ ವಸತಿ ಕಲ್ಪಿಸಲು ಬಹುಮಹಡಿ ವಸತಿ ಸಂಕೀರ್ಣ ಪ್ರಕ್ರಿಯೆ ಪ್ರಾರಂಭಿಸಲು ಮೂರು ತಿಂಗಳ ಕಾಲಾವಕಾಶ ಪಾಲಿಕೆಯು ನಿವೇಶನ ರಹಿತರ ಹೋರಾಟ ಸಮಿತಿಗೆ ಕೋರಿತ್ತು. ಹಾಗೂ 18 ತಿಂಗಳಲ್ಲಿ ವಸತಿಗಳೆಲ್ಲವನ್ನೂ ನಿರ್ಮಿಸಲಾಗುವುದೆಂದೂ ಭರವಸೆ ನೀಡಿತ್ತು. ಪಾಲಿಕೆಯ ಪಾಲನ ವಂತಿಗೆ ರೂ.51.99 ಲಕ್ಷ ಮೊಬಲಗನ್ನು ಕಾದಿರಿಸಲಾಗಿತ್ತು.

ಮೂರು ತಿಂಗಳೊಳಗೆ ಕಾಮಗಾರಿ ಪ್ರಕ್ರಿಯೆ ಪ್ರಾರಂಭಿಸುವುದಾಗಿ ಭರವಸೆ ನೀಡಿದ ಮಹಾನಗರ ಪಾಲಿಕೆ 5 ತಿಂಗಳಾದರೂ ಕಾರ್ಯಾಚರಿಸದೆ ಇರುವುದನ್ನು ಪ್ರತಿಭಟಿಸಿ ನಿವೇಶನ ರಹಿತರ ಹೋರಾಟ ಸಮಿತಿಯ ನೇತೃತ್ವದಲ್ಲಿ ಮಂಗಳೂರಿನ ಕುಲಶೇಖರ, ಪಡೀಲು, ಉರ್ವಸ್ಟೋರ್, ಕಾವೂರು ಜಂಕ್ಷನ್ ಈ ಸ್ಥಳಗಳಲ್ಲಿ ಆಯಾಯ ಪ್ರದೇಶದ ನಿವೇಶನ ರಹಿತರನ್ನು ಮುಂದಿಟ್ಟು ಅಕ್ಟೋಭರ್ 2 ರಂದು ಪ್ರತಿಭಟನೆ ನಡೆಸಲಾಯಿತು. ಪ್ರತೀ ಸ್ಥಳದಲ್ಲೂ ನೂರಕ್ಕೂ ಮಿಕ್ಕಿ ಪ್ರತಿಭಟನಾಕಾರರು ಭಾಗವಹಿಸಿ ಪಾಲಿಕೆಗೆ ಎಚ್ಚರಿಕೆ ನೀಡಿದರು.

ಎಲ್ಲಾ ನಾಲ್ಕು ಕಡೆಗಳಲ್ಲೂ ಸಂಜೆ ಗಂಟೆ 4 ರಿಂದ 6 ತನಕ ನಡೆದಿದ್ದ ಪ್ರತಿಭಟನೆಯಲ್ಲಿ ಸಿಪಿಐ(ಎಂ) ದ.ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ, ಜಿಲ್ಲಾ ಸಮಿತಿ ಸದಸ್ಯರಾದ ಜೆ.ಬಾಲಕೃಷ್ಣ ಶೆಟ್ಟಿ, ಸುನಿಲ್ ಕುಮಾರ್ ಬಜಾಲ್, ಕೃಷ್ಣಪ್ಪ ಕೊಂಚಾಡಿ, ಯೋಗೀಶ್ ಜಪ್ಪಿನಮೊಗರು, ಜಯಂತಿ ಬಿ.ಶೆಟ್ಟಿ ಅವರುಗಳಲ್ಲದೆ ಸಿಪಿಐ(ಎಂ) ಪಾಲಿಕೆ ಸದಸ್ಯ ದಯಾನಂದ ಶೆಟ್ಟಿ ಮಾತನಾಡಿದರು. ನಿವೇಶನ ರಹಿತರ ಹೋರಾಟ ಸಮಿತಿ ಅಧ್ಯಕ್ಷೆ ಮಂಜುಳಾ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ಪ್ರಭಾವತಿ ಬೋಳೂರು, ಖಜಾಂಚಿ ನೂತನ್ ಬಾಳೆಬೈಲ್, ಸಂಘಟನಾ ಸಲಹೆಗಾರ ಸಂತೋಷ್ ಶಕ್ತಿನಗರ, ಅಲ್ಲದೆ ಸಿಪಿಐ(ಎಂ) ನಗರ ಸಮಿತಿ ಸದಸ್ಯರಾದ ಭಾರತಿ ಬೋಳಾರ್, ಪ್ರೇಮನಾಥ ಜಲ್ಲಿಗುಡ್ಡೆ ಭಾಗವಹಿಸಿದ್ದರು.

ನಾಳಿನ ಕಾರ್ಯಕ್ರಮಗಳು

- **"ಸಮಾಜವಾದ ಮತ್ತು ಕನ್ನಡ ಸಾಹಿತ್ಯ"** ಅಕ್ಟೋಬರ್ 8, ಬೆಂಗಳೂರು, ಸಮಾಜವಾದಿ ಕ್ರಾಂತಿ ಶತಮಾನೋತ್ಸವ ಸಮಿತಿ,
- ಅಕ್ಟೋಬರ್ 12 ರಂದು ಕಟ್ಟಡ ನಿರ್ಮಾಣ ಕಾರ್ಮಿಕರ ಪ್ರತಿಭಟನೆ
- **"ಹಾಸ್ಟೆಲ್ ಹೊರಗುತ್ತಿಗೆ & ದಿನಗೂಲಿ ನೌಕರರ ಹೋರಾಟ"** ಅಕ್ಟೋಬರ್ 16 ರಂದು ಬೆಂಗಳೂರಿನಲ್ಲಿ
- ಜಂಟಿ ಭೂಮಿ ಹೋರಾಟ – ಅಹೋರಾತ್ರಿ ಧರಣಿ – ಅಕ್ಟೋಬರ್ 21 ಸಾಮಾಜಿಕ ಮಾಧ್ಯಮ ಕಾರ್ಯಾಗಾರ ಅಕ್ಟೋಬರ್ 22
- **ಜನ ಏಕತಾ ಪಂಜಿನ ಮೆರವಣಿಗೆ** ಅಕ್ಟೋಬರ್ 30, ದೇಶದಾದ್ಯಂತ
- **ಕಾರ್ಮಿಕರ ಮಹಾಪಡಾವ್** ದೆಹಲಿ, ನವೆಂಬರ್ 9–11
- **ಕಿಸಾನ್ ಸಂಸತ್ ಚಲೋ**, ದೆಹಲಿ, ನವೆಂಬರ್ 20
- **ಸಿಪಿಐ(ಎಂ) ರಾಜ್ಯ ಸಮ್ಮೇಳನ** ಜನವರಿ 5–8,ಮೂಡಬಿದರೆ
- **ಸೌಹಾರ್ದ ಕರ್ನಾಟಕ ಮಾನವ ಸರಪಣಿ** ಜನವರಿ 30, ರಾಜ್ಯದಾದ್ಯಂತ

ಶಾಲಾ ಮಕ್ಕಳ ಸುರಕ್ಷತೆಯೇ ಮೂಲ ಧ್ಯೇಯವಾಗಲಿ

– ಜಿ.ಎಸ್. ಹೆಗಡೆ

ಭವಿಷ್ಯತ್ತಿನ ಹರಿಕಾರವಾಗಬೇಕಾದ ಪುಟಾಣಿ ಶಾಲಾ ಮಕ್ಕಳನ್ನು ಬಹಳ ಜಾಗರೂಕತೆಯಿಂದ ಸಾಗಿಸುವ ವಾಹನ ಚಾಲಕರಿಗೆ ಸಮಾಜದಲ್ಲಿ ಮಹತ್ತರವಾದ ಜವಾಬ್ದಾರಿಯಿದೆ. ಕಾನೂನುಗಳ ಪಾಲನೆ ಮಾಡುವ ಮೂಲಕ ಶಾಲಾ ಮಕ್ಕಳ ಸುರಕ್ಷತೆಗೆ ವಿಶೇಷ ಗಮನ ನೀಡಬೇಕಾಗಿದೆ. ಈ ನಿಟ್ಟಿನಲ್ಲಿ ಕಳೆದ ವರ್ಷ ಅಸ್ತಿತ್ವಕ್ಕೆ ಬಂದ ವಾಹನ ಚಾಲಕರ ಸಂಘವು ಶಾಲಾ ಮಕ್ಕಳ ಸುರಕ್ಷತೆಯನ್ನೇ ಮೂಲಧ್ಯೇಯವನ್ನಾಗಿಸಲಿ ಎಂದು ಮಂಗಳೂರಿನ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಾದ ಜಿ.ಎಸ್. ಹೆಗಡೆಯವರು ಅಭಿಪ್ರಾಯ ಪಟ್ಟರು.

ಅವರು 05–10–2017 ನಗರದ ಡಾನ್‌ಬಾಸ್ಕೋ ಹಾಲ್‌ನಲ್ಲಿ ಜರುಗಿದ ದ.ಕ. ಜಿಲ್ಲಾ ಶಾಲಾ ಮಕ್ಕಳ ವಾಹನ ಚಾಲಕರ ಸಂಘ (ರಿ)ದ ಪ್ರಥಮ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸುತ್ತಾ ಈ ಮಾತುಗಳನ್ನು ಹೇಳಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿಯವರು, ಕಳೆದ ಒಂದು ವರ್ಷದ ಅವಧಿಯಲ್ಲಿ ವಾಹನ ಚಾಲಕರ ಮಧ್ಯೆ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸಿದ ಸಂಘವು ತನ್ನ ಸದಸ್ಯರನ್ನು ಶಿಸ್ತುಬದ್ಧವಾಗಿ ಪರಿವರ್ತಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಶಿಸ್ತನ್ನು ಮೈಗೂಡಿಸಿಕೊಳ್ಳುವ ಮೂಲಕ ಸಂಘಟಿತ ಶಕ್ತಿಯಾಗಿ ಚಾಲಕ ವರ್ಗ ಎದುರಿಸುತ್ತಿರುವ ಸಂಕಷ್ಟಗಳ ವಿರುದ್ಧ ಪ್ರಬಲ ಹೋರಾಟ ನಡೆಸಬೇಕೆಂದು ಹೇಳಿದರು.

ಸಂಘದ ಗೌರವಾಧ್ಯಕ್ಷರಾದ ಸುನೀಲ್‌ಕುಮಾರ್ ಬಜಾಲ್‌ರವರು ಪ್ರಾಸ್ತವಿಕವಾಗಿ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಮಿಲಾಗ್ರಿಸ್ ಶಾಲೆಯ ಪ್ರಾಂಶುಪಾಲರಾದ ಫಾದರ್ ಮೈಕಲ್ ಸಾಂತೂಮಯರ್, ಪೋಲೀಸ್ ಅಧಿಕಾರಿಗಳಾದ ಮಂಜುನಾಥ, ಸುರೇಶ್ ಕುಮಾರ್, ಸೈಂಟ್ ಮೇರೀಸ್ ಆಂಗ್ಲಮಾಧ್ಯಮ ಶಾಲೆಯ ಮುಖ್ಯ ಶಿಕ್ಷಕಿಯಾದ ಸಿಸ್ಟರ್ ಫಿಲೋಮಿನಾ ಶುಭ ಹಾರೈಸಿದರು. ವೇದಿಕೆಯಲ್ಲಿ ಸಂಘದ ಗೌರವ ಸಲಹೆಗಾರರಾದ ಉಮೇಶ್ ಶೆಟ್ಟಿ, ಗಂಗಾ ಧರ ರೈ ಯವರು ಉಪಸ್ಥಿತರಿದ್ದರು. ಸಭೆಯ ಅಧ್ಯಕ್ಷತೆಯನ್ನು ಸಂಘದ ಅ ಧ್ಯಕ್ಷರಾದ ಮೋಹನ್‌ಕುಮಾರ್ ಅತ್ತಾವರರವರು ವಹಿಸಿದ್ದರು. ಪ್ರಧಾನ ಕಾರ್ಯದರ್ಶಿಯಾದ ಮಹಮ್ಮದ್ ಅನ್ಸಾರ್‌ರವರು ಕರಡು ವರದಿಯನ್ನು ಮಂಡಿಸಿದರು. ಸಂಘದ ಮುಖಂಡರಾದ ರೆಹಮಾನ್‌ಖಾನ್ ಕುಂಜತ್ತಬೈಲ್‌ರವರು ಕಾರ್ಯಕ್ರಮವನ್ನು ನಿರೂಪಿಸಿದರು.

ಬಗರ ಹುಕುಂ ಸಾಗುವಳಿದಾರರಿಗೆ ಹೊಸ ಅರ್ಜಿಗೆ ಅವಕಾಶ ನೀಡಲು ಆಗ್ರಹ

ನಗರದಲ್ಲಿರುವ ಶ್ರೀ ಸೇವಾಲಾಲ ಕಲ್ಯಾಣ ಮಂಟಪದಲ್ಲಿ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘ ತಾಲೂಕಾ ಸಮಿತಿ ನೇತೃತ್ವದಲ್ಲಿ ಗಜೇಂದ್ರಗಡದಲ್ಲಿ ಬಗರ ಹುಕುಂ ಸಾಗುವಳಿದಾರರ ಹಾಗೂ ಸರಕಾರಿ ಜಾಗೆಯಲ್ಲಿ ಮನೆ ಕಟ್ಟಿಕೊಂಡವರ ತಾಲೂಕ ಮಟ್ಟದ ಸಮಾವೇಶ ಕಾರ್ಯಕ್ರಮ ನಡೆಯಿತು.

ಈ ಸಂದರ್ಭದಲ್ಲಿ ಕೃಷಿಕೂಲಿಕಾರ ಸಂಘದ ರಾಜ್ಯಾಧ್ಯಕ್ಷರಾದ ನಿತ್ಯಾನಂದಸ್ವಾಮಿ ಮಾತನಾಡಿ ಗ್ರಾಮೀಣ ಭಾಗದಲ್ಲಿ ಕಡುಬಡವರು ಸರಕಾರಿ ಭೂಮಿಯಲ್ಲಿ ತಾಲೂಕಿನಲ್ಲಿ 20 ವರ್ಷಗಳಿಂದ ಕಂದಾಯ ಭೂಮಿಯನ್ನು ಅನದಿಕೃತವಾಗಿ ಸಾಗುವಳಿಮಾಡಿಕೊಂಡು ಜೀವನ ಸಾಗಿಸುತ್ತಿರುವ ನೂರಾರು ಕುಟುಂಬಗಳಿದ್ದು ಅವರಿಗೆ ಹೊಸದಾಗಿ ಅರ್ಜಿ ಹಾಕಿಕೊಳ್ಳಲು ಅವಕಾಶ ನೀಡಬೇಕೆಂದು ಬಗರ್ ಹುಕುಂ ಸಾಗುವಳಿದಾರರ ಹಾಗೂ ನಿವೇಶರಹಿತರ ತಾಲೂಕಾ ಮಟ್ಟದ ಸಮಾವೇಶದಲ್ಲಿ ಮಾತನಾಡಿ ಸರಕಾರಕ್ಕೆ ಆಗ್ರಹಿಸಿದರು.

ಬಗರ್ ಹುಕುಂ ಸಾಗುವಳಿದಾರರು ಸಕ್ರಮಕ್ಕಾಗಿ ಸಲ್ಲಿಸಿದ ಅರ್ಜಿಗಳನ್ನು ತಿರಸ್ಕರಿಸಲ್ಪಟ್ಟ ಅರ್ಜಿಗಳನ್ನು ಪುನಃ ಪರಿಶೀಲಿಸಲು ರಾಜ್ಯ ಸರಕಾರದ ತೀರ್ಮಾನವನ್ನು ಸ್ವಾಗತಿಸಿದ ಅವರು ಕಾರಣಾಂತರಗಳಿಂದ ಇದುವರೆಗೂ ಅರ್ಜಿಗಳನ್ನು ಪರಿಶೀಲಿಸದೇ ಹಾಗೂ ಅರ್ಜಿ ಹಾಕಿಕೊಳ್ಳಲು ಸಾಧ್ಯವಾಗದ ಬಡ ಬಗರರಹುಕುಂ ಸಾಗುವಳಿದಾರರಿಗೆ ಹೊಸದಾಗಿ ಅರ್ಜಿ ಹಾಕಿಕೊಳ್ಳಲು ಇನ್ನೊಂದು ಅವಕಾಶ ನೀಡಬೇಕು. ಅರ್ಜಿಗಳನ್ನು ಮಾನ್ಯ ಕಂದಾಯ ಮಂತ್ರಿಗಳಾದ ಕಾಗೋಡು ತಿಮ್ಮಪ್ಪನವರಿಗೆ ಸಾಮೂಹಿಕವಾಗಿ ಅರ್ಜಿ ಸಲ್ಲಿಸಲಾಗುವುದು ಎಂದು ಅವರು ತಿಳಿಸಿದರು.

ಈ ಸಮಾವೇಶದ ಅಧ್ಯಕ್ಷತೆ ವಹಿಸಿದ ತಾಲೂಕಾ ಅಧ್ಯಕ್ಷರಾದ ಬಾಲು ರಾಠೋಡ ಮಾತನಾಡಿ ಗುಡ್ಡದ ಅಕ್ಕಪಕ್ಕದ ಸರಕಾರಿ ಜಾಗೆಯಲ್ಲಿ ಅಕ್ರಮವಾಗಿ ಮನೆ, ಗುಡಿಸಲುಗಳನ್ನು ಕಟ್ಟಿಕೊಂಡು ಸುಮಾರು 20 ರಿಂದ 25 ವರ್ಷಗಳಾದರೂ ಸ್ಥಳಿಯ ಸರಕಾರಗಳು ಯಾವುದೇ ರೀತಿಯ ಹಕ್ಕುಪತ್ರ ನೀಡಲು ಸಾಧ್ಯವಾಗಿರುವುದಿಲ್ಲ. ಹಾಗೂ ಜನಪ್ರತಿನಿಧಿಗಳಿಗೆ ಹಲವಾರು ಬಾರಿ ಹೋರಾಟ ಮಾಡಿ ಮನವಿ ಮಾಡಿದರೂ ಈ ಕಡುಬಡವರಿಗೆ ನಿರಾಶೆಯೇ ಉತ್ತರವಾಗಿರುವುದರಿಂದ ರಾಜ್ಯ ಕಂದಾಯ ಸಚಿವರಾದ ಕಾಗೋಡು ತಿಮ್ಮಪ್ಪನವರು ಈ ಹಿಂದೆ ಅಂದರೆ 2016 ರಲ್ಲಿ 94 ಸಿ ಮತ್ತು 94 ಸಿಸಿ ಯಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಅಕ್ರಮವಾಗಿ ಮನೆ ಕಟ್ಟಿಕೊಂಡವರು ಸಕ್ರಮಕ್ಕೆ ಅರ್ಜಿಯನ್ನು ನೆಮ್ಮದಿ ಕೇಂದ್ರದಲ್ಲಿ ಅರ್ಜಿ ಸಲ್ಲಿಸಲು ಹೇಳಿ ಅರ್ಜಿಗಳನ್ನು ಪಡೆದಿದ್ದು ಸುಮಾರು ರಾಜ್ಯದಲ್ಲಿ 5 ಲಕ್ಷಕ್ಕೂ ಹೆಚ್ಚು ಅರ್ಜಿಗಳನ್ನು ಕಡುಬಡವರು ಸಲ್ಲಿಸಿದ್ದು ಆದರೆ ರಾಜ್ಯ ಸರ್ಕಾರ ಕ್ಷುಲ್ಲಕ ಕಾರಣಗಳನ್ನು ನೀಡಿ ತಿರಸ್ಕಾರ ಮಾಡಿರುವುದು ವಿಪರ್ಯಾಸದ ಸಂಗತಿ.

ಹಾಗಾಗಿ ಕರ್ನಾಟಕ ಸರಕಾರ ತಂದಿರುವ ಭೂಕಂದಾಯ (3ನೇತಿದ್ದುಪಡಿ) ನಿಯಮಗಳನ್ನು-2017 ಹಾಗೂ ಜಾರಿಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 94ಸಿ ಮತ್ತು 94ಸಿಸಿ ಅಡಿಯಲ್ಲಿ ಸಕ್ರಮಗೊಳ್ಳುತ್ತಿರುವ ಪ್ರಕರಣಗಳಿಂದ ದಲಿತರು, ಕೃಷಿಕೂಲಿಕಾರರು, ಬಡ ರೈತರಿಗೆ ಒಂದಿಷ್ಟು ಮನೆ ಒಡೆತನವನ್ನು ಹೊಂದಲು ಸಾಧ್ಯವಾಗುತ್ತದೆ. ಅಕ್ರಮವನ್ನು ಸಕ್ರಮ ಮಾಡಬಾರದೆನ್ನುವ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಗೆ ಸೂಕ್ತ ತಿದ್ದುಪಡಿಯನ್ನು ತಂದು ನಗರ ಮತ್ತು ಗ್ರಾಮೀಣ ಭಾಗದ ಬಡವರ್ಗದವರಿಗೂ ಭೂಮಿ ಮತ್ತು ಮನೆಯ ಹಕ್ಕುಪತ್ರದ ಒಡೆತನ ಸಿಗುವಂತೆ ಮಾಡಬೇಕೆಂದು ಒತ್ತಾಯಿಸಿದರು.

ಈ ಕಾಯ್ದೆ ತಿದ್ದುಪಡಿ ಮಾಡಿ ಜನರಿಗೆ ಭೂಮಿ ಮತ್ತು ನಿವೇಶನದ ಹಕ್ಕುಪತ್ರ ಕೊಡದೇ ಇದ್ದಲ್ಲಿ ಸರಕಾರ ಮೇಲೆ ಇತ್ತಡ ಹೇರಲು ರಾಜ್ಯ ಮಟ್ಟದಲ್ಲಿ ಮುಂದಿನ ತಿಂಗಳಲ್ಲಿ ಬಗರ್‌ಹುಕುಂ ಸಾಗುವಳಿದಾರರ ಅನಿರ್ಧಿಷ್ಟಾವದಿ ಹೋರಾಟವನ್ನು ಹಮ್ಮಿಕೊಳ್ಳಲಾಗುವುದು ಎಂದು ಸಮಾವೇಶ ತೀರ್ಮಾನಿಸಿತು.

ಈ ಸಮಾವೇಶವನ್ನು ತಾಲೂಕಾ ಕಾರ್ಯದರ್ಶಿ ಶಿವು ಚವ್ಹಾಣ ಸ್ವಾಗತಿಸಿದರು. ಪ್ರಾಸ್ತಾವಿಕವಾಗಿ ಫಯಾಜ್ ತೋಟದ ಮಾಡಿದರು. ವೇದಿಕೆ ಮೇಲೆ ಶೋಭಾ ಚವ್ಹಾಣ, ಸರಸ್ವತಿ ರಾಠೋಡ, ಭೀಮಪ್ಪ ಗುಗಲೋತ್ತರ, ದುರಗಪ್ಪ ರಾಠೋಡ, ಚನ್ನಪ್ಪ ಗುಗಲೊತ್ತರ ಉಪಸ್ಥಿತರಿದ್ದರು. ಹಾಗೂ ಈ ಕಾರ್ಯಕ್ರಮದಲ್ಲಿ ನೂರಾರು ಬಗರ್‌ಹುಕುಂ ಸಾಗುವಳಿದಾರರು ಭಾಗವಹಿಸಿದ್ದರು.

– ಬಾಲು ರಾಠೋಡ

ಮೈಸೂರಿನಲ್ಲಿ ಸಾರ್ವಜನಿಕ ಉದ್ಯಮ ಉಳಿಸಿ ಸಮಾವೇಶ







ಮೈಸೂರಿನಲ್ಲಿ ಅ.5 ರಂದು ಸಮಾಜವಾದಿ ಕ್ರಾಂತಿಯ ಶತಮಾನೋತ್ಸವದ ಅಂಗವಾಗಿ ಸಾರ್ವಜನಿಕ ಉದ್ಯಮಗಳ ಮೇಲೆ ಮೋದಿ ಸರಕಾರದ ದಾಳಿಗಳ ವಿರುದ್ಧ ಜಂಟಿ ಸಮಾವೇಶ ನಡೆಯಿತು. **BSNL, BEML, AIIEA, GENERAL INSURANCE** ಸಂಸ್ಥೆಯ ಖಾಯಂ ಮತ್ತು ಗುತ್ತಿಗೆ ಕಾರ್ಮಿಕ ಸಂಘಗಳು ಆಯೋಜಿಸಿದ್ದ ಕಾರ್ಯಕ್ರಮವನ್ನು ಟೆಲಿಕಾಂ ಚಳವಳಿಯ ಹಿರಿಯ ನೇತಾರ ಅಖಿಲ ಭಾರತ ಅದ-ಕ್ಷರಾದ ವಿಎಎನ್ ನಂಬೂದ್ರಿ, ಉದ್ಘಾಟಿಸಿ ಮಾತನಾಡಿದರು. ಸಮಾವೇಶದಲ್ಲಿ BSNLEU ವಲಯ ಕಾರ್ಯದರ್ಶಿ ಸಿ.ಕೆ.ಗುಂಡಣ್ಣ, ರಾಜ್ಯ ಅಧ್ಯಕ್ಷರಾದ ಎಂ.ಸಿ.ಬಾಲಕೃಷ್ಣ, ಅ.ಭಾ. ಸಂಘಟನಾ ಕಾರ್ಯದರ್ಶಿಗಳಾದ ಸುದರ್ಶನ, CITU ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ, ಸುನಂದ, CITU ಮೈಸೂರು ಜಿಲ್ಲಾ ಅದ-ಕ್ಷರಾದ ಬಾಲಾಜಿರಾವ್, ಪ್ರಧಾನ ಕಾರ್ಯದರ್ಶಿ ಜಯರಾಂ, ವಿಮಾನೌಕರರ ಸಂಘಧ ಜಂಟಿ ಕಾರ್ಯದರ್ಶಿ ಜೆ.ಸುರೇಶ, BSNL ಎಂಪ್ಲಾಯೀಸ್ ಯೂನಿಯನ್ ಜಿಲ್ಲಾ ಕಾರ್ಯದರ್ಶಿ ಮಹಾದೇವಪ್ಪ, ಅಧ್ಯಕ್ಷರಾದ ಬಸವರಾಜ್, ವಿಮಾ ನೌಕರರ ಸಂಘದ ಮುಖಂಡರಾದ ನಾಗೇಶ, ಗುತ್ತಿಗೆ ಕಾರ್ಮಿಕ ಸಂಘದ ಜಿಲ್ಲಾ ಕಾರ್ಯದರ್ಶಿ ರಾಮಲಿಂಗ, ಅಖಿಲ ಭಾರತ ಸಹ ಕಾರ್ಯದರ್ಶಿ ಶಬರೀಶ ಮೊದಲಾದವರು ಭಾಗವಹಿಸಿ ಮಾತನಾಡಿದರು.



ಕಾರ್ಮಿಕರ ಮೇಲೆ ಅಧಿಕಾರಿಗಳ ಕಿರುಕುಳದ ವಿರುದ್ಧ, ಕಾರ್ಮಿಕರು ಪ್ರತಿಭಟನೆ

ಅ.5 ರಂದು ಮೈಸೂರಿನ BSNL ಜನರಲ್ ಮ್ಯಾನೇಜರ್ ಕಚೇರಿ ಎದುರು ಗುತ್ತಿಗೆ ಕಾರ್ಮಿಕರ ಮೇಲೆ ಅಧಿಕಾರಿಗಳ ಕಿರುಕುಳದ ವಿರುದ್ಧ, ಕೆಲಸ ನಿರಾಕರಣೆ ವಿರುದ್ಧ ಹಾಗೂ ವೇತನ ಕಡಿತ ವಿರೋಧಿಸಿ ಕಾರ್ಮಿಕರು ಪ್ರತಿಭಟನೆ ನಡೆಸಿದರು. ಸಭೆಯನ್ನು ಉದ್ದೇಶಿಸಿ ಅಖಿಲ ಭಾರತ ಅದ-ಕ್ಷರಾದ ವಿಎಎನ್ ನಂಬೂದ್ರಿ, ರಾಜ್ಯ ಅದ-ಕ್ಷರಾದ ಸಿ.ಕೆ.ಗುಂಡಣ್ಣ, ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ, ಮೈಸೂರು ಜಿಲ್ಲಾ ಅಧ್ಯಕ್ಷರಾದ ಬಾಲಾಜಿರಾವ್, ಎಂಪ್ಲಾಯೀಸ್ ಯೂನಿಯನ್ ಜಿಲ್ಲಾ ಕಾರ್ಯದರ್ಶಿ ಮಹಾದೇವಪ್ಪ, ಗುತ್ತಿಗೆ ಕಾರ್ಮಿಕ ಸಂಘದ ಜಿಲ್ಲಾ ಕಾರ್ಯದರ್ಶಿ ರಾಮಲಿಂಗ, ಅಖಿಲ ಭಾರತ ಸಹ ಕಾರ್ಯದರ್ಶಿ ಶಬರೀಶ ಮೊದಲಾದವರು ಮಾತನಾಡಿದರು.



110 ವರ್ಷದ "ತಾಯಿ" ನೋಡ ಬನ್ನಿ



1907 ರಲ್ಲಿ ರಷ್ಯಾ ಲೇಖಕ ಮ್ಯಾಕ್ಸಿಂ ಗಾರ್ಕಿಯ ಕೂಸಾಗಿ ಜನಿಸಿದ "ತಾಯಿ" ಕಾದಂಬರಿ 1917 ರಷ್ಯಾ ಕ್ರಾಂತಿಗೆ, ಆನಂತರದಲ್ಲಿ ಜಗತ್ತಿನ ನಡೆದ ಎಲ್ಲಾ ವಿಮೋಚನಾ ಹೋರಾಟಗಳಿಗೆ, ಫ್ಯಾಸಿಸಂ ವಿರುದ್ಧದ ಮತ್ತು ಯುದ್ಧವಿರೋಧಿ ಹೋರಾಟಗಳಿಗೆ ಮಾತ್ರವಲ್ಲ ಕ್ಯೂಬಾ. ಚೈನಾ, ವಿಯಾಟ್ನಾಂ ಕ್ರಾಂತಿಗಳಿಗೆ ಸ್ಫೂರ್ತಿ ನೀಡಿತು. ಬೈಬಲ್,ಕುರಾನ್ ಬಿಟ್ಟರೆ ಜಗತ್ತಿನ ಎಲ್ಲಾ ಭಾಷೆಗಳಿಗೂ ಅನುವಾದಗೊಂಡು ಪ್ರಕಟವಾದ ಕಾದಂಬರಿ ಈ ತಾಯಿ. ಕನ್ನಡ ನೆಲದಲ್ಲಿ ಈ ತಾಯಿಗೆ ವಿಶಿಷ್ಟವಾದ ಸ್ಥಾನ ಒದಗಿಸಿದ್ದು "ಸಮುದಾಯ" ಸಂಘಟನೆ. 70 ದಶಕದಲ್ಲಿ ಕನ್ನಡ ನೆಲದಲ್ಲಿ ನಾಟಕವಾಗಿ ಇದು ಪ್ರದರ್ಶನವಾದಾಗ ತಾಯಿ ಪಾತ್ರ ಮಾಡಿದವರು ಇವತ್ತಿನ ಖ್ಯಾತ ನಟಿಯರಾದ ಬಿ.ಜಯಶ್ರೀ ಹಾಗೂ ರಾಮೇಶ್ವರಿ ವರ್ಮಾ ಅವರು. ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದ ಕರುಣಾನಿಧಿ, ತಾಯಿ ಕುರಿತಾಗಿ ಕವನ ಬರೆದರು. ಖ್ಯಾತ ಬರಹಗಾರ ಪ್ರೊ: ಬರಗೂರು ರಾಮಚಂದ್ರಪ್ಪ ತಾಯಿ ಕುರಿತು ಸಿನಿಮಾ ಮಾಡಿದರು.....

"ತಾಯಿ" ಜನಿಸಿ 110 ವರ್ಷಗಳಾದರೂ ಅವಳ ಸ್ಫೂರ್ತಿಯ ಹಾಗೂ ಪ್ರೀತಿಯ ಕಾವು ಸೊರಗಿಲ್ಲ. ತಾಯಿ ಎಂದರೆ ಹಾಗೆ ಅಲ್ಲವೇ? ಈಗ ಮತ್ತೊಮ್ಮೆ ಆ ತಾಯಿ ನಮ್ಮ ಮುಂದೆ ಬರಲಿದ್ದಾಳೆ. ಅಂತಹ ತಾಯಿಯ ಜೊತೆ, ತಾಯಿಯೊಂದಿಗೆ ಹೆಜ್ಜೆ ಹಾಕಿದವರ ಜೊತೆ ತಾಯಿಯನ್ನು ಅಪ್ಪಿಕೊಂಡವರ ಜೊತೆ ಇಡೀ ದಿನ ಜೊತೆಗಿರೋಣ ಸಂವಾದಿಸೋಣ ಬನ್ನಿ... ಅಕ್ಟೋಬರ್ 8 ಇಡೀ ದಿನದ ಕಾರ್ಯಕ್ರದಲ್ಲಿ ಪಾಲ್ಗೊಳ್ಳಿ.

ಕೆ. ಮಹಾಂತೇಶ

ಪ್ರಕಾಶ್ ರೈ ಯವರ ಮೇಲಿನ ಧಾಳಿಗಳು ವಿಕೃತಿಯ ಪುಂಡಾಟಿಕೆ

ಎಸ್.ವೈ. ಗುರುಶಾಂತ್



ನರೇಂದ್ರ ಮೋದಿ ನೇತೃತ್ವದ ಬಿಜೆಪಿ–ಎನ್.ಡಿ.ಎ. ಸರ್ಕಾರದ ಅಭಿವೃದ್ಧಿ ಮತ್ತು ಅಚ್ಛೇ ದಿನಗಳ ವರ್ಣರಂಜಿತ ಬಲೂನು ಒಡೆದು ಚೂರಾಗುತ್ತಿದೆ. ವಿರೋಧ ಪಕ್ಷಗಳ ಟೀಕೆ ಬಿಡಿ, ಅವರ ಸ್ವಪಕ್ಷೀಯರೇ ಹುಚ್ಚಾಡಳಿತದ ಹೂರಣವನ್ನು ಜಗತ್ತಿನೆದುರು ಬಿಚ್ಚಿಡುತ್ತಿದ್ದಾರೆ. ಅನಾಣ್ಯೀಕರಣ ತಂದಿರುವ ಆಪತ್ತಿನ ಬಗ್ಗೆ ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ ದಾಖಲೆಗಳ ಸಮೇತ ವಸ್ತು ಸ್ಥಿತಿ ವಿವರಿಸಿದೆ. ಸರ್ಕಾರದ ಸಂಸ್ಥೆಗಳೇ ದೇಶದ ಕೈಗಾರಿಕೆ–ಕೃಷಿ ಬಿಕ್ಕಟ್ಟು, ಉದ್ಯೋಗ ಕುಸಿತದ ಅಂಶಗಳನ್ನು ತೆರೆದಿಟ್ಟಿದೆ. ಇದು ಮೋದಿಗೆ, ಮೋದಿ ಭಕ್ತರಿಗೆ, ಮೋದಿಯೆಂಬ ಗೊಂಬೆ ಮೂಲಕ ತಮ್ಮ ಹಿತ ಸಾಧಿಸಿಕೊಳ್ಳುವ ಕಾರ್ಪೊರೇಟ್ ಕಂಪನಿಗಳಿಗೆ ಕಸಿವಿಸಿ ಉಂಟು ಮಾಡುತ್ತಿದೆ.

ಹೀಗಾಗಿ 'ಹತಾಶೆ' ಎಂಬುದು ಉನ್ಮಾದದ ರೋಗವಾಗಿ 'ಭಕ್ತ'ರಲ್ಲಿ ಉಲ್ಬಣಗೊಂಡಿದೆ! ಮುಖಕ್ಕೆ ಮೆತ್ತಿಕೊಳ್ಳುತ್ತಿರುವ ಕಪ್ಪು ಕಲೆಗಳನ್ನು ಮುಚ್ಚಿಕೊಳ್ಳಲು 'ಮೋದಿ ಸರ್ಕಾರದ ಹಾದಿ ಸರಿಯಿಲ್ಲ; ದಮನ, ದಬ್ಬಾಳಿಕೆ ಸಹಿಸೋಲ್ಲ ಎಂದವರ ಮೇಲೆ ಉರಿದು ಬೀಳುತ್ತಾ ಬಾಯ ಹೊಲಸೆಲ್ಲಾ ಉಗುಳುತ್ತಿದ್ದಾರೆ.

'ಅವರು ಹತಾಶರಾಗಿದ್ದಾರೆ. ಆದ್ದರಿಂದಲೇ ಅಬ್ಬರಿಸುತ್ತಿದ್ದಾರೆ. ನೋಡಿಕೊಳ್ಳುವ ಬೆದರಿಕೆಯನ್ನು ಹಾಕುತ್ತಿದ್ದಾರೆ. ಧೈರ್ಯ ವಿದ್ದವರು ಎದುರಿಗೆ ಬರಬೇಕು. ಅದನ್ನು ಬಿಟ್ಟು ಫೇಸ್ ಬುಕ್, ಟ್ವಿಟ್ಟರ್‌ಗಳಲ್ಲಿ 'ಟ್ರಾಲ್' ಮಾಡಿ ಅಸಭ್ಯ ಭಾಷೆ ಬಳಸಿ ನಿಂದಿಸುವುದು ಹೇಡಿತನವಲ್ಲದೇ ಇನ್ನೇನು?. ಇಂಥದ್ದನ್ನು ಸಹನೆ, ಸಂಯಮದಿಂದ ಆದರೆ ದಿಟ್ಟತನದಿಂದ ಎದುರಿಸಬೇಕು' ಎಂದು ಖ್ಯಾತ ಬಹುಭಾಷಾ ಚಲನಚಿತ್ರ ನಟ, ಸಮಾಜ ಮುಖಿ ಚಿಂತಕ ಪ್ರಕಾಶ್ ರೈಯವರು ಹೇಳಿದ್ದು. ದೇಶದ ಇಂದಿನ ದುಃಸ್ಥಿತಿ, ರಾಜಕಾರಣ, ಯುವಜನರ ಕರ್ತವ್ಯ ಇತ್ಯಾದಿ ಕುರಿತು ಜೀವಪರ, ಸಮಾಜಪರ ಕಾಳಜಿಯಿಂದ ಅವರು ಮಾತನಾಡಿದ್ದು.

ವಿವೇಕದ, ವಿಮರ್ಶೆಯ, ಪ್ರಜಾಪ್ರಭುತ್ವದ ಅಭಿವ್ಯಕ್ತಿಯ ಜೀವಂತಿಕೆಯ ಅವರ ಮಾತುಗಳೇ ಮೋದಿ ಭಕ್ತರ ಕಾರ್ಪೊರೇಟ್ ಕಂಪನಿ 'ಗಂಜಿ ಗಿರಾಕಿಗಳು' ಅರ್ಥಾತ್ ಸಂಘ ಪರಿವಾರಿಗಳ ಕಣ್ಣು ಕೆಂಪಾಗಿಸಿವೆ. ಪ್ರಕಾಶ್ ರೈಯವರ ಮಾತುಗಳನ್ನು ಸಂಯಮ ಹಾಗೂ ಸಾಮಾಜಿಕ ಹೊಣೆಗಾರಿಕೆಯಿಂದ ಸ್ವೀಕರಿಸಿ ಉತ್ತರಿಸುವ ಬದಲು ಹುಚ್ಚು ಹಿಡಿದವರಂತೆ 'ಲೋಳ್' ಎಂದು ಕೂಗುವುದು ಯಾಕೆ? ಈ ಆಕ್ರೋಶದಲ್ಲೇ ಹತಾಶೆ ಇರುವುದು. ಅಷ್ಟಕ್ಕೂ ರೈ ರವರು ಡಿವೈಎಫ್‌ಐ ನ 11ನೆಯ ರಾಜ್ಯ ಸಮ್ಮೇಳನವನ್ನು ಉದ್ಘಾಟಿಸಿ ಹೇಳಿದ್ದಾದರೂ ಏನು?

ಬಿಜೆಪಿ–ಸಂಘ ಪರಿವಾರದ ಭಕ್ತರು ಎತ್ತಿರುವ ತಕರಾರು, ಧಾಳಿಯ ವಿಷಯಗಳನ್ನೇ ಪರಿಶೀಲಿಸುವುದಾದರೆ 'ರೈಯವರು ಮೋದಿಯವರನ್ನು, ಉತ್ತರ ಪ್ರದೇಶದ ಮುಖ್ಯಮಂತ್ರಿಯೋಗಿ ಆದಿತ್ಯನಾಥ್ ರವರನ್ನು ಟೀಕಿಸಿದ್ದಾರೆ' ಎಂಬುದು.

ಪ್ರಕಾಶ್ ರೈ ಯವರು ದೇಶದಲ್ಲಿ ಆತಂಕಕಾರಿಯಾಗಿರುವ ಪ್ರಸಕ್ತ ವಿದ್ಯಾಮಾನಗಳ ಬಗ್ಗೆ ಪ್ರಸ್ತಾಪಿಸಿದರು. ಅಭಿಪ್ರಾಯ ಭೇದದ ಕಾರಣಕ್ಕಾಗಿ ವಿವಿಧ ಚಿಂತಕರು, ಕ್ರಿಯಾಶೀಲರ ಮೇಲೆ ಹೆಚ್ಚುತ್ತಿರುವ ಧಾಳಿಗಳು, ಹತ್ಯಾ ರಾಜಕಾರಣದ ಬಗ್ಗೆ ಮಾತನಾಡಿದರು. ವಿಶೇಷವಾಗಿ ಗೌರಿ ಲಂಕೇಶ್‌ರವರ ಹತ್ಯೆಯ ಬಗ್ಗೆ ಅತ್ಯಂತ ನೋವಿನಿಂದ ಹೇಳಿದ್ದು ಗಂಭೀರ ಅಂಶಗಳು. 'ಕೊಲೆ ಮಾಡಿದವರ ಪತ್ತೆಯಾಗಬಹುದು, ಆಗದೇ ಇರಬಹುದು. ಆದರೆ ಈ ಅಮಾನವೀಯ ಕೊಲೆಯನ್ನು ಸಂಭ್ರಮಿಸುತ್ತಿರುವವರು ಸ್ಪಷ್ಟವಾಗಿ ಇದ್ದಾರೆ. ಇಂತಹವರನ್ನು ಪ್ರಧಾನಿ ಮೋದಿಯವರು ಅವರ ಸಾಮಾಜಿಕ ಜಾಲ ತಾಣದಲ್ಲಿ 'ಫಾಲೋ' ಮಾಡುತ್ತಿದ್ದಾರೆ'. ಹೀಗೆ ಹೇಳುವಾಗ ರೈಯವರ ಫೇಸ್ ಬುಕ್, ಟ್ವಿಟ್ಟರ್ ಖಾತೆಯಲ್ಲೇ ಅವರನ್ನು ಹೀನಾಯವಾಗಿ ಅಸಭ್ಯ ಶಬ್ದಗಳನ್ನು ಬಳಕೆ ಮಾಡಿ 'ಟ್ರೋಲ್' ಮಾಡುತ್ತಿರುವ ಬಗ್ಗೆ ಪ್ರಸ್ತಾಪಿಸಿದರು. ಹೀಗೆ ಎನ್‌ಡಿಟಿವಿ ಯ ಪ್ರಧಾನ ಸಂಪಾದಕ ಹಿಂದಿನ ದಿನಗಳಲ್ಲಿ ಪ್ರಧಾನಿಗೇ ನೇರವಾಗಿ ಬಹಿರಂಗ ಪತ್ರ ಬರೆದು ತನಗಾಗುತ್ತಿರುವ ಹಿಂಸೆಯನ್ನು ವಿವರಿಸಿ, ಅಂತಹವರನ್ನು ಪ್ರಧಾನಿ ಫಾಲೋ ಮಾಡುತ್ತಿರುವವರ ಬಗ್ಗೆ ಆತಂಕ ವ್ಯಕ್ತ ಪಡಿಸಿದ್ದು ನೆನಪಿಸುವಂತಿತ್ತು.

ಹಾಗೆಯೇ ಮುಖ್ಯಮಂತ್ರಿ ಆದಿತ್ಯನಾಥ್‌ರವರು ಎಲ್ಲಾ ಧರ್ಮೀಯರು ಒಳಗೊಂಡಿರುವ ಉತ್ತರ ಪ್ರದೇಶದಲ್ಲಿ ಮುಖ್ಯಮಂತ್ರಿಎಂಬುದನ್ನು ಮರೆತು ಕೇವಲ ಒಂದು ಧರ್ಮ ಅಥವಾ ವೈಯುಕ್ತಿಕ ಆಚರಣೆಗಳನ್ನು ಸಾರ್ವಜನಿಕಗೊಳಿಸಿ, ತಮ್ಮ ವೈಯುಕ್ತಿಕ ನಂಬಿಕೆಗಳನ್ನು ವೈಭವೀಕರಣ ಮಾಡುವ ಬಗ್ಗೆ ಟೀಕೆಯಂತಿತ್ತು ಅವರ ಮಾತು. ಅಲ್ಲಿಯೂ ಇಬ್ಬರನ್ನು ಅವಹೇಳನ ಮಾಡುವ, ಯಾವ ಅಂಶಗಳೂ ಇರಲಿಲ್ಲ. ಸಾಮಾಜಿಕ ಹೊಣೆಗಾರಿಕೆ ಇರುವ, ಸಂವಿಧಾನದ ಆಶಯಗಳು, ದೇಶದ ಪರಂಪರೆಯ ಬಗ್ಗೆ ಕಾಳಜಿ ಇರುವವರಿಗೆ ಅದನ್ನು ನೆನಪಿಸುವ ತೀಕ್ಷ್ಣ ಮಾತುಗಳಿದ್ದವು. ಇಂತಹ ಕನಿಷ್ಠ ಟೀಕೆಯನ್ನು ಸಹಿಸದ ಮೋದಿ, ಯೋಗಿ ಮತ್ತು ಅವರ ಅನ್ಯ ನಿಂದಕ ಭಕ್ತರು ಪ್ರಜಾಪ್ರಭುತ್ವದ ಅಭಿವ್ಯಕ್ತಿ ಸ್ವಾತಂತ್ರ್ಯದ ಮೂಲಭೂತ ಹಕ್ಕುಗಳನ್ನೇ ನಾಶಗೊಳಿಸುವ ಸನ್ನಾಹದಲ್ಲಿ ಇರುವುದು ಅಪಾಯಕರ. ಈ ಸಾಮಾಜಿಕ ಜಾಲದ 'ಪುಂಡರ ಗೂಂಡಾ ಪಡೆ'ಯನ್ನು ನಿಯಂತ್ರಿಸುವ ವಿವೇಕವೂ ಪ್ರಧಾನಿಗೆ, ಸಂಘ ಪರಿವಾರಕ್ಕೆ ಇಲ್ಲವೆಂದರೆ ಅದಕ್ಕೆ ಏನು ಹೇಳಬೇಕು? ಬದಲಾಗಿ ಪ್ರೋತ್ಸಾಹಿಸುತ್ತಾ ಕೂತರೆ? ಪ್ರಧಾನಿಗಳು ಇಷ್ಟಾದರೂ ಕಣ್ಣು ಮುಚ್ಚಿಕೊಂಡು ಆತ್ಮ ಸಂತುಷ್ಟಿ ಭಾಷಣ ಹೊಡೆಯುತ್ತಿರುವ ಬೇಜವಾಬ್ದಾರಿತನ ಮತ್ತು ಸರ್ವಾಧಿಕಾರತ್ವವು ಏನನ್ನು ಸೂಚಿಸುತ್ತದೆ?

ಪ್ರಕಾಶ ರೈ ಮಾತನಾಡಿದ ದಿನ ಯಾರೂ, ಯಾವ ಮಾಧ್ಯಮಗಳಿಗೂ ಅವರಾಡಿದ್ದು ತಪ್ಪು ಎಂದು ಅನ್ನಿಸದೇ, ಮರು ದಿನ ಹಿಂದಿ–ಇಂಗ್ಲೀಷ್ ನ್ಯಾಷನಲ್ ಚಾನೆಲ್‌ಗಳಲ್ಲಿ ಮೊಸರಲ್ಲಿ ಕಲ್ಲು ಹುಡುಕಿ ಖ್ಯಾತೆ ತೆಗೆದದ್ದು ಯಾಕೆ? ಅವುಗಳ ಉಗುಳನ್ನೇ ಪ್ರಸಾದ ಎಂದು ತೆಗೆದುಕೊಂಡು ಕರ್ನಾಟಕದಲ್ಲಿಯೂ ಎರಚತೊಡಗಿದ್ದು ಯಾಕೆ? ವಿಶೇಷವಾಗಿ ಸಂಸದನೆಂಬ ಜನಪ್ರತಿನಿಧಿ ಸ್ಥಾನದ ಮಹತ್ವವೇ ಅರಿಯದ, ಪತ್ರಕರ್ತನ ಸೋಗಿನಲ್ಲಿದ್ದ ಪ್ರತಾಪಸಿಂಹ, ಯದ್ವಾತದ್ವಾ ನರಿಯಂತೆ ಕೂಗಿ ಕೂಗಿ ಅತ್ತಿದ್ದೇಕೆ? ಹೋಗಲಿ ಅವರ ಮಾತಿನಲ್ಲಿ ಸಭ್ಯತೆ, ಅಭಿವ್ಯಕ್ತಿಯಲ್ಲಿ ಕನಿಷ್ಠ ಸೌಜನ್ಯ, ಸಂಸ್ಕೃತಿಯೂ ಇಲ್ಲದೇ, 'ಬೀದಿ ರೌಡಿ'ಯಂತೆ ಅಸಹ್ಯಕರವಾಗಿ, ಅಸಭ್ಯವಾಗಿ ರೈ ಯವರ ವೈಯಕ್ತಿಕ ವಿಚಾರಗಳನ್ನು ವಿಕೃತಗೊಳಿಸಿ ಮಾತನಾಡಿದ್ದು ಕೀಳುತನ. ಅದೂ ತನ್ನದೇ ಹತ್ತಾರು ಹಗರಣಗಳ ರಾಶಿಯೇ ಇರುವಾಗ. ಅಂದರೆ ವಿಮರ್ಶೆಯನ್ನು ತಾತ್ವಿಕವಾಗಿ ಎದುರಿಸಲಾಗದ ದಿವಾಳಿತನ!

ಅದೇ ರೀತಿಯಲ್ಲಿ ಶೋಭಾ ಕರಂದ್ಲಾಜೆ, ಯಡಿಯೂರಪ್ಪ, ಸುರೇಶ್‌ಕುಮಾರ್ ಇತ್ಯಾದಿಗಳೂ ಮಾತನಾಡಿದ್ದು ಬಿಜೆಪಿ–ಸಂಘ ಪರಿವಾರ ಅಸಹಿಷ್ಣುತೆ, ಪ್ರಜಾಪ್ರಭುತ್ವ ವಿರೋಧಿ, ಸರ್ವಾಧಿಕಾರದ ಆರಾಧನೆಯನ್ನು ಎತ್ತಿ ತೋರಿಸಿತು. ಮಾತ್ರವಲ್ಲ, ಕೇಶವ ಕೃಪೆಯನ್ನ ಗಳಿಸಲು ತಮ್ಮ ಸ್ಥಾನ ಭದ್ರ ಪಡಿಸಿಕೊಳ್ಳುವ ಸ್ಪರ್ಧೆಯಂತಿತ್ತೂ ಕೂಡ. ನಮ್ಮ ಬಹಳಷ್ಟು ಮಾಧ್ಯಮಗಳು ಸಹ ವಸ್ತು ಸತ್ಯವನ್ನು ವಿವರಿಸದೇ ಡಾ.ಎಂಎಂ ಕಲಬುರಗಿ, ಅನಂತಮೂರ್ತಿ, ಭಗವಾನ್, ಗೌರಿಯಂತಹವರ ಹೇಳಿಕೆಗಳನ್ನು ವಿಕೃತಗೊಳಿಸಿ ಪ್ರಚಾರಿಸಿ ಕೊಲೆಗಡುಕರಿಗೆ ಪೂರ್ವೋಪಾದಿ ಮನೋಭೂಮಿಕೆ ಸೃಷ್ಟಿಸಲು ಕಾರಣವಾಗಿದ್ದು ಅಪಾಯಕಾರಿಯಾಗಿದೆ.

ಬಿಜೆಪಿ ನಾಯಕರು ರೈ ಯವರ ವಿಚಾರಗಳ ತೇಜೋವಧೆಗೆ ಎತ್ತಿದ ಪ್ರಶ್ನೆಗಳೂ ಬಾಲಿಶ:. ಕಾವೇರಿ ನೀರಿನ ಹಂಚಿಕೆ ಸಂದರ್ಭದಲ್ಲಿ ಯಾಕೆ ಏನೂ ಹೇಳಲಿಲ್ಲ? ಈಗೇಕೆ ಮಾತನಾಡುತ್ತಿದ್ದಾರೆ? ಪ್ರಚಾರದ ಹುಚ್ಚು, ಗಂಜಿ ಗ್ಯಾರಂಟಿ ವರಸೆ ಇತ್ಯಾದಿ. ಹೋಗಲಿ ಕಾವೇರಿ ನೀರಿನ ಹಂಚಿಕೆ ವಿವಾದದಲ್ಲಿ ಮೋದಿ ಮಾತನಾಡಿದರೇ? ಮಹದಾಯಿ ನೀರಿಗಾಗಿ ಹೋರಾಟ ಇಷ್ಟು ದೀರ್ಘವಾಗಿ ನಡೆಯುತ್ತಿದ್ದರೂ ಪ್ರಧಾನಿ ತುಟಿ ಬಿಚ್ಚದೇ 'ಮೌನಿ ಬಾಬಾ' ಆಗಿರುವುದು ಯಾಕೆ? ಸಂವಿಧಾನಾತ್ಮಕ ಕರ್ತವ್ಯ ನಿರ್ವಹಿಸದೇ 'ಮಂಕಿ ಬಾತ್'ಗಳಲ್ಲಿ ರಂಜಿಸುವುದೇಕೆ?

ಈ ಪ್ರಕರಣವನ್ನು ವಿವಾದವಾಗಿಸಿದ ಬಿಜೆಪಿ – ಸಂಘ ಪರಿವಾರ ಒಂದೆಡೆ, ಈಗ ಉತ್ತರ ಪ್ರದೇಶದಲ್ಲಿ ಲಕ್ನೋ ಕೋರ್ಟ್ ಮೂಲಕ ಎಫ್‌ಐಆರ್ ದಾಖಲಿಸುತ್ತಿದೆ! ವಿಚಿತ್ರ ಎಂದರೆ ಈ ಕ್ರಮ ವಹಿಸುವಾಗ ನ್ಯಾಯಾಲಯವು ರೈ ಯವರ ಮಾತುಗಳನ್ನು ಆಧರಿಸಿ ಸಂವಿಧಾನ, ಕಾನೂನು ರೀತ್ಯ ಪರಿಶೀಲಿಸಿ ಕ್ರಮ ವಹಿಸಿದೆಯೆ ಎಂಬುದು ಪರಿಶೀಲನಾರ್ಹ. ಅವರ ಮಾತುಗಳಲ್ಲಿ ಕಾನೂನು ಕ್ರಮ ವಹಿಸುವ ದಂಡನೀಯ ಯಾವ ಅಂಶಗಳು ಇಲ್ಲ. ಅಂದರೆ ಇಂತಹ ಕ್ರಮಗಳು ಯಾವ ಮೌಲ್ಯ, ಯಾವಶಕ್ತಿಗಳನ್ನು ಪ್ರೋತ್ಸಾಹಿಸುತ್ತವೆ.

ಎಲ್ಲವನ್ನೂ ನೋಡಿದರೆ ಇಡೀ ಸಮಾಜದೊಳಗೆ, ನಮ್ಮ ದೇಶದಲ್ಲಿ ಕನಿಷ್ಠ ಪ್ರಜಾಸತ್ತಾತ್ಮಕ, ನಾಗರೀಕ ವಾತಾವರಣವನ್ನು, ಹಂತ–ಹಂತವಾಗಿ ದ್ವೇಷದ ಬೆಂಕಿಗೆ ದೂಡುತ್ತಿರುವುದು ಸ್ಪಷ್ಟ.

ಭಾರತ ದೇಶವನ್ನು, ಸಂಪತ್ತನ್ನು, ನಾಗರೀಕರನ್ನು ದೋಚುವ, ಜನ ಪೀಡಕ ಪ್ರಭುತ್ವ ಹೆಚ್ಚು, ಹೆಚ್ಚು ಸರ್ವಾಧಿಕಾರಿಯಾಗುತ್ತಿರುವುದು ಮತ್ತೇ ಮತ್ತೇ ಎದ್ದು ಕಾಣುತ್ತಿದೆ. ಇಂತಹ ಯತ್ನಗಳು, ಶಕ್ತಿಗಳ ವಿರುದ್ಧ ಪ್ರತಿರೋಧ ಬೆಳೆಯಲೇಬೇಕಿದೆ.

ಸಾಮಾಜಿಕ ಜಾಲ ತಾಣದಂತಹ ಸಶಕ್ತ ಮಾಧ್ಯಮವನ್ನು ಇಂತಹ ವಿದ್ವೇಷ, ಹಿಂಸೆ, ನಿಂದನೆಗಳಿಗಾಗಿ ಕೆಲವರು ಬಳಸುತ್ತಿರುವುದರ ಬಗ್ಗೆ ಫೇಸ್‌ಬುಕ್ ನ ಸಂಸ್ಥಾಪಕ, ಮಾಲೀಕ ಜುಗರ್ ಬರ್ಗ್ ಅತ್ಯಂತ ವಿಷಾಧದಿಂದ, ಮಾತನಾಡಿದ್ದಾರೆ. ಜನತೆಯ ಕ್ಷಮೆಯನ್ನು ಕೋರಿದ್ದಾರೆ. 'ಜನತೆಯನ್ನು ಒಂದುಗೂಡಿಸಿ, ಸ್ನೇಹ, ಸೌಹಾರ್ದ ಬೆಸೆಯುವ ಆಶಯದಿಂದ ಆರಂಭಿಸಿದ ಈ ಮಾಧ್ಯಮ ವೇದಿಕೆ ಎಂತಹ ದುರ್ಬಳಕೆಗೆ ಒಳಗಾಗುತ್ತಿದೆ' ಎಂದು ನೊಂದಿದ್ದಾರೆ.


ಆದರೆ ಇಂತಹ ಯಾವ ಭಾವನೆ–ಅಭಿಪ್ರಾಯಗಳೂ ವಿಷ ಹಂಚುವ ಪುಂಡರ ತಂಡಕ್ಕೆ ಬೇಕಾಗಿಲ್ಲ. ಹಾಗಾಗಿ ದೇಶದ ಮಟ್ಟದಲ್ಲಿದ್ದ 'ಪೋಸ್ಟ್ ಕಾರ್ಡ್' ಎಂಬ ವೆಬ್‌ಸೈಟ್ ಇದೀಗ ಕನ್ನಡದಲ್ಲಿಯೂ ಅದರ ಆವೃತ್ತಿ ಆರಂಭಿಸಿದೆ. ಬರೀ ಸುಳ್ಳು ಮಾಹಿತಿಗಳನ್ನು ಹೆಣೆಯುವುದು. ಮಾಹಿತಿಗಳನ್ನು ವಿಕೃತಗೊಳಿಸುವುದು ಅದರ ಉದ್ದೇಶ.

ಮೋದಿ, ಸಂಘ ಪರಿವಾರದ ನೀತಿ ತಂತ್ರಗಳನ್ನು ವಿರೋಧಿಸಿದರೆ, ಪ್ರಗತಿಪರ, ಪ್ರಜಾಪ್ರಭುತ್ವೀಯ ಮೌಲ್ಯಗಳನ್ನು ಪ್ರತಿಪಾದಿಸಿದರೆ ಅಂತಹವರ ವಿರುದ್ಧ ಅವಹೇಳನಕಾರಿ, ವಿಧ್ವಂಸಕ ವಾಕ್ ಧಾಳಿಗಳನ್ನು ಸಿದ್ಧಗೊಳಿಸಿ ಹಂಚುವುದು ಅದರ ಕೆಲಸ. ಇಂತಹ ಹತ್ತಾರು 'ಫೇಕ್' ಸೈಟ್‌ಗಳನ್ನು ಚಾಲನೆಗೆ ತಂದು ಸಾವಿರಾರು ಜನರನ್ನು ಇದಕ್ಕಾಗಿ ತೊಡಗಿಸಲಾಗಿದೆ. ಇದಕ್ಕೆ ಸಾವಿರಾರು ಕೋಟಿಗಳ ಹಣವನ್ನು ಹೂಡಲಾಗಿದೆ. ನಿಜಕ್ಕೂ ಈ ತಂಡ ಪ್ರಗತಿಪರರನ್ನು ಟೀಕಿಸುವುದಕ್ಕೆ ಸುಲಭವಾಗಿ ಅವಹೇಳನಕ್ಕೆ ಬಳಸುವ 'ಗಂಜಿಕೇಂದ್ರ' ಎಂಬುದಕ್ಕೆ ಅವರೇ ಪಕ್ಕಾ ನಿದರ್ಶನ.

ಬಿಜೆಪಿ ಹೇಗಾದರೂ ರಾಜ್ಯದಲಿ ಅಧಿಕಾರ ಹಿಡಿಯಬೇಕು ಎಂದು ಶತಾಯುಗತಾಯು ಯತ್ನಿಸುತ್ತಿರುವಾಗ, ಕೇರಳ, ತ್ರಿಪುರಾ ರಾಜ್ಯಗಳಲ್ಲಿ ಮತ್ತು ದೇಶದಲ್ಲಿ ಎಡ ಪಂಥೀಯ ಶಕ್ತಿಗಳನ್ನು ವಿಧ್ವಂಸಗೊಳಿಸಿ, ಸಾಮಾಜಿಕ ನ್ಯಾಯ, ದುಡಿಯುವ ಜನರ ಹಕ್ಕು, ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ನಾಶಪಡಿಸುವ ಹುನ್ನಾರಗಳ ಹಿನ್ನೆಲೆಯಲ್ಲಿ 'ಪೋಸ್ಟ್ ಕಾರ್ಡ್ ಕನ್ನಡ' ವೆಬ್ ಸೈಟ್ ಆರಂಭಗೊಂಡಿರುವುದನ್ನು ಗಮನಿಸಬೇಕು.

ಒಂದು ಆಶಾದಾಯಕ ಸ್ಥಿತಿಯೆಂದರೆ ಇಂತಹ ಎಲ್ಲಾ ಧಾಳಿಗಳ ಎದುರು ವಿಚಲಿತರಾಗದೇ ಪ್ರತಿರೋಧದ ಶಕ್ತಿಯಾಗಿ ನಾಡಿನ ಪ್ರಗತಿಪರರು, ಜೀವಪರ ಶಕ್ತಿಗಳು ನಿಂತಿರುವುದು ವಿಶೇಷವಾಗಿ ಸಂಘ ಪರಿವಾರದ ದುಂಡಾವರ್ತನೆಗೆ ಸೊಪ್ಪು ಹಾಕದೇ ತನ್ನ ಅಭಿಪ್ರಾಯ ಹೇಳಿಯೇ ತೀರುವೆ ಎಂದು ದೃಢ ಸಂಕಲ್ಪ ಪ್ರಕಟಿಸಿರುವ ಪ್ರಕಾಶ ರೈ ಅಭಿನಂದನಾರ್ಹರು. ಹಾಗೇ ಅವರೊಂದಿಗೇ, ಅವರ ದನಿಯಲ್ಲಿ ನಮ್ಮ ದನಿ ಎಂದು ನಾಡಿನಾದ್ಯಂತ ಎದ್ದು ನಿಂತ ಎಲ್ಲಾ ಜೀವಂತ ಶಕ್ತಿಗಳೂ ಅಭಿನಂದನಾರ್ಹ. ಈ ಹೋರಾಟ ಮತ್ತಷ್ಟು ವಿಸ್ತಾರಗೊಳ್ಳಲೇಬೇಕು.

‘ಎನ್‌ಕೌಂಟರ್ ರಾಜಕಾರಣ’ದ ಸ್ಪೆಷಲಿಸ್ಟ್ ಅಮಿತ್ ಷಾ ರವರ ಅಸಹ್ಯ ರಾಜಕಾರಣ



ಸಿಪಿಐ(ಎಂ) ಕೇಂದ್ರ ಕಚೇರಿ ಎ.ಕೆ.ಗೋಪಾಲನ್ ಭವನದ ಮುಂದೆ ಅಕ್ಟೋಬರ್ 16ರ ವರೆಗೆ ಪ್ರತಿಭಟನೆಗಳನ್ನು ನಡೆಸುವಂತೆ ಅಮಿತ್ ಷಾ ಬಿಜೆಪಿ ಕಾರ್ಯಕರ್ತರಿಗೆ ಕರೆ ನೀಡಿದ್ದಾರೆ. ಎಲ್ಲಾ ರಾಜ್ಯ ರಾಜಧಾನಿಗಳಲ್ಲಿ ಬಿಜೆಪಿ ಯುವ ವಿಭಾಗ ಪ್ರತಿಭಟನೆಗಳನ್ನು ನಡೆಸಲಿದೆ ಎಂದೂ ಅವರು ಪ್ರಕಟಿಸಿದ್ದಾರೆ. ದೇಶದ ಆಳುವ ಪಕ್ಷವು ಪ್ರತಿದಿನವೂ ರಾಷ್ಟ್ರೀಯ ರಾಜಕೀಯ ಪಕ್ಷವೊಂದರ ಕಚೇರಿಯ ಹೊರಗೆ ಪ್ರತಿಭಟನೆಗಳನ್ನು ಸಂಘಟಿಸುತ್ತಿರುವುದು ಅಮಿತ್ ಷಾ ಪರಿಚಯಿಸಿರುವ ಕೀಳು ಮಟ್ಟದ ರಾಜಕಾರಣದ ಬಗ್ಗೆ ಎಲ್ಲವನ್ನೂ ಹೇಳುತ್ತದೆ.



*** ಪ್ರಕಾಶ್ ಕಾರಟ್**

ಬಿಜೆಪಿ ಅಧ್ಯಕ್ಷ ಅಮಿತ್ ಷಾ. ಆಧಾರರಹಿತ ಆರೋಪಗಳನ್ನು ಮಾಡುವ ಮೂಲಕ ಪಕ್ಷದ ಸಿಪಿಐ (ಎಂ) ವಿರುದ್ಧ ಹಿಂಸೆಯನ್ನು ಪ್ರಚೋದಿಸುವ ಅಪಾಯಕಾರಿ ಹಾದಿಯನ್ನು ಹಿಡಿದಿದ್ದಾರೆ

ಷಾ ಕಣ್ಣೂರು ಜಿಲ್ಲೆ ಪಯ್ಯನೂರಿನಿಂದ ಬಿಜೆಪಿಯ ‘ಯಾತ್ರೆ’ಗೆ ಚಾಲನೆ ನೀಡಿದ್ದಾರೆ. ಯಾತ್ರೆಯ ಉದ್ಘಾಟನೆ ಭಾಷಣದಲ್ಲಿ ‘ಕೆಂಪು ಭಯೋತ್ಪಾದನೆ’ ಎಂಬ ಅದೇ ಹಳಸಲು ಆರೋಪವನ್ನು ಮಾಡಿದ್ದಾರೆ. ಆದರೆ, ‘ಬಿಜೆಪಿ–ಆರ್‌ಎಸ್‌ಎಸ್ ಕಾರ್ಯಕರ್ತರ ಹತ್ಯೆಗಳಿಗೆ’ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಕಾರಣ ಎಂದು ಅವರು ಹೇಳಿರುವುದು ಈ ಭಾಷಣದ ಹೊಸ ವಿಷಯವಾಗಿದೆ.

ಕೇರಳದಲ್ಲಿ ಸಿಪಿಐ (ಎಂ) ವಿರುದ್ಧ ಆರ್‌ಎಸ್‌ಎಸ್ ಹಿಂಸಾಚಾರ ನಡೆದಿರುವುದು ಪ್ರಸಕ್ತ ಎಲ್‌ಡಿಎಫ್ ಸರಕಾರದ ಅವಧಿಯಲ್ಲಿ ಮಾತ್ರವೇ ಅಲ್ಲ. 1990ರ ದಶಕದಲ್ಲಿ ಇ.ಕೆ. ನಾಯನಾರ್ ಹಾಗೂ ಅದಾಗಿ ಒಂದು ದಶಕದ ನಂತರ ವಿ.ಎಸ್. ಅಚ್ಯುತಾನಂದನ್ ನೇತೃತ್ವದ ಎಲ್‌ಡಿಎಫ್ ಸರಕಾರಗಳಿದ್ದಾಗಲೂ ಆರ್‌ಎಸ್‌ಎಸ್ ಹಿಂಸಾಚಾರ ನಡೆದಿತ್ತು. ವಾಸ್ತವವಾಗಿ ಆರ್‌ಎಸ್‌ಎಸ್ ದಾಳಿಗಳಿಗೆ 45 ವರ್ಷಗಳ ಇತಿಹಾಸವೇ ಇದೆ. ಅದು ಕಣ್ಣೂರಿನಲ್ಲಿ ಆಳವಾದ ಬೇರು ಹೊಂದಿರುವ ದುಡಿಯುವ ವರ್ಗದ ಪ್ರಬಲ ಹೋರಾಟ ಮೇಲೆದ್ದು ಬರುತ್ತಿರುವುದಕ್ಕೆ ಒಂದು ಬಲ ಪ್ರತಿಗಾಮಿ, ಫ್ಯಾಸಿಸ್ಟ್ ಶಕ್ತಿಯ ಪ್ರತಿಕ್ರಿಯೆ ಆಗಿದೆ.

ಅಧಿಕಾರದ ಮದ ತುಂಬಿರುವ ಅಮಿತ್ ಷಾ, ಕೆಂಪು ಭಯೋತ್ಪಾದನೆಯ ಸುಳ್ಳು ಬಾವುಟ ಹಿಡಿದುಕೊಂಡು ಕೇರಳದಲ್ಲಿ ಸಂಘ ಪರಿವಾರದ ರಾಜಕೀಯವನ್ನು ನುಗ್ಗಿಸಬಹುದು ಎಂದು ಭಾವಿಸಿದ್ದಾರೆ. ಇದೇ ಕೇರಳದಲ್ಲಿ ಸಿಪಿಐ (ಎಂ) ಮತ್ತು ಎಡ ಪಕ್ಷಗಳನ್ನು ರಾಜಕೀಯವಾಗಿ ಎದುರಿಸುವಲ್ಲಿ ಬಿಜೆಪಿ–ಆರ್‌ಎಸ್‌ಎಸ್ ಕೂಟ ಅಸಮರ್ಥ ಎನ್ನುವುದನ್ನು ಎತ್ತಿ ತೋರಿಸುತ್ತದೆ. ಬಿಜೆಪಿ ಪ್ರತಿಗಾಮಿ ಆರ್ಥಿಕ ನೀತಿಗಳು ಮತ್ತು ವಿಭಜನಕಾರಿ ಕೋಮುವಾದಿ ಕಾರ್ಯಸೂಚಿಗೆ ಪರ್ಯಾಯವೊಂದು ಇದೆ ಎನ್ನುವುದನ್ನು ಪಿಣರಾಯಿ ವಿಜಯನ್ ನೇತೃತ್ವದ ಎಲ್‌ಡಿಎಫ್ ಸರಕಾರ ಕಳೆದ 17 ತಿಂಗಳ ನಿರ್ವಹಣೆಯಿಂದ ತೋರಿಸಿಕೊಟ್ಟಿದೆ. ಕೇರಳದ ಉದ್ದಗಲದಲ್ಲಿ ಬಿಜೆಪಿ–ಆರೆಸ್ಸೆಸ್ ಸುಳ್ಳುಗಳನ್ನು ಪಸರಿಸಲು ಎಷ್ಟೇ ಯಾತ್ರೆ ಎಡ ಮತ್ತು ಜಾತ್ಯತೀತ ರಾಜಕೀಯದಲ್ಲಿ ಜನಗಳ ನಂಬಿಕೆಯನ್ನು ಅಲುಗಾಡಿಸಲಾರದು.

ಕೋಮುವಾದದ ಕೆಸರಿನಲ್ಲಿ (ಸ್ವತಃ ಷಾ ಮಾತಿನಲ್ಲಿ ಹೇಳುವುದಾದರೆ ಕೀಚಡ್ ನಲ್ಲಿ) ಬಿಜೆಪಿ ಕಮಲ ಅರಳುವುದೆಂದು ಅಮಿತ್ ಷಾ ಆಶಾಭಾವನೆ ಹೊಂದಿದ್ದಾರೆ. ಇದಕ್ಕಾಗಿ ಅವರು ಒಬ್ಬ ಉನ್ಮತ್ತ ಕೋಮುವಾದಿಯಾದ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥರನ್ನು ಯಾತ್ರೆಯಲ್ಲಿ ಭಾಗವಹಿಸಲು ಆಮದು ಮಾಡಿಕೊಂಡಿದ್ದಾರೆ. ಆದರೆ, ಕೇರಳದ ಸಮಾಜದಲ್ಲಿ ಇಂಥ ಕೆಸರು ನೆಲೆಯೂರಲು ಬಿಡುವುದಿಲ್ಲ ಎನ್ನುವುದನ್ನು ಎಡ ಮತ್ತು ಪ್ರಗತಿಪರ ಶಕ್ತಿಗಳ ನೇತೃತ್ವದಲ್ಲಿ ಕೇರಳದ ಜನರು ಖಾತರಿಪಡಿಸುತ್ತಾರೆ.

ಹತ್ಯೆಗಳಿಗೆ ಒಬ್ಬ ಚುನಾಯಿತ ಮುಖ್ಯಮಂತ್ರಿ ಹೊಣೆಗಾರರು ಎಂದು ಆರೋಪಿಸುವುದು ಅಮಿತ್ ಷಾ ಗಂತೂ ಸಾಧ್ಯವೇ ಆಗಬಾರದು. ಏಕೆಂದರೆ ಗುಜರಾತ್‌ನಲ್ಲಿ ಮೋದಿ ಸರಕಾರದಲ್ಲಿ ಗೃಹಮಂತ್ರಿ ಆಗಿದ್ದ ಷಾ ಅವರ ವಿರುದ್ಧ ಒಂದು ಹುಸಿ ಎಲ್‌ಕೌಂಟರ್‌ನ ಕೇಸ್ ದಾಖಲಾಗಿತ್ತು. ಸೊಹ್ರಾಬುದ್ದಿನ್ ಮತ್ತು ಆತನ ಪತ್ನಿ ಕೌಸರ್ ಬೀ ಅವರನ್ನು ಪೋಲೀಸರು ತಮ್ಮ ಕಾನೂನುಬಾಹಿರ ಕಸ್ಟಡಿಯಲ್ಲಿ ಕೊಂದ ಕೇಸ್ ಇದು. ಮುಂಬಯಿ ಹೈಕೋರ್ಟ್ ಅವರನ್ನು ಬಿಡುಗಡೆಗೊಳಿಸಿತ್ತು. ಆದರೆ ಗೃಹ ಸಚಿವನಾಗಿ ಆತ ತನ್ನ ಅಧಿಕಾರದ ಅವಧಿಯಲ್ಲಿ ಅನೇಕ ಹುಸಿ ಎನ್‌ಕೌಂಟರ್‌ಗಳು ನಡೆದಿರುವ ಕೊಳಕು ದಾಖಲೆ ಹೊಂದಿರುವಾತ. ಇದು ಅವರನ್ನು ಒಬ್ಬ ‘ಎನ್‌ಕೌಂಟರ್ ರಾಜಕೀಯ’ದ ಸ್ಪೆಷಲಿಸ್ಟ್‌ನನ್ನಾಗಿ ಮಾಡಿದೆ.

ಸಿಪಿಐ (ಎಂ) ಕೇಂದ್ರ ಕಚೇರಿ ಎ.ಕೆ.ಗೋಪಾಲನ್ ಭವನದ ಮುಂದೆ ಅಕ್ಟೋಬರ್ 16ರ ವರೆಗೆ ಪ್ರತಿಭಟನೆಗಳನ್ನು ನಡೆಸುವಂತೆ ಅಮಿತ್ ಷಾ ಬಿಜೆಪಿ ಕಾರ್ಯಕರ್ತರಿಗೆ ಕರೆ ನೀಡಿದ್ದಾರೆ. ಎಲ್ಲಾ ರಾಜ್ಯ ರಾಜಧಾನಿಗಳಲ್ಲಿ ಬಿಜೆಪಿ ಯುವ ವಿಭಾಗ ಪ್ರತಿಭಟನೆಗಳನ್ನು ನಡೆಸಲಿದೆ ಎಂದೂ ಅವರು ಪ್ರಕಟಿಸಿದ್ದಾರೆ. ದೇಶದ ಆಳುವ ಪಕ್ಷವು ಪ್ರತಿದಿನವೂ ರಾಷ್ಟ್ರೀಯ ರಾಜಕೀಯ ಪಕ್ಷವೊಂದರ ಕಚೇರಿಯ ಹೊರಗೆ ಪ್ರತಿಭಟನೆಗಳನ್ನು ಸಂಘಟಿಸುತ್ತಿರುವುದು ಅಮಿತ್ ಷಾ ಪರಿಚಯಿಸಿರುವ ಕೀಳು ಮಟ್ಟದ ರಾಜಕಾರಣದ ಬಗ್ಗೆ ಎಲ್ಲವನ್ನೂ ಹೇಳುತ್ತದೆ.

ಇಂಥ ದಮನಕಾರಿ ತಂತ್ರಗಳು ಸಿಪಿಐ (ಎಂ) ಮುಂದೆಯಂತೂ ಯಾವುದೇ ರೀತಿಯಲ್ಲಿ ನಡೆಯುವುದಿಲ್ಲ ಕೇರಳ ಮತ್ತು ತ್ರಿಪುರಾದಲ್ಲಿ ಎಡ ನೇತೃತ್ವದ ಸರಕಾರಗಳು ಹಾಗೂ ಸಿಪಿಐ (ಎಂ) ಹಿಂದೂತ್ವವಾದಿ ಕೋಮುವಾದಿ ಶಕ್ತಿಗಳಿಗೆ ಎದುರಾಗಿ ಸೆಣಸುವಲ್ಲಿ ಮುಂಚೂಣೀಯಲ್ಲಿವೆ. ಬಿಜೆಪಿಯ ವಿಚ್ಛಿದ್ರಕಾರಿ ರಾಜಕೀಯವನ್ನು ಎದುರಿಸಲು ಎಲ್ಲಾ ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಒಗ್ಗೂಡಿಸಲು ಮುಂದಿನ ದಿನಗಳಲ್ಲಿ ಪಕ್ಷ ತನ್ನ ಪ್ರಯತ್ನಗಳನ್ನು ತೀವ್ರಗೊಳಿಸಲಿದೆ.

ಅನು: ವಿಶ್ವ



ಅಮಿತ್ ಷಾ ‘ಜನರಕ್ಷಾ ಯಾತ್ರಾ’ದ ಉದ್ಘಾಟಬೆಯ ಹೆಸರಲ್ಲಿ ವಿಷ ಕಾರಲು ಶುರುಮಾಡುತ್ತಿದ್ದಂತೆ ಕೇರಳದಲ್ಲಿನ ಅವರ ಪಕ್ಷ ಕರೆ ತಂದ ಮಂದಿ ಕನ್ನೂರು ಜಿಲ್ಲೆಯ ಕರಿವೆಳ್ಳೂರು ಮತ್ತು ಚೆರುವತ್ತೂರಿನಲ್ಲಿ ತಮ್ಮ ಧಾಂಧಲೆ ಹರಿಯಬಿಟ್ಟರು. ಎಟಿಎಂಗಳನ್ನು ಪುಡಿ ಮಡಿದರು(ಮೇಲಿನ ಚಿತ್ರ), ಆಸ್ಪತ್ರೆಗಳ ಮತ್ತು ಟೆಲಿಫೋನ್ ಎಕ್ಸ್‌ಚೇಂಜ್‌ಗಳ ಮೇಲೆ ದಾಳ ಮಾಡಿದರು. ಚಾರಿತ್ರಿಕ ಕರಿವೆಳ್ಳೂರು ಹೋರಾಟದ ನೇತಾರ ಎ.ವಿ.ಕುಂಜಂಪು ಮನೆಯ ಮೇಲೆ ದಾಳಿ ನಡೆಸಲೂ ಪ್ರಯತ್ನಿಸಿದರು.

ಕೇರಳದಲ್ಲಿ ಆರೆಸ್ಸೆಸ್ ಹಿಂಸಾಚಾರದ ಇತಿಹಾಸ ಆರಂಭವಾದದ್ದೇ 45 ವರ್ಷಗಳ ಹಿಂದೆ ಕಣ್ಣೂರಿನಲ್ಲಿ ಆಳವಾದ ಬೇರು ಬಿಡಲಾರಂಭಿಸಿದ ದುಡಿಯುವ ವರ್ಗದ ಪ್ರಬಲ ಹೋರಾಟ ಮೇಲೆದ್ದು ಬರುತ್ತಿದ್ದಾಗ ಅದಕ್ಕೆ ಒಂದು ಬಲ ಪ್ರತಿಗಾಮಿ, ಫ್ಯಾಸಿಸ್ಟ್ ಶಕ್ತಿಯ ಪ್ರತಿಕ್ರಿಯೆ ಆಗಿ ಎಂಬುದನ್ನು ನೆನಪಿಸಿಕೊಳ್ಳಬೇಕು.



ರಾಷ್ಟ್ರೀಯ ಮಟ್ಟದಲ್ಲಿ ಮೋದಿ ಸರಕಾರದ ವಿಫಲತೆಯಿಂದ ಗಮನ ತಿರುಗಿಸುವ ಪ್ರಯತ್ನ ಅಕ್ಟೋಬರ್ 9ರಂದು ಸಿಪಿಐ(ಎಂ)ನಿಂದ ರಾಷ್ಟ್ರವ್ಯಾಪಿ ಪ್ರತಿಭಟನೆ–ಯೆಚುರಿ ಪ್ರಕಟಣೆ


ಜನಗಳು ಅಸಂತುಷ್ಟರಾಗಿದ್ದಾರೆ. ಮೋದಿ ಸರಕಾರ ರಾಷ್ಟ್ರೀಯ ಮಟ್ಟದಲ್ಲಿ ವಿಫಲವಾಗಿದೆ. ಕೇರಳ ಮತ್ತು ಪಶ್ಚಿಮ ಬಂಗಾಲದ ಜನತೆ ಅವರನ್ನು ತಿರಸ್ಕರಿಸಿದ್ದಾರೆ. ಅವರ ಆಳ್ವಿಕೆಯ ಕ್ಷಣಗಣನೆ ಆರಂಭವಾಗಿದೆ. ಆದ್ದರಿಂದ ಅವರು ಜನಗಳನ್ನು ವಿಭಜಿಸಲು ಹಿಂಸಾಚಾರ ಮತ್ತು ಕೋಮುದ್ವೇಷವನ್ನು ಉಪಕರಣಗಳಾಗಿ ಬಳಸುತ್ತಿದ್ದಾರೆ. ಇದು ದೀರ್ಘಕಾಲದಿಂದ ಅವರ ಕೆಲಸದ ವಿಧಾನವೇ ಆಗಿದೆ.

ಹೀಗೆಂದು ಕೇರಳದಲ್ಲಿ ಬಿಜೆಪಿಯ ‘ಜನರಕ್ಷಾ ಯಾತ್ರ’ದ ಉದ್ಘಾಟನೆಯಲ್ಲಿ ಬಿಜೆಪಿ ಅಧ್ಯಕ್ಷರ ಆಪಾದನೆಗಳಿಗೆ ಪ್ರತ್ಯುತ್ತರ ನೀಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಹೇಳಿದ್ದಾರೆ. ಇದಕ್ಕೆ ಎದುರಾಗಿ ಸಿಪಿಐ(ಎಂ) ಅಕ್ಟೋಬರ್ 9ರಂದು ಒಂದು ರಾಷ್ಟ್ರವ್ಯಾಪಿ ಪ್ರತಿಭಟನೆಯನ್ನು ಸಂಘಟಿಸುತ್ತದೆ ಎಂದು ಅವರು ಪ್ರಕಟಿಸಿದ್ದಾರೆ. ಸಿಪಿಐ(ಎಂ) ಹಾಗೂ ಕೇರಳ ಮತ್ತು ಪಶ್ಚಿಮ ಬಂಗಾಲದ ಜನತೆ ಬಿಜೆಪಿಯ ಚಟುವಟಿಕೆಗಳಿಗೆ ತಕ್ಕ ಉತ್ತರ ನೀಡುತ್ತಾರೆ ಎಂದು ಅವರು ಹೇಳಿದ್ದಾರೆ.

ಬಿಜೆಪಿ ಅಧ್ಯಕ್ಷರು ‘ಯಾತ್ರೆ’ ಬಿಟ್ಟು ದಿಲ್ಲಿಗೆ ಧಾವಿಸಿದ್ದೇಕೆ?

ಈ ನಡುವೆ ಬಿಜೆಪಿ ಅಧ್ಯಕ್ಷರು ಮೂರನೇ ದಿನವೇ ‘ಯಾತ್ರೆ’ ಬಿಟ್ಟು, ಬಹಳ ಪ್ರಚಾರ ಮಾಡಿದ ಕೇರಳ ಮುಖ್ಯಮಂತ್ರಿಗಳ ತವರೂರಿನಲ್ಲಿ ತಮ್ಮ ಪಾದಯಾತ್ರೆಯ ಯೋಜನೆಯನ್ನು ಕೈಬಿಟ್ಟು ದಿಲ್ಲಿಗೆ ಧಾವಿಸಿದ್ದಾರೆ ಎಂದು ವರದಿಯಾಗಿದೆ. ದೇಶದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಚರ್ಚಿಸಲು ಅವರನ್ನು ಪ್ರಧಾನ ಮಂತ್ರಿಗಳು ಕರೆಸಿಕೊಂಡಿದ್ದಾರೆ ಎಂದು ಹೇಳಲಾಗಿದೆ.

ದೇಶದ ಆರ್ಥಿಕಕ್ಕೆ ಏನೂ ಆಗಿಲ್ಲ, ಜಿಡಿಪಿ ಇತ್ಯಾದಿ ಅರ್ಥಿಕ ಸೂಚ್ಯಂಕಗಳು ಕುಸಿತ ತೋರಿಸುತ್ತಿದ್ದರೆ ಅವು ಕೇವಲ ‘ತಾಂತ್ರಿಕ’ ಕಾರಣಗಳಿಂದಾಗಿ ಎಂದು ಹೇಳಿದ್ದ ಬಿಜೆಪಿ ಅಧ್ಯಕ್ಷರನ್ನು ಎರಡು ದಿನಗಳ ಹಿಂದೆಯಷ್ಟೇ ಒಂದು ತ್ರೈಮಾಸಿಕದಲ್ಲೇನೋ ಹಿನ್ನಡೆಯಾಗಿದೆ, ಅದಕ್ಕಾಗಿ ಅನಗತ್ಯವಾಗಿ ಗುಲ್ಲೆಬ್ಬಿಸಲಾಗುತ್ತಿದೆ ಎಂದ ಪ್ರಧಾನ ಮಂತ್ರಿಗಳು ‘ಯಾತ್ರೆ’ಯನ್ನು ಬಿಟ್ಟು ಧಾವಿಸಿ ಬರಲು ಹೇಳಿದ್ದಾರೆಂದರೆ ಏನು ಅರ್ಥ? ಸೀತಾರಾಮ್ ಯೆಚುರಿಯವರು ಹೇಳಿರುವಂತೆ ಇಂತಹ ‘ಯಾತ್ರೆ’ಯ ಮೂಲಕ ಜನಗಳ ಗಮನ ಬೇರೆಡೆಗೆ ಸೆಳೆಯುವುದು, ಸಾಧ್ಯವಿಲ್ಲ ಎಂದೇ?



ವ್ಯಂಗ್ಯಚಿತ್ರ: ಸಂದೀಪ್ ಅದ್ವರ್ಯು, ಟೈಂಸ್ ಆಫ್ ಇಂಡಿಯ

ಉದ್ಯೋಗ ಅಭಿವೃದ್ಧಿ ಸಾಮರಸ್ಯಕ್ಕಾಗಿ ನಡೆದ ಡಿವೈಎಫ್ಐ ನ 11 ನೇ ರಾಜ್ಯ ಸಮ್ಮೇಳನ

ಗೌರಿಯನ್ನು ಕೊಂದವರು ಯಾರೆಂಬುದು ಗೊತ್ತಿಲ್ಲದಿರಬಹುದು, ಆದರೆ ಗೌರಿ ಸಾವನ್ನು ಸಂಭ್ರಮಿಸುತ್ತಿರುವವರು ಯಾರೆಂಬುದು ಕಾಣುತ್ತಿದೆ : ಪ್ರಕಾಶ್ ರೈ.

ಬಸವರಾಜ ಪೂಜಾರ

ಆಕ್ಟೋಬರ್ 1 ರಿಂದ 3 ರಂದು ಮೂರು ದಿನಗಳ ಕಾಲ ಬೆಂಗಳೂರಿನ ಅರಮನೆ ರಸ್ತೆಯಲ್ಲಿರುವ ಸೌಟ್ ಗೈಡ್ ಭವನದಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಡಿವೈಎಫ್ಐ ನ 11 ನೆ ರಾಜ್ಯ ಸಮ್ಮೇಳನ ನಡೆದು ರಾಜ್ಯದ ಯುವಜನರ ಗಂಭೀರ ಸಮಸ್ಯೆಗಳ ಪರಿಹಾರಕ್ಕಾಗಿ ಹಾಗೂ ನಾಡಿನ ಸೌಹಾರ್ದ ಪರಂಪರೆ ಉಳಿಸಿ ಗಟ್ಟಿಗೊಳಿಸಲು ಮುಂದಾಗುವುದಾಗುವುದಾಗಿ ಘೋಷಿಸಿದೆ. ಈ ಕುರಿತ ವರದಿ.









ಗೌರಿ ನನ್ನ ಆತ್ಮೀಯ ಗೆಳತಿ. ಗೌರಿಯನ್ನು ಕೊಂದವರು ಯಾರು ಎಂಬುದು ಗೊತ್ತಿಲ್ಲದಿರಬಹುದು. ಆದರೆ ಗೌರಿಯ ಸಾವನ್ನು ಸಂಭ್ರಮಿಸುತ್ತಿರುವವರು ಯಾರು ಎಂಬುದು ಗೊತ್ತಿದೆ. ಅದು ನಮ್ಮೆಲ್ಲರ ಕಣ್ಣಿಗೆ ಕಾಣುತ್ತಿದೆ. ಇವತ್ತು ಪ್ರಕಾಶ್ ರೈ ಪ್ರತಿಭಟನೆಗಳು, ಮೆರವಣಿಗೆ ಎಲ್ಲ ಕಡೆಗಳಲ್ಲಿ ಕಾಣಿಸಿಕೊಳ್ಳುತಿದ್ದಾನೆ. ಇದರಿಂದ ಇಷ್ಟು ವರ್ಷದ ಅನುಭವದಲ್ಲಿ ನಾನು ಎಂದೂ ಕೇಳಿರದಂತಹ ಕೆಟ್ಟ ಭಾಷೆಯ ಬಯ್ಗುಳವನ್ನು ನನ್ನ ಬಗ್ಗೆ ನೋಡುತ್ತಿದ್ದೇನೆ. ಜಾಲತಾಣಗಳಲ್ಲಿ ಅಡಗಿರುವ ಕ್ರೌರ್ಯ ದಾರುಣವಾದದ್ದು. ದೇಶದ ಪ್ರಧಾನ ಮಂತ್ರಿಗಳಾದವರು ಇಂಥವರನ್ನು ಟ್ವೀಟರ್ ಮುಂತಾದವುಗಳಲ್ಲಿ ಫಾಲೋ ಮಾಡುತ್ತಾರೆ. ಈ ಬಗೆಗೆ ಏನೂ ಆಗದವರಂತೆ ಕಣ್ಣು ಮುಚ್ಚಿಕೊಳ್ಳುವ ಪ್ರಧಾನಿ ನಮ್ಮ ಮುಂದಿದ್ದಾರೆ. ಇಂದು ಬೆಳಿಗ್ಗೆ ಒಂದು ವಿಡಿಯೋ ನೋಡಿದೆ. ಅವರು ಉತ್ತರ ಪ್ರದೇಶದ ಮುಖ್ಯಮಂತ್ರಿಯೋ ಅಥವಾ ಯಾವುದೋ ದೇವಸ್ಥಾನದ ಪೂಜಾರಿಯೋ ಎಂಬ ಅನುಮಾನ ಬರುತ್ತದೆ. ಅವರು ದ್ವಿಪಾತ್ರಾಭಿನಯ ಮಾಡುತ್ತಿದ್ದಾರೆ. ನನಗೆ 5 ರಾಷ್ಟ್ರ ಪ್ರಶಸ್ತಿ ಬಂದಿದೆ. ಅವುಗಳನ್ನು ಇಂಥವರ ನಟನೆಗೆ ಕೊಟ್ಟು ಬಿಡಬೇಕೆನಿಸುತ್ತದೆ ಎಂದು ಖ್ಯಾತ ನಟ ಪ್ರಕಾಶ್ ರೈರವರು ಹೇಳಿದರು.

ಇಂಥವರಿಗೆಲ್ಲಾ ನಾನು ಹೇಳುವುದಿಷ್ಟೆ. ನಿನನ್ನ ಹಂಗ್ ನೋಡ್ಕೋತೀನಿ ಹಿಂಗ್ ನೋಡ್ಕೋತೀನಿ ಅಂತ ನೀವು ನನ್ನನ್ನ ಹೆದರಿಸೋದಕ್ಕೆ ಸಾಧ್ಯವಿಲ್ಲ. 'ಟ್ವೀಟರ್, ಫೇಸ್ ಬುಕ್ ಮುಂತಾದ ಜಾಲತಾಣದಲ್ಲಿ ಕೆಟ್ಟದಾಗಿ ನಿಂದಿಸುವವರು ಎದುರಿಗೆ ಬಂದು ನಿಂತು ಮಾತನಾಡಿ' ಎಂದು ಸವಾಲೆಸದ ಪ್ರಕಾಶ್ ರೈರವರು, ನಾನು ನಟ. ನನ್ನ ಮುಂದೆ ಏನೂ ಗೊತ್ತಿಲ್ಲದಿರುವವರಂತೆ ನಟಿಸಬೇಡಿ ಎಂದರು. ಯುವಜನರು, ಜನರು ಬುದ್ದಿವಂತರಾಗಿದ್ದಾರೆ ಎಂದು ಎಚ್ಚರಿಸಿದರು. ನ್ಯಾಯಕ್ಕಾಗಿ, ಹಸಿವಿನ ವಿಷಯದಲ್ಲಿ, ಆರೋಗ್ಯಕರ ಮನಸ್ಸುಗಳಿಗಾಗಿ ಕೆಲಸ ಮಾಡೋಣ. ನಮಗೆ ಆವೇಶ ಬೇಡ. ಹೆದರುವುದು ಬೇಡ. ನಾವು ಹೆದರದೇ ಇದ್ದರೆ ಅವರು ಓಡಿಹೋಗುತ್ತಾರೆ. ನಾನು ಸಮ್ಮೇಳನದ ಉದ್ಘಾಟನೆಯಲ್ಲಿ ಮಾತ್ರವಲ್ಲ ಡಿವೈಎಫ್ಐನ ಎಲ್ಲ ಹೋರಾಟಗಳಲ್ಲಿ ನಿಮ್ಮ ಜೊತೆ ಇರುತ್ತೇನೆ ಎಂದರು.

ಚಿತ್ರನಟರಿಗೆ ಅಭಿಮಾನಿ ಸಂಘ ಮಾಡುತ್ತೇವೆ ಎನ್ನುತ್ತಾರೆ. ಪ್ರಾಣ ಕೊಡುತ್ತೇವೆ ಎನ್ನುತ್ತಾರೆ. ಚಿತ್ರನಟರಿಗೆ ಅಭಿವಾನಿ ಸಂಘಗಳು ಯಾಕೆ ಬೇಕು. ಮಕ್ಕಳಿಗೆ ಹಾಲು ಕೊಡಲು ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿ ಅಪ್ಪ ಅಮ್ಮ ಇರುವ ದೇಶದಲ್ಲಿ ಚಿತ್ರನಟರ ಕಟೌಟ್‌ಗಳಿಗೆ ಹಾಲಿನ ಅಭಿಷೇಕ ಮಾಡುವುದು ಮೂರ್ಖತನ.

ಸಮಾಜದಲ್ಲಿ ಪ್ರತಿವರ್ಷ ನಿರುದ್ಯೋಗ ಹೆಚ್ಚುತ್ತಿದೆ. ರೈತರ ಜೀವನ ಹಸನಾಗುತ್ತಿಲ್ಲ. ಈ ಬಗೆಗೆ ಸಾಕಷ್ಟು ಅಂಕಿಸಂಖ್ಯೆಗಳು ದೊರೆಯುತ್ತವೆ. ಆದರೆ ಸಮಸ್ಯೆಯ ಮೂಲ ಎಲ್ಲಿದೆ ಎಂದು ಕಂಡುಕೊಳ್ಳುವುದು ಮುಖ್ಯ. ಚುನಾವಣೆ ಬಿಸಿ ಏರುತ್ತಿದೆ. ಜನರು 'ಅವರಿಗೇನು ಆಳುವ ಪಕ್ಷ. ಹಣಬಲದಿಂದ ಗೆಲ್ಲುತ್ತಾರೆ.', 'ಕ್ಷೇತ್ರದಲ್ಲಿ ಅವರ ಜಾತಿ ಓಟು ಜಾಸ್ತಿ ಇದೆ. ಗೆಲ್ಲುತ್ತಾರೆ' 'ಇಬ್ಬರನ್ನು, ಮೂವರನ್ನು ಕೊಂಡುಕೊಂಡು ಗೆಲ್ಲುತ್ತಾರೆ' ಎಂದು ಮಾತನಾಡುತ್ತಿದ್ದಾರೆ. ಇದು ಮುಗ್ದತೆ ಅಲ್ಲ ಮೂರ್ಖತನ. ರಾಜಕೀಯ, ಸಮಾಜ ಸುಧಾರಣೆಯಾಗಬೇಕಾದರೆ ಯುವಜನರು ಉತ್ತಮ ನಾಯಕರಾಗಿ ಬೆಳೆದು ಬರಬೇಕು' ಎಂದು ಪ್ರಕಾಶ್ ರೈರವರು ಹೇಳಿದರು.

ಟಿ.ವಿ. ಬಂದ ಮೇಲೆ ನಾವು ಆಟ ಆಡೋದನ್ನು ಬಿಟ್ಟು ಬಿಟ್ಟಿದ್ದೇವೆ. ರಾಜಕೀಯ ಚರ್ಚೆ ಕೂಡ ಹಾಗೆ ಆಗಿದೆ. ಟಿವಿ ನೋಡುತ್ತಾ ಎಲ್ಲದರ ಬಗೆಗೆ ಗೊತ್ತು ಎಂಬಂತೆ ವಾತನಾಡುತ್ತೇವೆ. ಆದರೆ ಏನೂ ಗೊತ್ತಿರುವುದಿಲ್ಲ. ಜೀವನದ ಪ್ರತಿಕ್ಷಣದಲ್ಲೂ ರಾಜಕೀಯದ ಪ್ರಭಾವ ಇದೆ. ಎಲ್ಲ ಸಮಸ್ಯೆಗಳ ಹಿಂದೆ ಭಾರತ ಪ್ರತಿಯೊಬ್ಬ ಪ್ರಜೆಯ ಮೂರ್ಖತನ ಇದೆ. ಆದ್ದರಿಂದ ಎಲ್ಲರನ್ನೂ ರಾಜಕಾರಣಕ್ಕೆ ಎಳೆದು ತರಬೇಕು. ಸುತ್ತ ಮುತ್ತ ನಡೆಯುವ ಎಲ್ಲ ರಾದ್ದಾಂತಗಳಿಗೆ ನಾವು ಹೊಣೆ ಎಂಬ ಅರಿವು ಮೂಡಿಸಬೇಕು. ಮುಗ್ದತೆ ಹಾಗೇ ಇರಬಾರದು. ತಿಳಿದುಕೊಳ್ಳಬೇಕು. ಗೊತ್ತಾಗಲಿಲ್ಲವೆಂದರೆ ಗೊತ್ತಿರುವವರಿಂದ ಕೇಳಿ ತಿಳಿದುಕೊಳ್ಳಬೇಕು. ಚುನಾವಣೆ ಎನ್ನುವ ಪರೀಕ್ಷೆಯಲ್ಲಿ ಮೂರ್ಖ ಜನರೇ ತೀರ್ಪು ಕೊಟ್ಟರೆ ಶೇ. 99 ರಷ್ಟು ಮೂರ್ಖ ಪ್ರತಿನಿಧಿಗಳೇ ಆರಿಸಿಬರುವುದು ಎಂದೂ ಪ್ರಕಾಶ್ ರೈರವರು ಹೇಳಿದರು.

ಡಿವೈಎಫ್ಐನ ಅಖಿಲ ಭಾರತ ಅಧ್ಯಕ್ಷರಾದ ಮಹಮದ್ ರಿಯಾಜ್ ಅವರು ಮಾತನಾಡುತ್ತಾ ನಾವು ಸಂಕೀರ್ಣ ಅಪಾಯಕರ ಸನ್ನಿವೇಶದಲ್ಲಿ ಸವಾವೇಶಗೊಂಡಿದ್ದೇವೆ. ಪ್ರಜಾಪ್ರಭುತ್ವ, ಜಾತ್ಯತೀತತೆಗಳ ಮೇಲೆ ದಾಳಿಯಾಗುತ್ತಿದೆ. ಅಸಹಿಷ್ಣತೆ ವ್ಯಾಪಿಸುತ್ತಿದೆ. ಇಂದು ಬೆಳಿಗ್ಗೆ ಅಡುಗೆ ಅನಿಲ ಬೆಲೆ ಏರಿಕೆಯಾಗಿದೆ. ಪೆಟ್ರೋಲ್ ಬೆಲೆ ನಿರ್ಧಾರದ ಹಕ್ಕನ್ನು ಖಾಸಗಿ ಕಂಪನಿಗಳಿಗೆ ನೀಡಲಾಗಿದೆ. ಕಳೆದ ಮೂರು ವರ್ಷದಲ್ಲಿ 24 ಸಾರಿ ಬೆಲೆ ಏರಿಕೆ ಆಗಿದೆ. ಕಳೆದ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಮೋದಿ ಬೆಲೆ ಏರಿಕೆ ನಿಯಂತ್ರಿಸುವುದಾಗಿ ಹೇಳಿದರು. ಆಗ ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ 109 ಡಾಲರ್ ಇತ್ತು. ಲೀಟರ್ ಪೆಟ್ರೋಲ್ ಬೆಲೆ 72. ರೂ. ಇತ್ತು. ಈಗ ಕಚ್ಚಾ ತೈಲದ ಬೆಲೆ ಬ್ಯಾಲರ್‌ಗೆ. 48 ಡಾಲರ್. ಆದರೆ ಈಗಲೂ ಲೀಟರ್ ಪೆಟ್ರೋಲ್ ಬೆಲೆ ಸುಮಾರು 71 ರೂ.

ಪುಟ 10 ಕ್ಕೆ









ಕರ್ಷಕ ಬಿಕ್ಕಟ್ಟನ್ನು ಪ್ರತಿರೋಧಿಸಲು ರೈತರ ಐಕ್ಯ ಹೋರಾಟ

34ನೇ ಅಖಿಲ ಭಾರತ ಕಿಸಾನ್ ಸಭಾ ಸಮ್ಮೇಳನದ 'ಮಾಡು ಇಲ್ಲವೆ ಮಡಿ' ಕರೆ





ಈ ಕೆಲವು ತಿಂಗಳಲ್ಲಿ ದೇಶವ್ಯಾಪಿ ರೈತ ಹೋರಾಟಗಳ ಹಿನ್ನೆಲೆಯಲ್ಲಿ ಹರ್ಯಾಣದ ಹಿಸ್ಸಾರ್‌ನಲ್ಲಿ ದೇಶದ ಪ್ರಮುಖ ಸಂಘಟನೆಯಾದ ಅಖಿಲ ಭಾರತ ಕಿಸಾನ್ ಸಭಾದ 34ನೇ ಸಮ್ಮೇಳನ ಅಕ್ಟೋಬರ್ 3ರಿಂದ 6 ರ ವರೆಗೆ ನಡೆದಿದೆ.

ಅಕ್ಟೋಬರ್ 3ರಂದು ನಗರದ ಹಳೆಯ ಸರ್ಕಾರಿ ಕಾಲೇಜ್ ಮೈದಾನದಲ್ಲಿ ಒಂದು ಬೃಹತ್ ಕಿಸಾನ್–ಮಜ್ದೂರ್ ರ್‍ಯಾಲಿಯೊಂದಿಗೆ ಆರಂಭವಾಯಿತು. ಇದರಲ್ಲಿ ಸಾವಿರಾರು ರೈತರು ರಾಜ್ಯದ ಎಲ್ಲೆಡೆಗಳಿಂದ ಭಾಗವಹಿಸಿದ್ದರು.

ಈ ರ್‍ಯಾಲಿಯನ್ನು ಉದ್ಘಾಟಿಸಿದ ತ್ರಿಪುರ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಮತ್ತು ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ಇತರ ಕಿಸಾನ್ ಸಭಾ ಮುಖಂಡರು ರೈತರು ಆತ್ಮಹತ್ಯೆಗಳ ದಾರಿ ಬಿಟ್ಟು ತಮ್ಮ ಹಕ್ಕುಗಳಿಗಾಗಿ ಹೋರಾಡುವ ದಾರಿ ಹಿಡಿಯಬೇಕು ಎಂದು ಕರೆ ನೀಡಿದರು. ಪ್ರಧಾನ ಮಂತ್ರಿಗಳು 2014ರ ಲೋಕಸಭಾ ಚುನಾವಣೆಗಳ ಪ್ರಚಾರದ 300ಕ್ಕೂ ಸಭೆಗಳಲ್ಲಿ ರೈತರಿಗೆ ಖರ್ಚುಗಳಿಗೆ 50% ಸೇರಿಸಿ ಬೆಲೆ ಕೊಡುವುದಾಗಿ ನೀಡಿದ ಆಶ್ವಾಸನೆಯನ್ನು ಮುರಿದ ವಿಶ್ವಾಸಘಾತಕ್ಕೆ ಪ್ರತೀಕಾರವಾಗಿ ಒಂದು ಸಂಘಟಿತ ಬಂಡಾಯದ ಮೂಲಕ ಪ್ರತೀಕಾರ ತೀರಿಸಬೇಕು, ಒಂದು ಜನ-ಕೇಂದ್ರಿತ ಪರ್ಯಾಯವನ್ನು ಬೆಳೆಸಬೇಕು, ಹೀಗೆ ಮಾಡುವಾಗ ಜನಗಳ ಮಹಾಐಕ್ಯತೆಯನ್ನು ಮುರಿಯುವ ಪಿತೂರಿಗಳನ್ನು ಕಾಣಲು ವಿಫಲವಾಗಬಾರದು ಎಂದು ಈ ಮುಖಂಡರು ಕರೆ ನೀಡಿದರು.

ಕಿಸಾನ್–ಮಜ್ದೂರ್ ರ್‍ಯಾಲಿ ಮುಖ್ಯ ಭಾಷಣಕಾರರಾದ ಮಾಣಿಕ್ ಸರ್ಕಾರ್ ದೇಶದಲ್ಲಿ ಪರಿಸ್ಥಿತಿ ಚೆನ್ನಾಗಿಲ್ಲ, ಅದು ಹದಗೆಡುತ್ತಿದೆ ಎಂದು ಆರಂಭಿಸಿದ ಅವರು 25 ವರ್ಷಗಳ ಹಿಂದೆ ಇದೇ ಹಿಸ್ಸಾರ್‌ನಲ್ಲಿ ನಡೆದ ಎಐಕೆಎಸ್‌ನ ಸಮ್ಮೇಳನವನ್ನು ನೆನಪಿಸಿಕೊಂಡರು. ಕಾರ್ಮಿಕರು, ರೈತರು, ಸಣ್ಣ ವ್ಯಾಪಾರಿಗಳು, ವಿದ್ಯಾರ್ಥಿಗಳು, ಯುವಜನರು, ನೌಕರರು, ತಾಯಂದಿರು, ಸೋದರಿಯರ ಮೇಲೆ ದಾಳಿಗಳು ತೀವ್ರಗೊಳ್ಳುತ್ತಿವೆ, ತೀಕ್ಷ್ಣಗೊಳ್ಳುತ್ತಿವೆ, ಅದರ ಸಾಧನೆಗಳನ್ನು ಕಸಿದುಕೊಳ್ಳಲಾಗುತ್ತಿದೆ. ಇದು ಪ್ರತಿಪಕ್ಷಗಳ ಪ್ರಶ್ನೆಯಲ್ಲ, ಜನಕೇಂದ್ರಿತ ಪರ್ಯಾಯವನ್ನು ಕಟ್ಟುವ ಪ್ರಶ್ನೆ ಎಂದ ಅವರು ಆರ್ಥಿಕ ಧೋರಣೆಗಳ ಪ್ರಶ್ನೆ ಬಂದಾಗ ಬಿಜೆಪಿ ಮತ್ತು ಕಾಂಗ್ರೆಸ್, ಎನ್‌ಡಿಎ ಮತ್ತು ಯುಪಿಎ ನಡುವೆ ವ್ಯತ್ಯಾಸಗಳೇನೂ ಇಲ್ಲ, ಚುನಾವಣೆಗಳಲ್ಲಿ ಭರವಸೆಗಳನ್ನು ಕೊಡುತ್ತಾರೆ, ನಂತರ ಗುತ್ತೇದಾರಿ ಬಂಡವಾಳಿಗರು, ಬಹುರಾಷ್ಟ್ರೀಯ ಕಂಪನಿಗಳು, ಭೂಮಾಲಕರು, ದೊಡ್ಡ ವ್ಯಾಪಾರಸ್ಥರ ಏಜೆಂಟರಂತೆ ವರ್ತಿಸುತ್ತಾರೆ ಎಂದು ಟೀಕಿಸಿದರು.

ಎಡಪಕ್ಷಗಳ ಆಳ್ವಿಕೆಯಲ್ಲಿ ಅದು ಕೇರಳದಲ್ಲಾಗಲಿ, ಪಶ್ಚಿಮ ಬಂಗಾಲದಲ್ಲಾಗಲಿ, ತ್ರಿಪುರಾದಲ್ಲಾಗಲಿ ರೈತರ ಆತ್ಮಹತ್ಯೆಗಳು ನಡೆದಿಲ್ಲ ಎಂದ ಅವರು ತ್ರಿಪುರಾದಲ್ಲಿ ಮುಂದಿಡುತ್ತಿರುವ ಪರ್ಯಾಯ ಧೋರಣೆಗಳ ಬಗ್ಗೆ ಹೇಳಿದರು. ಈ ಪರ್ಯಾಯ ಭಾರತದ ಹಳ್ಳಿಗಳ ಮೂಲಕ ಸಾಗುತ್ತದೆ ಎಂದರು.

ಈ ಪರ್ಯಾಯ ಕೇವಲ ರೈತರು ಮತ್ತು ಕಾರ್ಮಿಕರ ಐಕ್ಯತೆಯಿಂದಲೇ ಸಾಧ್ಯವಾಗದು. ಅದು ದಲಿತರು, ಅದಿವಾಸಿಗಳು ಸೇರಿದಂತೆ ಎಲ್ಲ ದುಡಿಯುವ ಜನವಿಭಾಗಗಳನ್ನೊಳಗೊಂಡ ಐಕ್ಯತೆಯಾಗಬೇಕು, ಇದಕ್ಕೆ ಇತ್ತೀಚೆಗೆ ರಾಜಸ್ತಾನದ ಸಿಕಾರ್‌ನಲ್ಲಿ ನಡೆದ ರೈತ ಹೋರಾಟದ ಉದಾಹರಣೆಯನ್ನು ಮಾಣಿಕ್ ಸರ್ಕಾರ್ ನೀಡಿದರು. ಆ ಹೋರಾಟ ಮನಸ್ಸಿಲ್ಲದ ಬಿಜೆಪಿ ಸರಕಾರದ ಕೈಗಳಿಂದ ವಿಜಯವನ್ನು ಕಿತ್ತುಕೊಂಡಿದೆ ಎಂದರು.

ಎಐಕೆಎಸ್ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ ಮಾತನಾಡುತ್ತ ಇದೀಗ ಪರಿಹಾರವಿಲ್ಲದ ಬಿಕ್ಕಟ್ಟು , ಇದಕ್ಕೆ ಕ್ರಾಂತಿಯೇ ಬೇಕು, ಆತ್ಮಹತ್ಯೆ ದಾರಿ ಬಿಟ್ಟು ಇದಕ್ಕೆ ಹೊಸದೊಂದು ದಾರಿಯನ್ನು ರೂಪಿಸಿಕೊಳ್ಳಬೇಕು ಎಂದರು. ದೇಶದ 60ಶೇ. ಜನ ಕೃಷಿಯನ್ನು ಅವಲಂಬಿಸಿದ್ದಾರೆ. ಅವರಿಗೆ ರಕ್ಷಣೆಯಿಲ್ಲ. ಯುವಜನರಿಗೆ ಕೃಷಿಯಲ್ಲಿ ಭವಿಷ್ಯತ್ತು ಕಾಣುತ್ತಿಲ್ಲ. ವಾಸ್ತವತೆಯೆಂದರೆ ಸ್ವಾತಂತ್ರ್ಯ ದೊರೆತಾಗಿನಿಂದಲೂ ಅನುಸರಿಸಿದ ಧೋರಣೆಗಳು ರೈತರ–ವಿರೋಧಿಯಾಗಿವೆ., ರೈತರನ್ನು ಆತ್ಮಹತ್ಯೆಗಳಿಗೆ ನೂಕುತ್ತಿವೆ. ರೈತರು ಈ ದಾರಿ ಹಿಡಿಯದೆ ಹಕ್ಕುಗಳಿಗೆ ಹೋರಾಡಬೇಕು, ಈ ಬಿಕ್ಕಟ್ಟು ಶೋಷಕರ ವಿರುದ್ಧ ಬಂಡಾಯದ ಸಂದರ್ಭ, ಇದಕ್ಕಾಗಿ ದೇಶಾದ್ಯಂತ ರೈತರನ್ನು ಒಗ್ಗೂಡಿಸಬೇಕು ಎಂದರು.

ಕೇಂದ್ರೀಯ ಕಾನೂನಿನ ಮೂಲಕ ರೈತರ ಭೂಮಿಯನ್ನು ಕಸಿಯುವ ಪ್ರಯತ್ನ ವಿಫಲವಾದ ಮೇಲೆ ರಾಜ್ಯಗಳಲ್ಲಿ ಕಾನೂನು ತರುವ ಮೂಲಕ ಕಸಿಯುವ ಪಿತೂರಿ ನಡೆಯುತ್ತಿದೆ ಎಂದು ಎಚ್ಚರಿಸಿದ ಹನ್ನನ್ ಮೊಲ್ಲ ತಮ್ಮದೇ ಪಶುಗಳನ್ನು ಹೊಂದಿರುವ, ಅವನ್ನು ಮಾರುವ ರೈತರ ಶತಮಾನಗಳ ಹಕ್ಕನ್ನು ಕಸಿಯುವ ಪ್ರಯತ್ನ ನಡೆದಿದೆ. ಇದನ್ನು ಬಳಸಿಕೊಂಡು ಆರೆಸ್ಸೆಸ್ ಗೂಂಡಾಗಳು ಕಾರ್ಮಿಕರ, ವ್ಯಾಪಾರಿಗಳ ಕೊಲೆ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸರ್ವಾಧಿಕಾರಶಾಹಿ ಸರಕಾರ ಒಂದು ಬರ್ಬರ ಗೂಂಡಾ ರಾಜ್ಯವನ್ನು ಸ್ಥಾಪಿಸುವ ಹುನ್ನಾರ ಹೊಂದಿದ್ದರೆ ನಾವು ರೈತ–ಕಾರ್ಮಿಕರ ಐಕ್ಯತೆಯನ್ನು ಸ್ಥಾಪಿಸ 'ಬಯಸುತ್ತೇವೆ, ಇತ್ತೀಚೆಗೆ ರಚಿಸಿಕೊಂಡ ನೂರಾರು ಸಂಘಟನೆಗಳ ಒಕ್ಕೂಟಗಳ ಮೂಲಕ 'ಜನತಾ ಐಕ್ಯತೆ'ಯ ಆಂದೋಲನ ಕಟ್ಟ ಬಯಸುತ್ತೇವೆ. ಅಕ್ಟೋಬರ್ 30ರಂದು ದೇಶಾದ್ಯಂತ 'ಪಂಜಿನ ಮೆರವಣಿಗೆ'ಗಳು ಈ ಆಂದೋಲನದ ಮೊದಲ ಕಾರ್ಯಾಚರಣೆಯಾಗಲಿದೆ ಎಂದರು.

ಕೊನೆಯಲ್ಲಿ ಮಾತನಾಡಿದ ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷರು ಮತ್ತು ಇತ್ತೀಚೆಗೆ ರಾಜಸ್ತಾನದ ಸರಕಾರವನ್ನು ಮಣಿಸಿದ ಯಶಸ್ವಿ ರೈತ ಹೋರಾಟಕ್ಕೆ ನೇತೃತ್ವ ನೀಡಿದ್ದ ಆಮ್ರ ರಾಮ್ ಮಾತಾಡುತ್ತ ರಾಜಸ್ತಾನ ಸರಕಾರವನ್ನು ಮಣಿಸಿದ್ದೇವೆ, ಅದನ್ನು ಹರಿಯಾಣದಲ್ಲೂ ಮಾಡುತ್ತೇವೆ ಎಂದರು. ಎಂದರು.

13 ದಿನಗಳ ಮಹಾಪಡಾವ್ ಮತ್ತು 3 ದಿನಗಳ ಚಕ್ಕಾಜಾಮ್‌ನಲ್ಲಿ ಮಹಿಳೆಯರ ಪಾತ್ರವನ್ನು ನೆನಪಿಸಿಕೊಳ್ಳುತ್ತ ಹರ್ಯಾಣದಲ್ಲೂ ರೈತ ತಾಯಂದಿರು ಮತ್ತು ಮಹಿಳೆಯರು ಇಂತಹ ನೇತೃತ್ವ ವಹಿಸಬೇಕು ಎಂದರು. ಸಾಲ ಪರಿಹಾರ ಮತ್ತು ವೆಚ್ಚದೊಂದಿಗೆ 50% ಬೆಲೆಯ ಬೇಡಿಕೆಯ ಮೇಲೆ 'ಮಾಡು ಇಲ್ಲವೆ ಮಡಿ' ಹೋರಾಟ ನಡೆಸುತ್ತೇವೆ ಎಂಬ ಘೋಷಣೆಯನ್ನು ಕೊಡುತ್ತ ಮೋದಿ ಸರಕಾರ ನೀಡಿದ ಆಶ್ವಾಸನೆಗಳನ್ನಿ ಈಡೇರಿಸಬೇಕು,ಇಲ್ಲವೇ ಅಧಿಕಾರದಿಂದ ಇಳಿಯಬೇಕು ಎಂದರು.

ಸಮ್ಮೇಳನದ ಮೂರು ದಿನಗಳ ಕಲಾಪದಲ್ಲಿ ರೈತರ ಮುಂದಿರುವ ಪ್ರಶ್ನೆಗಳನ್ನು ವಿವಿಧ 'ಆಯೋಗ'ಗಳಲ್ಲಿ ಆಮೂಲಾಗ್ರವಾಗಿ ಚರ್ಚಿಸಲಾಯಿತು. ಅಕ್ಟೋಬರ್ 5ರ ಪ್ರಜಾಪ್ರಭುತ್ವಕ್ಕಾಗಿ ನಡೆ'ಯನ್ನು ಬೆಂಬಲಿಸುವ ನಿರ್ಣಯವಲ್ಲದೆ, ಕೃಷಿಯಲ್ಲಿ ಮಹಿಳೆಯರ ಪಾತ್ರದ ಬಗ್ಗೆ ಒಂದು ಪ್ರತ್ಯೇಕ ಠರಾವನ್ನು ಚರ್ಚಿಸಿ ಅದನ್ನು ಅಂಗೀಕರಿಸಿದ್ದು ಈ ಸಮ್ಮೇಳನದ ಒಮದು ವಿಶೇಷತೆ.

ಈ ಬಗ್ಗೆ ವರದಿಗಳನ್ನು ಮುಂದಿನ ಸಂಚಿಕೆಯಲ್ಲಿ ಕೊಡುವ ಪ್ರಯತ್ನ ಮಾಡುತ್ತೇವೆ.

34ನೇ ಸಮ್ಮೇಳನ ಡಾ.ಅಶೋಕ ಧವಳೆ ಯವರನ್ನು ಅಧ್ಯಕ್ಷರಾಗಿ ಆಯ್ಕೆ ಮಾಡಿತು, ಹನ್ನನ್ ಮೊಲ್ಲ ಪ್ರಧಾನ ಕಾರ್ಯದರ್ಶಿಯಾಗಿ ಪುನರಾಯ್ಕೆಗೊಂಡರು.





ಡಿವೈಎಫ್‌ಐ ನ 11 ನೇ ರಾಜ್ಯ ಸಮ್ಮೇಳನ...... ಪುಟ 6 ರಿಂದ

ಗಳಷ್ಟು ಇದೆ. ಇತ್ತೀಚೆಗೆ ಮುಂಬಯಿಯಲ್ಲಿ ರೈಲ್ವೆ ಅಪಘಾತದಲ್ಲಿ 23 ಜನ ಸತ್ತರು. ಹಲವಾರು ರೈಲ್ವೆ ಅಪಘಾತಗಳು ನಡೆಯುತ್ತಿವೆ. ರೈಲ್ವೆ ಇಲಾಖೆಯಲ್ಲಿ ಅಪಾರ ಪ್ರಮಾಣದ ಖಾಲಿ ಹುದ್ದೆ ಭರ್ತಿಯಾಗದೇ ಇವೆ. ಅದರಿಂದಾಗಿ ಅಪಘಾತಗಳಾಗುತ್ತಿವೆ. ಆದರೆ ಇಂತಹ ಪರಿಸ್ಥಿತಿಯಲ್ಲಿ ದೇಶದ ಪ್ರಧಾನಿಗಳು ಬುಲೆಟ್ ಟ್ರೈನ್‌ಗಳು ತರಲು ಹೊರಟಿದ್ದಾರೆ. ಕೋಮುವಾದಿಗಳು ವಿಚಾರವಾದಿಗಳನ್ನು ಕೊಲ್ಲುತ್ತಿದ್ದಾರೆ. ಜೆಎನ್‌ಯು ವಿದ್ಯಾರ್ಥಿ ಸಂಘದ ಚುನಾವಣೆಯಲ್ಲಿ, ಹೈದರಾಬಾದ್ ವಿ.ವಿ., ಅಸ್ಸಾಂ ವಿಶ್ವವಿದ್ಯಾಲಯಗಳ ಚುನಾವಣೆಗಳಲ್ಲಿ ವಿದ್ಯಾರ್ಥಿಗಳು ಗೌರಿ ಹಂತಕರಿಗೆ ಕೋಮುವಾದಿ ಶಕ್ತಿಗಳಿಗೆ ಸರಿಯಾದ ಪಾಠ ಕಲಿಸಿದ್ದಾರೆ ಎಂದು ಅವರು ಹೇಳಿದರು.

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ, ಹಾಗೂ



ಸಮ್ಮೇಳನದ ಸಿದ್ದತಾ ಸಮಿತಿಯ ಮುಖಂಡರಾದ ಎಂ.ಎಸ್. ಮೀನಾಕ್ಷಿ ಸುಂದರಂ ಮಾತನಾಡಿ 1991 ರಲ್ಲಿ ಜಾಗತೀಕರಣ ನೀತಿ ಉದಾರೀಕರಣ ನೀತಿಗಳನ್ನು ಜಾರಿ ಮಾಡಿದರೆ ಮಾತ್ರ ದೇಶದ ಅಭಿವೃದ್ಧಿ ಎನ್ನಲಾಯಿತು. ಎಲೆಕ್ಟ್ರಾನಿಕ್ಸ್ ಕ್ಷೇತ್ರದಲ್ಲಿ ಬಂದ ಬಿಪಿಎಲ್ ಕೈಗಾರಿಕೆಯ ಕಾರ್ಮಿಕರಿಗೆ ಉದ್ಯೋಗ ಭದ್ರತೆ ಇರಲಿಲ್ಲ. ಮಹಿಳೆ ಗರ್ಭಿಣಿಯಾದರೆ ಕೆಲಸದಿಂದ ವಜಾ ಮಾಡಲಾಗುತ್ತಿತ್ತು. ಅಮಾನವೀಯ ಪರಿಸ್ಥಿತಿ ವಿರುದ್ಧ ಕೆಲಸ ಉಳಿಸಿಕೊಳ್ಳಲು ಮಹಿಳೆಯರು ಕಾರ್ಮಿಕರು ಸಂಘ ರಚಿಸಿಕೊಂಡರೆ ಅದನ್ನು ನೊಂದಣಿ ಮಾಡಲು ಸರಕಾರ ಬಿಡಲಿಲ್ಲ. ಯಾವ ರೀತಿಯ ಉದ್ಯೋಗ ಭದ್ರತೆ ಇರಲಿಲ್ಲ. ಈ ಸಮಸ್ಯೆಯ ವಿರುದ್ಧ ಹೋರಾಟ ನಡೆಸಿದ ಕಾರ್ಮಿಕ ಮುಖಂಡರನ್ನು ಜೈಲಿಗಟ್ಟಲಾಯಿತು. ದೇಶವಿರೋಧಿ ನೀತಿಗಳ ವಿರುದ್ಧ ಜನರಿಂದ ತೀವ್ರ ಪ್ರತಿರೋಧ ಬೆಳೆದು ಬರುತ್ತಿತ್ತು. ಈ ಪ್ರತಿರೋಧ ಚಳುವಳಿಯ ದಿಕ್ಕು ತಪ್ಪಿಸಲು ಕೋಮುವಾದಿಗಳು ಕೈಗೆತ್ತಿ-ಕೊಂಡದ್ದು ದೇವರು, ಧರ್ಮದ ಹೆಸರಿನಲ್ಲಿ ಜನರನ್ನು ವಿಭಜಿಸುವ ಕೋಮುವಾದಿ ಚಳುವಳಿ. ಯುವಜನ ಇಂತಹ ಕುತಂತ್ರಗಳನ್ನು ಅರ್ಥ ಮಾಡಿಕೊಳ್ಳಬೇಕು ಜನವಿರೋಧಿ ನೀತಿಗಳ ವಿರುದ್ಧ ಕೋಮುವಾದದ ವಿರುದ್ಧ ಹೋರಾಟಕ್ಕೆ ಮುಂದಾಗಬೇಕು ಎಂದು ಅವರು ಹೇಳಿದರು.

ಡಿವೈಎಫ್‌ಐನದು ಸ್ವಾತಂತ್ರ್ಯ ಹೋರಾಟದ ಪರಂಪರೆ. ಕರ್ನಾಟಕದಲ್ಲಿ ಕೂಡ. ಪ್ರಸ್ತುತ ಯುವಜನರು ತಮ್ಮ ಕರ್ತವ್ಯ ಮರೆತಿದ್ದಾರೆ. ಈ ಮನೋಭಾವವನ್ನು ಬದಲಿಸಲು ಡಿವೈಎಫ್‌ಐ ಶ್ರಮಿಸುತ್ತಿದೆ. ಭಗತ್ ಸಿಂಗ್‌ರ ಬದುಕು ತ್ಯಾಗ ಬಲಿದಾನ ಡಿವೈಎಫ್‌ಐನ ಆದರ್ಶ. ಶಹೀದ್ ಭಗತ್ ಸಿಂಗ್ ನಗುನಗುತ್ತಾ ನೇಣುಗಂಬವೇರುವಾಗ ಕೂಗಿದ 'ಇನ್ ಕ್ವಿಲಾಬ್' ಘೋಷಣೆಯೇ ನಮ್ಮ ಘೋಷಣೆ ಎಂದು ಡಿವೈಎಫ್‌ಐ ರಾಜ್ಯ ಅಧ್ಯಕ್ಷರಾದ ಮುನಿರ್ ಕಾಟಿಪಳ್ಳ ಹೇಳಿದರು.

ದೇಶದ ಮುಂದೆ ದೊಡ್ಡ ಸಾಂಸ್ಕೃತಿಕ ಸವಾಲಿದೆ. ಡಾ. ಎಂ.ಎಂ. ಕಲ್ಬುರ್ಗಿ, ಗೌರಿ ಲಂಕೇಶ್ ಹತ್ಯೆಯಾಗಿದ್ದಾರೆ. ಕರಾವಳಿಯ ಯುದ್ಧಭೂಮಿಯಲ್ಲಿ ಡಿವೈಎಫ್‌ಐ ಕೋಮುವಾದದ ವಿರುದ್ಧ ಹೋರಾಟದಲ್ಲಿ ನಿರತವಾಗಿದೆ. ಸೌಹಾರ್ದ ರ‍್ಯಾಲಿಗಾಗಿ ಕೇರಳದ ಮುಖ್ಯಮಂತ್ರಿ ಪಿಣರಾಯ್ ವಿಜಯನ್ ಬರುವವರಿದ್ದಾಗ ಅವರನ್ನು ಬರಲು ಬಿಡಲು ಬಿಡುವುದಿಲ್ಲ ಎಂದು ಮಂಗಳೂರಿನಲ್ಲಿ ಬಂದ್‌ಗೆ ಕರೆಕೊಡಲಾಯಿತು. ಆದರೂ ಜನರ ಬೆಂಬಲದಿಂದ ಸೌಹಾರ್ದ ರ‍್ಯಾಲಿಯನ್ನು ಯಶಸ್ವಿಗೊಳಿಸಲಾಯಿತು. ಅವರು ಬ್ಯಾನರ್ ಕಿತ್ತು ಹಾಕಿದರು. ಬಾವುಟ ಮುರಿದು ಹಾಕಿದರು. ಡಿವೈಎಫ್‌ಐ ಮುರಿಯುವ ಹರಿಯುವ ಕೆಲಸಕ್ಕೆ ಬದಲಾಗಿ ಕಟ್ಟುವ ಕೆಲಸಕ್ಕೆ ಮುಂದಾಯಿತು. ಅವರು ದ್ವೇಷ ಹರಡಿದರು. ಅದಕ್ಕೆ ಬದಲಾಗಿ ಡಿವೈಎಫ್‌ಐ ಪ್ರೀತಿ ಹಂಚುವೆವು ಎಂದು ಕಾರ್ಯಾಚರಣೆಗೆ ಇಳಿಯಿತು. ತುಳುನಾಡಿನಲ್ಲಿ ಈಗಲೂ ಸಮರ ಮುಂದುವರಿದಿದೆ. ಅಶ್ರಫ್ ಕೊಲೆಗೆ ಪ್ರತಿಯಾಗಿ ಶರತ್ ಮಡಿವಾಳ ಕೊಲೆಯಾದರು. ಹೀಗೆ ಕೋಮುವಾದಿ ಶಕ್ತಿಗಳು ಪರಸ್ಪರ ಕೊಲೆಗಳಲ್ಲಿ ತೊಡಗಿದ್ದಾರೆ. ಆದರೆ ಡಿವೈಎಫ್‌ಐ ಪ್ರಜಾಸತ್ತಾತ್ಮಕ ಹೋರಾಟದಲ್ಲಿ ತೊಡಗಿದೆ. ಕೇಂದ್ರ ಸರಕಾರ ಗಡಿಯಲ್ಲಿ ಯುದ್ದದ ಉನ್ಮಾದ ಸೃಷ್ಟಿಸುತ್ತಿದೆ. ದೇಶದಲ್ಲಿ ಕೋಮು ಗಲಭೆಗಳು ನಡೆಯುತ್ತಿವೆ. ಹೀಗಿದ್ದಲ್ಲಿ ದೇಶ ಹೇಗೆ ಸದೃಢವಾಗಿ-ಸಮರ್ಥವಾಗಿರಲು ಸಾಧ್ಯ. ಮಂಗಳೂರಿನ ಜೈಲಿನಲ್ಲಿ ಸಹ ಕೋಮುವಾದಿ ವಿಭಜನೆ ಆಗಿದೆ. ಎ ಬ್ಲಾಕ್ ಮುಸ್ಲಿಮ್ ಖೈದಿಗಳಿಗೆ, ಬಿ ಬ್ಲಾಕ್ ಹಿಂದೂಗಳಿಗೆ ವಿಂಗಡಿಸಲಾಗಿದೆ ಎಂದು ಮುನಿರ್ ಹೇಳಿದರು.

ಬಡವರ ಮಕ್ಕಳ ಕೈಗೆ, ಯುವಜನರ ಕೈಗೆ ಬಾಂಬ್, ಪೆಟ್ರೋಲ್ ಬಾಂಬ್, ಕತ್ತಿ ಕೊಟ್ಟಿರುವ ಕೋಮುವಾದಿಗಳ ಕೃತ್ಯಕ್ಕೆ ವಿರುದ್ಧವಾಗಿ ಬಡವರ ಮಕ್ಕಳಾದ ಯುವಜನರ ಕೈಗೆ ಹೋರಾಟದ ಧ್ವಜವನ್ನು ನೀಡುತ್ತೇವೆ ಎಂದೂ ಮುನಿರ್ ಕಾಟಿಪಳ್ಳ ಘೋಷಿಸಿದರು.

ಡಿವೈಎಫ್‌ಐ ಅಖಿಲ ಭಾರತ ಉಪಾಧ್ಯಕ್ಷರಾದ ದೀಪಾ, ಡಿವೈಎಫ್‌ಐ ರಾಜ್ಯ ಪದಾಧಿಕಾರಿಗಳು ವೇದಿಕೆಯಲ್ಲಿ ಹಾಜರಿದ್ದರು. ರಾಜ್ಯ ಕಾರ್ಯದರ್ಶಿ ಬಿ. ರಾಜಶೇಖರ ಮೂರ್ತಿ ಪ್ರಸ್ತಾವಿಕವಾಗಿ ಮಾತನಾಡಿದರು. ರಾಜ್ಯ ಸಮಿತಿ ಸದಸ್ಯರು ಸಂತೋಷ್ ಬಜಾಲ್ ಸ್ವಾಗತಿಸಿದರು. ರಾಜ್ಯ ಸಮಿತಿ ಸದಸ್ಯರಾದ ಬಸವರಾಜ ಪೂಜಾರ್ ಕಾರ್ಯಕ್ರಮ ನಿರೂಪಿಸಿದರು. ರಾಜ್ಯ ಅಧ್ಯಕ್ಷರಾದ ಮುನಿರ್ ಕಾಟಿಪಳ್ಳ ಅಧ್ಯಕ್ಷತೆ ವಹಿಸಿದ್ದರು. ನಿದಿನ್ ವಂದನಾರ್ಪಣೆ ಮಾಡಿದರು. ಬಸವರಾಜ ಪೂಜಾರ್ ಕಾರ್ಯಕ್ರಮ ನಿರೂಪಿಸಿದರು.

ಸೌಹಾರ್ದ ಮೆರವಣಿಗೆ

ಸಮ್ಮೇಳನದ ಆರಂಭಕ್ಕೆ ಮೊದಲು ಮೈಸೂರು ಬ್ಯಾಂಕ್ ವೃತ್ತದ ಐತಿಹಾಸಿಕ ಹುತಾತ್ಮ ಸ್ಮಾರಕದ ಬಳಿಯಿಂದ ಆರಂಭಗೊಂಡ ಸೌಹಾರ್ದ ಮೆರವಣಿಗೆಗೆ ಹಿರಿಯ ಕಾರ್ಮಿಕ ಮುಖಂಡರು, ಸಿಐಟಿಯು ರಾಜ್ಯ ಉಪಾಧ್ಯಕ್ಷರೂ ಅದ ಆರ್. ಶ್ರೀನಿವಾಸ್ ಅವರು ಚಾಲನೆ ನೀಡಿದರು. ನಂತರ ಸೌಹಾರ್ದ ಮೆರವಣಿಗೆಯು ಅರಮನೆ ರಸ್ತೆಯಲ್ಲಿ ಸಂಚರಿಸಿ 'ಸಾಮರಸ್ಯ ದ್ವಾರ'ದ ಮೂಲಕ ಹಾದು ಸಮ್ಮೇಳನದ ಸ್ಥಳವನ್ನು ತಲುಪಿತು. ಡಿವೈಎಫ್‌ಐ ಮುಖಂಡರು, ಸಮ್ಮೇಳನದ ಪ್ರತಿನಿಧಿಗಳು ದೇಶಪ್ರೇಮಿ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆಯಲ್ಲಿ ಉತ್ಸಾಹದಿಂದ ಮೆರವಣಿಗೆಯಲ್ಲಿ ಪಾಲ್ಗೊಂಡರು. ಮೆರವಣಿಗೆಯಲ್ಲಿ ಆಕರ್ಷಕವಾದ ಡೊಳ್ಳುಕುಣಿತ ಮತ್ತು ನಂದಿಕೋಲು ಕುಣಿತಗಳು ಇದ್ದು ಅವು ಜನಮನವನ್ನು ಸೆಳೆದವು.

ನಂತರ ಡಿವೈಎಫ್‌ಐ ರಾಜ್ಯ ಅಧ್ಯಕ್ಷರಾದ ಮುನಿರ್ ಕಾಟಿಪಳ್ಳ ಅವರು ಸಮ್ಮೇಳನದ ಧ್ವಜಾರೋಹಣವನ್ನು ನೆರವೇರಿಸಿದರು. ಉದ್ಯೋಗ, ಅಭಿವೃದ್ಧಿ ಮತ್ತು ಸಾಮರಸ್ಯಗಳ ಪರವಾದ ಘೋಷಣೆಗಳು ಮೊಳಗಿದವು. ಅತಿಥಿಗಳು, ಡಿವೈಎಫ್‌ಐ ಅಖಿಲ ಭಾರತ ಮುಖಂಡರು, ರಾಜ್ಯ ಮುಖಂಡರು, ಪ್ರತಿನಿಧಿಗಳು ಸಾಲಾಗಿ ಹುತಾತ್ಮ ಸಂಗಾತಿಗಳ ಸ್ಮಾರಕಕ್ಕೆ ಪುಷ್ಪ ನಮನದ ಮೂಲಕ ಗೌರವ ವಂದನೆ ಸಲ್ಲಿಸಿದರು.

ಪ್ರತಿನಿಧಿ ಅಧಿವೇಶನ

ಮಧ್ಯಾಹ್ನದ ನಂತರ ಆರಂಭವಾದ ಸಮ್ಮೇಳನದ ಪ್ರತಿನಿಧಿ ಅಧಿವೇಶನವನ್ನು ಡಿವೈಎಫ್‌ಐ ಅಖಿಲ ಭಾರತ ಅಧ್ಯಕ್ಷರಾದ ಮಹಮದ್ ರಿಯಾಸ್ ಉದ್ಘಾಟಿಸಿದರು. ರಾಜ್ಯ ಕಾರ್ಯದರ್ಶಿ ಬಿ. ರಾಜಶೇಖರ ಮೂರ್ತಿಯವರು ಸಮ್ಮೇಳನದ ಕರಡು ವರದಿಯನ್ನು ಮಂಡಿಸಿದರು. ಬಸವರಾಜ ಪೂಜಾರ ಶ್ರದ್ಧಾಂಜಲಿ ನಿರ್ಣಯವನು ಮಂಡಿಸಿದರು. ವಿವಿಧ ಜಿಲ್ಲೆಗಳನ್ನು ಪ್ರತಿನಿಧಿಸಿ ಒಟ್ಟಾರೆ 181 ಪ್ರತಿನಿಧಿಗಳು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು. ಕರಡು ವರದಿಯ ಆಧಾರದಲ್ಲಿ ನಡೆದ ಪ್ರತಿನಿಧಿ ಚರ್ಚೆಯನ್ನು ಸಮ್ಮೇಳನದ ಮುಂದೆ ಮಂಡಿಸಲಾಯಿತು. ಒಟ್ಟಾರೆ ನಾಲ್ಕುವರೆ ಗಂಟೆಗಳ ಕಾಲ ಪ್ರತಿನಿಧಿ ಅಧಿವೇಶನದ ಚರ್ಚೆಗಳು ನಡೆದವು.

ಸಮಾರೋಪ

ಅಕೋಬರ್ 3, ರಂದು ನಡೆದ ಸಮ್ಮೇಳನದ ಸಮಾರೋಪವು ಮುನಿರ್ ಕಾಟಿಪಳ್ಳ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಡಿವೈಎಫ್‌ಐ ಅಖಿಲ ಭಾರತ ಉಪಾಧ್ಯಕ್ಷೆ ಪ್ರೀತಿ ಶೇಖರ್ ಅವರು ಮುಖ್ಯ ಅತಿಥಿಯಾಗಿ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದರು.

ಪ್ರಸ್ತುತ ದೇಶ ಎದುರಿಸುತ್ತಿರುವ ಗಂಭೀರ ಬಿಕ್ಕಟ್ಟಿನ ಸನ್ನಿವೇಶದಲ್ಲಿ ಡಿವೈಎಫ್‌ಐ ಮಾತ್ರ ದೇಶದ ಯುವಜನರನ್ನು ಸರಿಯಾದ ದಾರಿಯಲ್ಲಿ ಮುಂದೊಯ್ಯಲು ಸಾಧ್ಯ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಬಲಿಷ್ಟವಾದ ಯುವಜನ ಚಳುವಳಿಯನ್ನು ರೂಪಿಸಲು ಮತ್ತು ಸದೃಢವಾದ ಸಂಘಟನೆಯನ್ನು ಕಟ್ಟಲು ಮುಂದಾಗಬೇಕು. ಕೋಮುವಾದ ಜಾತಿವಾದ ದೇಶವಿರೋಧಿ ಆರ್ಥಿಕ ನೀತಿಗಳ ವಿರುದ್ಧ ಚಳುವಳಿ ಬೆಳೆಸಬೇಕು ಎಂದು ಪ್ರೀತಿ ಶೇಖರ್‌ರವರು ಕರೆ ನೀಡಿದರು.

'ಗೆಲುವು ನಮ್ಮದು' ಹಾಡಿನೊಂದಿಗೆ ಮತ್ತು ಧ್ವಜ ಇಳಿಸುವುದರೊಂದಿಗೆ ಸಮ್ಮೇಳನವು ಮುಕ್ತಾಯಗೊಂಡಿತು.

"ಕಗ್ಗತ್ತಲ ಈ ಕಾಲದಲ್ಲಿ"

ಮಾಜಿ ಮುಖಂಡರ ಸಮ್ಮಿಲನ ಕಾರ್ಯಕ್ರಮ: ಡಿವೈಎಫ್ ಐ ಮಾಜಿ ಮುಖಂಡರುಗಳಾದ ವಿಠ್ಠಲ ಜಿ ಕಮ್ಮಾರ, ಎಸ್.ವೈ ಗುರುಶಾಂತ, ಕೆಎನ್ ಉಮೇಶ್ ಹಾಗೂ ಕೆ ಮಹಂತೇಶ್ ಮಾತನಾಡಿ, ರಾಜ್ಯದಲ್ಲಿ ಚಳುವಳಿ ಕಟ್ಟಿದ ಅನುಭವಗಳನ್ನು ಹಂಚಿಕೊಂಡರು.

ಸಾಮೂಹಿಕ ಸಂಘಟನೆಗಳ ಶುಭ ಕೋರಿಕೆ: ಸಿಐಟಿಯು ರಾಜ್ಯ ಕಾರ್ಯದರ್ಶಿ ಗಳಲ್ಲೊಬ್ಬರಾದ ಕೆ. ಎನ್ ಉಮೇಶ್, ರೈತ ಸಂಘದ ರಾಜ್ಯಾ ಧ್ಯಕ್ಷರಾದ ಜಿಸಿ ಬಯ್ಯಾರೆಡ್ಡಿ, ಗ್ರಾಮ ಪಂಚಾಯತ ನೌಕರ ಸಂಘದ ರಾಜ್ಯಾಧ್ಯಕ್ಷರಾದ ಮಾರುತಿ ಮಾನ್ಪಡೆ, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ಗೌರಮ್ಮ, ಎಸ್ ಎಫ್ ಐ ರಾಜ್ಯಾಧ್ಯಕ್ಷ ವಿ ಅಂಬರೀಷ್, ಅಂಕಣಕಾರ್ತಿ ಕೆ ನೀಲಾ, ಬಿಜಿವಿಎಸ್ ರಾಜ್ಯ ಸಹಕಾರ್ಯದರ್ಶಿ ಆರ್ ರಾಮಕೃಷ್ಣ, ಸಮುದಾಯ ರಾಜ್ಯ ಅ ಧ್ಯಕ್ಷರಾದ ಅಚ್ಯುತ ಹಾಗೂ ದಲಿತ ಹಕ್ಕುಗಳ ಸಮಿತಿ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಅರಳಿಹಳ್ಳಿ ಸಮ್ಮೇಳನಕ್ಕೆ ಶುಭಕೋರಿ ಮಾತನಾಡಿದರು.

ನಿರ್ಣಯಗಳು:

- ಸೌಹಾರ್ಧ ಕರ್ನಾಟಕಕ್ಕಾಗಿ ಬೃಹತ್ ಮಾನವ ಸರಪಳಿ ಯಶಸ್ವಿಗೊಳಿಸಲು,
- ಕೋಮುವಾದದ ವಿರುದ್ಧ,
- ಅಸ್ಪೃಶ್ಯತೆ ವಿರುದ್ಧ ಹಾಗೂ ಪತ್ರಿಕಾ ರಂಗದ ಮೇಲಿನ ಧಾಳಿಗಳನ್ನು ಖಂಡಿಸಿ,
- ನಿರುದ್ಯೋಗವನ್ನು ಕೊನೆಗೊಳಿಸಿ ಉದ್ಯೋಗ ಸೃಷ್ಠಿಗೆ ಒತ್ತಾಯಿಸಿ, ಖಾಸಗೀ ರಂಗದಲ್ಲಿ ಮೀಸಲಾತಿಗಾಗಿ,
- ಗೋವಾ ಕನ್ನಡಿಗರ ಮೇಲಿನ ದೌರ್ಜನ್ಯ ಖಂಡಿಸಿ ಹಾಗೂ ಸೂಕ್ತ ವಸತಿ ವ್ಯವಸ್ಥೆ ಕಲ್ಪಿಸಲು ಆಗ್ರಹಿಸಿ,
- ಮಹಿಳೆಯರ ಮೇಲಿನ ದೌರ್ಜನ್ಯ ನಿಯಂತ್ರಿಸಿ-ದೌರ್ಜನ್ಯ ಮುಕ್ತ ಬದುಕಿನ್ನು ಖಾತ್ರಿಗೊಳಿಸಲು ಒತ್ತಾಯಿಸಿ,
- ರೈತರ ಸಾಲ ಸಂಪೂರ್ಣ ಮನ್ನಾಕ್ಕಾಗಿ ಹಾಗೂ ಎಂಎಸ್ ಸ್ವಾಮಿನಾಥನ್ ಆಯೋಗದ ಶಿಫಾರಸ್ಸುಗಳನ್ನು ಜಾರಿ ಮಾಡಲು

ಒತ್ತಾಯಿಸಿ ಸೇರಿದಂತೆ 25ಕ್ಕೂ ಹೆಚ್ಚು ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು.

ನೂತನ ಸಮಿತಿ

ಕರ್ನಾಟಕ ರಾಜ್ಯದಲ್ಲಿ ಯುವಜನ ಚಳುವಳಿಯನ್ನು ಮುಂದೆ ಕೊಂಡೊಯ್ಯುವ ನಿಟ್ಟಿನಲ್ಲಿ ಸಮ್ಮೇಳನವು 41 ಸದಸ್ಯರನ್ನೊಳಗೊಂಡ ನೂತನ ರಾಜ್ಯ ಸಮಿತಿಯನ್ನು ಆಯ್ಕೆಮಾಡಿತು. ರಾಜ್ಯ ಸಮಿತಿಯು 11 ಜನರ ಪದಾಧಿಕಾರಿಗಳನ್ನು ಆಯ್ಕೆ ಮಾಡಿತು. ನಂತರ ನಡೆದ ಪ್ರಪ್ರಥಮ ರಾಜ್ಯ ಸಮಿತಿ ಸಭೆಯು ಈ ಕೆಳಕಂಡಂತೆ ತನ್ನ ಪದಾಧಿಕಾರಿಗಳನ್ನು ಆಯ್ಕೆ ಮಾಡಿತು.

ಅಧ್ಯಕ್ಷರು: ಮುನೀರ್ ಕಾಟಿಪಳ್ಳ

ಕಾರ್ಯದರ್ಶಿ: ಬಸವರಾಜ ಪೂಜಾರ


ಕಸದ ಕಂಟ್ರಾಕ್ಟರುಗಳ ಮುಷ್ಕರ ಬಯೋಮೆಟ್ರಿಕ್ಸ್ ಇತ್ಯಾದಿ



ಬಿಬಿಎಂಪಿ, ಕಸದ ಕಂಟ್ರಾಕ್ಟರುಗಳ ನಡುವೆ ಹುಸಿ ಕದನದಲ್ಲಿ ಬಿಬಿಎಂಪಿ ಪೌರ ಕಾರ್ಮಿಕರು ಮತ್ತು ಬೆಂಗಳೂರಿನ ನಾಗರಿಕರು ಪರದಾಡುವಂತಾಗಿದೆ. ಬೆಂಗಳೂರಿನ ಕಸದ ಕಂಟ್ರಾಕ್ಟುಗಳು ಭಾರೀ ದೊಡ್ಡ ಡೀಲುಗಳ ಆಗರ. ಬಿಬಿಎಂಪಿ ಸರಕಾರಿ ಇಲಾಖೆ ಅಧಿಕಾರಿಗಳು, ಕಂಟ್ರಾಕ್ಟರುಗಳು, ಅವರ ಬೆಂಬಲಿಗ ಕಾರ್ಪೊರೇಟರುಗಳ ಜಾಲ ಕಸ ವಿಲೇವಾರಿ ಹೆಸರಲ್ಲಿ ನೂರಾರು ಕೋಟಿ ರೂ. ಲೂಟಿ ಹೊಡೆಯುತ್ತದೆ. ಇದರಲ್ಲಿ ಇತರ ಅಕ್ರಮಗಳೊಂದಿಗೆ ಬಿಬಿಎಂಪಿ ಪೌರ ಕಾರ್ಮಿಕರ ಸಂಖ್ಯೆಯನ್ನು ಹೆಚ್ಚ ತೋರಿಸುವುದು, ಅವರಿಗೆ ಕೊಡಬೇಕಾದ ವೇತನಕ್ಕಿಂತ ಕಡಿಮೆ ಕೊಡುವುದು ಪ್ರಮುಖ ವಿಧಾನ. ಸುಮಾರು 32 ಸಾವಿರ ಪೌರಕಾರ್ಮಿಕರನ್ನು ಕಂಟ್ರಾಕ್ಟರುಗಳು ತೋರಿಸುತ್ತಿದ್ದು ಇವರಲ್ಲಿ ಕನಿಷ್ಟ ಶೇ. 40 ಬೋಗಸ್ ಎಂದು ಬಿಬಿಎಂಪಿ ಅಧಿಕಾರಿಗಳ ಅಂದಾಜು.

ಇಷ್ಟೆಲ್ಲಾ ಹಣ ಖರ್ಚು ಮಾಡಿದರೂ ಬೆಂಗಳೂರು ಕಸದ ತೊಟ್ಟಿಯಂತೆ ಕಾಣುತ್ತಿದೆ. ಇದಕ್ಕೆ ಕಡಿವಾಣ ಹಾಕಬೇಕೆಂದು ನಾಗರಿಕ-ರಿಂದ ಆಗಾಗ ತೀವ್ರ ಒತ್ತಡ ಬಂದಿದ್ದರಿಂದ ಬಿಬಿಎಂಪಿ ಎಲ್ಲಾ ಪೌರಕಾರ್ಮಿಕರ ಬಯೋಮೆಟ್ರಿಕ್ಸ್ ರಿಜಿಸ್ಟರ್ ಮಾಡಿ, ಪ್ರತಿದಿನ ಬಯೋಮೆಟ್ರಿಕ್ಸ್ ಹಾಜರಿ ತೆಗೆದುಕೊಳ್ಳುವುದನ್ನು ಜಾರಿ ಮಾಡುವುದಾಗಿ ಹೇಳುತ್ತಾ ಬಂದಿದೆ. ಆದರೆ ಬಿಬಿಎಂಪಿ ಕಮಿಶನರ್ ಈ ಆಜ್ಞೆ ಮಾಡಿದ್ದರೂ, ಕಂಟ್ರಾಕ್ಟರುಗಳ ವಿರೋಧ ಪ್ರತಿರೋಧ ಹಾಗೂ ಬಿಬಿಎಂಪಿ ಅಧಿಕಾರಿಗಳ ಇಚ್ಛಾಶಕ್ತಿಯ ಕೊರತೆಯಿಂದ ಅದು ಇನ್ನೂ ಜಾರಿಯಾಗಿಲ್ಲ. ಇದೇ ವಿಷಯದ ಮೇಲೆ ಬಿಬಿಎಂಪಿ ಅಧಿಕಾರಿಗಳು 2-3 ತಿಂಗಳ ವೇತನ ತಡೆ ಹಿಡಿದಿದ್ದರು, ಕಸದ ಕಂಟ್ರಾಕ್ಟರುಗಳು ಇತ್ತೀಚೆಗೆ ಮುಷ್ಕರ ಹೂಡಿದ್ದರು. ಬಿಬಿಎಂಪಿ ಪೌರ ಕಾರ್ಮಿಕರ ಬೆಂಬಲ ಇದಕ್ಕಿಲ್ಲದಿದ್ದರೂ ಕೆಲಸದಿಂದ ತೆಗೆದು ಹಾಕುವ ಬೆದರಿಕೆ ಬಳಸಿ ಅವರನ್ನು ಮುಷ್ಕರದಲ್ಲಿ ಭಾಗವಹಿಸುವಂತೆ ಕಂಟ್ರಾಕ್ಟರುಗಳು ಬಲವಂತ ಮಾಡಿದ್ದರು. ಆಗ ಸರಕಾರ ಎಸ್ಮಾ ಕಾನೂನು ಬಳಸಿ ಮುಷ್ಕರ ನಿಷೇಧ ಮಾಡಿತ್ತು.

ಪೌರಕಾರ್ಮಿಕರ ಬಯೋಮೆಟ್ರಿಕ್ಸ್ ಜಾರಿ ಒಂದೇ ಇದಕ್ಕೆ ದಾರಿ ಅಲ್ಲ. ಕಂಟ್ರಾಕ್ಟ್ ಪದ್ಧತಿ ತೆಗೆದು ಹಾಕಿ ಪೌರಕಾರ್ಮಿಕರನ್ನು ನೇರವಾಗಿ ನೇಮಕ ಮಾಡಿಕೊಳ್ಳುವುದು ನೇರ ದಾರಿ. ಪೌರಕಾರ್ಮಿಕರ ಬಯೋಮೆಟ್ರಿಕ್ಸ್ ನ್ನು ನಾಗರಿಕರ ಸಂಘ, ಯೂನಿಯನ್ ಆಡಿಟ್ ಮಾಡಬೇಕು. ಇಲ್ಲದಿದ್ದರೆ ಶಾಮೀಲಾಗಿರುವ ಕಂಟ್ರಾಕ್ಟರುಗಳು ಹಾಗೂ ಬಿಬಿಎಂಪಿ ಅಧಿಕಾರಿಗಳ ದುಷ್ಟಕೂಟ ಹಾದಿ ತಪ್ಪಿಸಬಲ್ಲುದು ಎಂದು ಪದೇ ಪದೇ ಹೇಳಲಾಗಿದ್ದರೂ ಅದು ಆಗುತ್ತಿಲ್ಲ. ಮೊದಲಿಗೆ ಬಿಬಿಎಂಪಿ ಕಮಿಶನರ್ ವಾರ್ಡುವಾರು ಬಯೋಮೆಟ್ರಿಕ್ಸ್ ಆಡಿಟ್ ಗೆ ಆಜ್ಞೆ ಮಾಡಿದ್ದರು. ಆದರೆ ಆ ಮೇಲೆ ಕಂಟ್ರಾಕ್ಟರುಗಳು ಮತ್ತು ಕಾರ್ಪೊರೇಟರುಗಳ ಒತ್ತಡದಿಂದ ಆ ಆಜ್ಞೆಯನ್ನು ಹಿಂತೆಗೆದುಕೊಂಡಿದ್ದರು. ಬಯೋಮೆಟ್ರಿಕ್ಸ್ ನಿಂದ ಮಾತ್ರವೇ ಕಸ ನಿರ್ವಹಣೇಯಲ್ಲಿನ ಎಲ್ಲಾ ಹಗರಣಗಳೂ ನಿಲ್ಲುವುದಿಲ್ಲ ಎಂದು ಒಪ್ಪಿಕೊಳ್ಳುವ ಅವರು, ಪ್ರತಿ 700 ನಾಗರಿಕರಿಗೊಬ್ಬ ಪೌರ ಕಾರ್ಮಿಕರಂತೆ 18 ಸಾವಿರ ಪೌರ ಕಾರ್ಮಿಕರನ್ನು ನೇಮಿಸಲಾಗುವುದು ಎಂದು ಹೇಳಿದ್ದಾರೆ.



ವಸಂತರಾಜ್ ಎನ್.ಕೆ.

ಇಂದಿರಾ ಕ್ಯಾಂಟೀನಿಗೂ ಗೊಣಗಾಟ



ಸಿದ್ಧರಾಮಯ್ಯ ಸರಕಾರದ ಆಕಾಂಕ್ಷೆಯ ಯೋಜನೆ ಇಂದಿರಾ ಕ್ಯಾಂಟೀನುಗಳ ಆರಂಭ ಇನ್ನೂ ಪೂರ್ಣಗೊಂಡಿಲ್ಲ. ಯೋಜನೆ ಪ್ರಕಾರ 101 ಅಗಸ್ಟ್ 15ರಂದು (ಸ್ವಾತಂತ್ರ್ಯ ದಿನದಂದು) ಉಳಿದ 97 ಅಕ್ಟೋಬರ್ 2ರಂದು (ಗಾಂಧಿ ಜಯಂತಿಯಂದು) ಉದ್ಘಾಟನೆಯಾಗಿ ಕೆಲಸ ಆರಂಭಿಸಬೇಕಾಗಿತ್ತು. ಮೊದಲಿನದ್ದು ಯೋಜನೆ ಪ್ರಕಾರ ಆಗಿದೆ. ಆದರೆ ಗಾಂಧಿ ಜಯಂತಿಯಂದು 50 ಕ್ಯಾಂಟೀನುಗಳು ಸಿದ್ಧವಾಗಿದ್ದವು. 47 ವಾರ್ಡುಗಳಲ್ಲಿ ಇನ್ನೂ ವಿವಿಧ ಸಮಸ್ಯೆಗಳಿಂದಾಗಿ ಕ್ಯಾಂಟೀನ್ ನಿರ್ಮಾಣ ಪೂರ್ಣಗೊಂಡಿಲ್ಲ. ಈಗಾಗಲೇ ಆರಂಭವಾಗಿರುವ ಕ್ಯಾಂಟೀನುಗಳು ಕೆಲಸ ಮಾಡುವ ಬಗ್ಗೆ ಒಳ್ಳೆಯ ವರದಿಗಳೇ ಬಂದಿವೆ. ಪ್ರತಿ ವಾರ್ಡಿನಲ್ಲಿ ಸುಮಾರು ರೂ. 5 ಕ್ಕೆ ಬೆಳಗಿನ ಉಪಹಾರ ಮತ್ತು ರೂ. 10ಕ್ಕೆ ಮಧ್ಯಾಹ್ನ/ರಾತ್ರಿಯ ಊಟ ಕೊಡುವ ಮೂಲ ಉದ್ದೇಶ ಸುಮಾರಾಗಿ ಈಡೇರುತ್ತಿದೆ. ಕ್ಯೂನಲ್ಲಿ ನಿಂತು ಊಟ/ಉಪಹಾರ ಮುಗಿದು ಹೋದ (500ಕ್ಕಿಂತ ಕಡಿಮೆ ಜನಕ್ಕೆ ಸಿಕ್ಕಿದ) ಉದಾಹರಣೆಗಳು ಅಪರೂಪಕ್ಕೆ ಕೇಳಿ ಬಂದಿವೆ. ಉಪಹಾರ/ಊಟದ ಗುಣಮಟ್ಟದ ಬಗೆಗೂ ಹೆಚ್ಚಾಗಿ ಒಳ್ಳೆಯ ಮಾತುಗಳೇ ಕೇಳಿಬಂದಿವೆ.

ಆಗಾಗ ಇಂದಿರಾ ಕ್ಯಾಂಟೀನ್ ಸುದ್ದಿಯಲ್ಲಿ ಇದ್ದಿದ್ದು ಅವು "ಆಟದ ಮೈದಾನು ಪಾರ್ಕು ಸಾರ್ವಜನಿಕ ಆಸ್ತಿಯನ್ನು ಆಕ್ರಮಿಸಿಕೊಂಡಿವೆ", "ಪರಿಸರ ಹಾಳು ಮಾಡುತ್ತವೆ", "ಕಾನೂನು ಉಲ್ಲಂಘಿಸಿ ಅದಕ್ಕೆ ಜಾಗ ತೆರವು ಮಾಡಲಾಗುತ್ತದೆ" ಇತ್ಯಾದಿ ಕಾರಣಗಳಿಗಾಗಿ. ಇದು ಹೆಚ್ಚಾಗಿ ನಾಗರಿಕ ಕಲ್ಯಾಣ ಸಂಘಗಳಿಂದ ಬಂದಿದೆ. ಆದರೆ ಇದರ ಹಿಂದಿರುವ ದನಿ ನಾಗರಿಕರ ಕಲ್ಯಾಣದ್ದಲ್ಲ. ಅಥವಾ ನಗರ ಪ್ರದೇಶದ ಆಹಾರ ಭದ್ರತೆಯಿಲ್ಲದ ಬಡವರು ಇವರ ಪ್ರಕಾರ "ನಾಗರಿಕ"ರೇ ಅಲ್ಲದಿದ್ದರೆ ಮಾತ್ರ ಇವರ ವಾದ ಒಪ್ಪಲಿಕ್ಕೆ ಸಾಧ್ಯ. ಇಂದಿರಾ ಕ್ಯಾಂಟೀನ್ ನಗರದ ಬಡವರ ಒಂದು ವಿಭಾಗಕ್ಕಾದರೂ ಆಹಾರ ಭದ್ರತೆ ಒದಗಿಸುವ ದೃಢ ಕ್ರಮ. ಇದು ಕಾಂಗ್ರೆಸಿನ ಜನಮರುಳು ರಾಜಕೀಯ ಕ್ರಮ ಇರಬಹುದು. ಆದರೂ ಯಾವುದೇ ಸರಕಾರ ಕೈಗೊಳ್ಳಬೇಕಾದ ಸಾರ್ವಜನಿಕ ಹಿತಾಸಕ್ತಿಯ ಕ್ರಮ. ಇದಕ್ಕೆ ಸಾರ್ವಜನಿಕ ಆಸ್ತಿಯ ಒಂದು ಭಾಗವನ್ನು ಬಳಸುವುದರಲ್ಲಿ ಏನೂ ತಪ್ಪಿಲ್ಲ. ಇದನ್ನು ಯುದ್ದೋಪಾದಿಯಲ್ಲಿ ಜಾರಿ ಮಾಡಿದ್ದೂ ಸರಿಯಾಗಿಯೇ ಇದೆ. ಬಡವರ ಆಹಾರ ಭದ್ರತೆಯ ಕ್ರಮವನ್ನು "ಕೀಳು ರಾಜಕೀಯ" ಎನ್ನುವ ಈ "ನಾಗರಿಕ ಕಲ್ಯಾಣ ಸಂಘ"ಗಳ ಸಂಕುಚಿತ ವರ್ಗ ದೃಷ್ಟಿಕೋಣದಲ್ಲಿ ದೋಷ ಇದೆ. ಈ ಕ್ರಮದಲ್ಲಿ ಅಲ್ಲ, ಉಳಿದ 47 ಕ್ಯಾಂಟೀನುಗಳು ಯುದ್ದೋಪಾದಿಯಲ್ಲಿ ತಯಾರಾಗಿ ಆರಂಭವಾಗಬೇಕು. ಇಂದಿರಾ ಕ್ಯಾಂಟೀನ್ ಗಳಿಗೆ ಕೊಡುವ ಸಬ್ಸಿಡಿ ಆಹಾರ ಭದ್ರತೆಯ ಕ್ರಮ. ಇಂತಹ ಇಂದಿರಾ ಕ್ಯಾಂಟೀನ್ ಗಳನ್ನು ಇತರ ಪ್ರಮುಖ ನಗರಗಳಲ್ಲೂ ಆರಂಭಿಸಬೇಕು.

ಇಂದಿರಾ ಕ್ಯಾಂಟೀನ್ ಗಳಲ್ಲಿ ಏನಾದರೂ ದೋಷವಿದ್ದರೆ ಉತ್ತಮಪಡಿಸಬೇಕೆಂದಿದ್ದರೆ, ತಮಿಳುನಾಡಿನ ಅಮ್ಮ ಕ್ಯಾಂಟೀನುಗಳಂತೆ ಅಡಿಗೆಯನ್ನು (ಈಗಿನಂತೆ ಕ್ಷೇತ್ರಕ್ಕೊಂದರಂತೆ ಕೇಂದ್ರೀಯ ಕಿಚನ್ ಗಳಲ್ಲಿ ಮಾಡದೆ) ಮಹಿಳಾ ಸ್ವ-ಸಹಾಯ ಗುಂಪುಗಳಿಂದ ಪ್ರತಿ ಕ್ಯಾಂಟೀನಿನಲ್ಲೇ ಮಾಡಬೇಕು.

ಸಾಲಮನ್ನಾ ಹಣ ಇನ್ನೂ ಬಿಡುಗಡೆಯಾಗಿಲ್ಲ

ಸಹಕಾರಿ ಸಂಘಗಳಲ್ಲಿ ಜೂನ್ 20ರವರೆಗೆ ರೈತರು ಪಡೆದ ಬೆಳೆ ಸಾಲದಲ್ಲಿ ರೂ. 50 ಸಾವಿರ ವರೆಗಿನ ಮೊತ್ತವನ್ನು ರಾಜ್ಯ ಸರಕಾರ ಮನ್ನಾ ಮಾಡಿದೆ. ಇದರಿಂದ ಒಟ್ಟು 22.27 ಲಕ್ಷ ರೈತರಿಗೆ ಪ್ರಯೋಜನವಾಗಲಿದೆ. ಸರಕಾರಕ್ಕೆ ಒಟ್ಟು ರೂ. 8,165 ಕೋಟಿ ಖರ್ಚಾಗುತ್ತದೆ ಎಂದು ಅಂ-ದಾಜು ಮಾಡಲಾಗಿದೆ. ಆದರೆ ಸರಕಾರದ ಆರ್ಥಿಕ ಇಲಾಖೆ ಇದಕ್ಕೆ ಬೇಕಾದ ಹಣ ಬಿಡುಗಡೆ ಮಾಡಿಲ್ಲ. ಅಥವಾ ಯಾವುದೇ ವ್ಯವಸ್ಥೆ ಮಾಡಿಲ್ಲ. ಸಹಕಾರಿ ಸಂಘಗಳಿಗೆ ನೀಡಬೇಕಾದ ಮೂರು (ಜೂನ್-ಅಗಸ್ಟ್) ತಿಂಗಳುಗಳ ರೂ. 1383.13 ಕೋಟಿ ಸಾಲ ಮನ್ನಾ ಬಿಲ್ ಮಾತ್ರ ಸಿದ್ದ ಪಡಿಸಿದೆ.

ರೈತರಿಗೆ ಹೊಸ ಸಾಲದ ಸಮಸ್ಯೆ ಸಹ ಎದುರಾಗಲಿದೆ ಎಂದು ಹೇಳಲಾಗಿದೆ. ಡಿಸಿಸಿ (ಜಿಲ್ಲಾ ಸಹಕಾರ ಕೇಂದ್ರ) ಬ್ಯಾಂಕುಗಳು ಸ್ವಂತ ಬಂಡವಾಳ ಬಳಸಿಕೊಂಡು ಸಹಕಾರಿ ಸಂಸ್ಥೆಗಳ ಮೂಲಕ ರೈತರಿಗೆ ಹೊಸ ಬೆಳೆ ಸಾಲ ನೀಡುತ್ತಿವೆ. ಈ ವರ್ಷ ಈ ವರೆಗೆ 11 ಲಕ್ಷ ರೈತರಿಗೆ ರೂ. 5000 ಕೋಟಿ ಸಾಲ ನೀಡಲಾಗಿದೆ. ಸಹಕಾರಿ ಸಂಘಗಳು ಅಲ್ಪಾವಧಿ ಸಾಲ ನೀಡಲು ಬಳಸಿದ ಒಟ್ಟು ಮೊತ್ತದ ಶೇ. 55ರಷ್ಟನ್ನು ನಬಾರ್ಡ್ (ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್) ಸಾಲದ ರೂಪದಲ್ಲಿ ಭರಿಸುತ್ತಿತ್ತು. ಆದರೆ ಪ್ರಸಕ್ತ ಆರ್ಥಿಕ ವರ್ಷ ನಬಾರ್ಡ್ ಈ ಪ್ರಮಾಣವನ್ನು ಶೇ. 40ಕ್ಕೆ ಇಳಿಸಿದೆ. ಇದರಿಂದ ರೈತರಿಗೆ ಹೊಸ ಸಾಲದ ಸಮಸ್ಯೆ ಎದುರಾಗಲಿದೆ ಎಂದು ನಿರೀಕ್ಷಿಸಬಹುದು.

"ಆರೋಗ್ಯ ಭಾಗ್ಯ" ನೋಂದಣಿಗೆ ರೂ. 450 ಕೋಟಿ?

ರಾಜ್ಯ ಸರಕಾರದ ಮಹತ್ವಾಕಾಂಕ್ಷೆಯ "ಆರೋಗ್ಯ ಭಾಗ್ಯ ಯೋಜನೆ"(ಯುನಿವರ್ಸಲ್ ಹೆಲ್ತ್ ಸ್ಕೀಂ) ಯಲ್ಲಿ ಫಲಾನುಭವಿಗಳ ನೋಂದಣಿಗೆ ಅಲ್ಪಾವಧಿ ಟೆಂಡರ್ ಕರೆದಿದೆ. ಅದಕ್ಕಾಗಿ ರೂ. 450 ಕೋಟಿ ಖರ್ಚು ಮಾಡಲು ಹೊರಟಿದೆ. ಟೆಂಡರ್ ನಲ್ಲಿ ಭಾರೀ ತರಾತುರಿ ಹಲವರು ಹುಬ್ಬೇರಿಸುವಂತೆ ಮಾಡಿದೆ. ಸೆ.22 ರಂದು ಟೆಂಡರ್ ಕರೆಯಲಾಯಿತು. ಕೇವಲ 12 ಕಂಪನಿಗಳಿಗೆ ಟೆಂಡರ್ ಪೂರ್ವಭಾವಿ ಸಭೆಗೆ ಕರೆಯಲಾಗಿತ್ತು. ಸೆ. 30 ಬಿಡ್ ಗೆ ಕೊನೆಯ ದಿನ. ಅಕ್ಟೋಬರ್ 4ರಂದು ಬಿಡ್ ತೆರೆಯುವ ದಿನ. ನವೆಂಬರ್ 1ರಂದು ಜಾರಿಗೆ ಬರುವ "ಆರೋಗ್ಯ ಭಾಗ್ಯ ಯೋಜನೆ"ಗೆ ಫಲಾನುಭವಿಗಳನ್ನು ನೋಂದಣಿ ಮಾಡುವುದು ಕೆಲಸ. ಈ ಪ್ರಕ್ರಿಯೆಗೆ ಅಲ್ಪಾವಧಿ ಟೆ-ಂಡರ್ ಕರೆದಿದ್ದನ್ನು 30 ಕಂಪನಿಗಳು ವಿರೋಧಿಸಿವೆ. ಈ ಯೋಜನೆಗೆ ಫಲಾನುಭವಿಗಳನ್ನು ನೋಂದಣಿ ಮಾಡಲು ಟೆಂಡರ್ ಕರೆಯುವ ಅಗತ್ಯವೇ ಇರಲಿಲ್ಲ. ಶೇ. 94 ರಷ್ಟು ಕವರ್ ಇರುವ ಆಧಾರ್ ಜತೆ ವಿಳಾಸ ಇತ್ಯಾದಿ ಮಾಹಿತಿ ಇದೆ. ಇದೇ ಮಾಹಿತಿ ಬಳಸಿ ಫಲಾನುಭವಿಗಳನ್ನು ಗುರುತಿಸಬಹುದು ಎಂದು ತಿಳಿಸಲಾಗಿದೆ.

ರಾಜ್ಯದ ಎಲ್ಲಾ ನಾಗರಿಕರಿಗೆ ಆರೋಗ್ಯ ರಕ್ಷಣೆ ಒದಗಿಸುವ ಈ ಯೋಜನೆ ಈಗ ಜಾರಿಯಲ್ಲಿರುವ 8 ಆರೋಗ್ಯ ಯೋಜನೆಗಳನ್ನು ವಿಲೀನಗೊಳಿಸುತ್ತದೆ. ಅಂದಾಜು 1.4 ಲಕ್ಷ ಕುಟುಂಬಗಳು ರೂ. 1.5 ಲಕ್ಷದ ವರೆಗೆ ಪ್ರಯೋಜನ ಪಡೆಯಲಿದ್ದಾರೆ. ತುರ್ತು ಚಿಕಿತ್ಸೆ ಸಂದರ್ಭದಲ್ಲಿ ರೂ. 50 ಸಾವಿರ ನೀಡಲಾಗುತ್ತದೆ. ಆದ್ಯತಾ ವಲಯದಲ್ಲಿ 1.05 ಕೋಟಿ ಬಿಪಿಎಲ್ ಕುಟುಂಬಗಳನ್ನು ಗುರುತಿಸಲಾಗಿದೆ. ಆದ್ಯತೆ-ೇತರ ವಲಯದಲ್ಲಿ 30 ಲಕ್ಷ ಕುಟುಂಬಗಳನನು ಗುರುತಿಸಲಾಗಿದೆ. ಇದು ಒಂದು ಒಳ್ಳೆಯ ಆರೋಗ್ಯ ಯೋಜನೆ ಆಗಿದ್ದರೂ ಫಲಾನುಭವಿಗಳ ನೋಂದಣಿಗೆ ಅಲ್ಪಾವಧಿ ಟೆಂಡರ್ ಏಕೆ ಕರೆಯಲಾಯಿತು ಎಂಬುದು ನಿಗೂಢವಾಗಿಯೇ ಉಳಿದಿದೆ.

ಉದ್ಯೋಗ ನಿರ್ಮಾಣದ ಬದಲು ಇಳಿಕೆ: ಆರ್ಥಿಕ ಮುಗ್ಗರಿಕೆ ಒಪ್ಪಿಕೊಳ್ಳಬೇಕಾದ ಸ್ಥಿತಿ

ವರ್ಷದಲ್ಲಿ 2 ಕೋಟಿ ಉದ್ಯೋಗ ನಿರ್ಮಾಣದ ಭರವಸೆ ಪ್ರಕಾರ ಈ ವರೆಗೆ 6 ಕೋಟಿ ಉದ್ಯೋಗಗಳು ನಿರ್ಮಾಣವಾಗುವ ಬದಲು ಕನಿಷ್ಟ 37ಲಕ್ಷ ಉದ್ಯೋಗಗಳು ಕಡಿತಗೊಂಡಿವೆ ಎಂದು ಇತ್ತೀಚಿನ ಅಧ್ಯಯನವೊಂದು ತೋರಿಸಿದೆ.

ಅಂದರೆ 'ಅಚ್ಛೇ ದಿನ್'ಗಳಲ್ಲಿ ವಾಸ್ತವವಾಗಿ ಉದ್ಯೋಗಾವಕಾಶಗಳ ನಿರ್ಮಾಣದ ದರ ಏರುವ ಬದಲು ಇಳಿದಿರುವುದು ಮಾತ್ರವಲ್ಲ, ಉದ್ಯೋಗಗಳೇ ಇಳಿದಿವೆ, **ಬಹುಶಃ ಸ್ವತಂತ್ರ ಭಾರತದಲ್ಲಿ ಮೊತ್ತ ಮೊದಲ ಬಾರಿಗೆ ಇಂತಹ ಬಿಕ್ಕಟ್ಟು ಉಂಟಾಗಿದೆ ಎಂದು** ತಿರುವನಂತಪುರದ ಸೆಂಟರ್ ಫಾರ್ ಡೆವಲಪ್‌ಮೆಂಟಲ್ ಸ್ಟಡೀಸ್(ಸಿಡಿಎಸ್)ನ ಸಂಶೋಧಕ ವಿನೋಜ್ ಅಬ್ರಹಾಂ ಪ್ರಖ್ಯಾತ ಆರ್ಥಿಕ ಪತ್ರಿಕೆ ಇಪಿಡಬ್ಲ್ಯು ನಲ್ಲಿ ಪ್ರಕಟಿಸಿರುವ ಅಧ್ಯಯನ ತಿಳಿಸುತ್ತದೆ.

ಉದ್ಯೋಗ ನಿರ್ಮಾಣ ಮಾಡುವ ಮೂರು ಪ್ರಮುಖ ವಲಯಗಳಾದ ಕಟ್ಟಡ ನಿರ್ಮಾಣ, ತಯಾರಿಕ ಮತ್ತು ಮಾಹಿತಿ ತಂತ್ರಜ್ಞಾನ ಸೇವೆಗಳಲ್ಲಿ ಇದು ಎದ್ದು ಕಾಣುತ್ತಿದೆಯಂತೆ.ಈ ತಜ್ಞರು ಸರಕಾರವೇ ಪ್ರಕಟಿಸುವ ಲೇಬರ್ ಬ್ಯುರೊದ ಉದ್ಯೋಗ–ನಿರುದ್ಯೋಗ ಸರ್ವೆ, ತ್ರೈಮಾಸಿಕ ತ್ವರಿತ ಉದ್ಯೋಗ ಸರ್ವೆ ಮತ್ತು ಪರಿಷ್ಕೃತ ತ್ರೈಮಾಸಿಕ ತ್ವರಿತ ಉದ್ಯೋಗ ಸರ್ವೆಯ ಮಾಹಿತಿಗಳನ್ನು ಸಂಯೋಜಿಸಿ ಈ ಅಧ್ಯಯನವನ್ನು ನಡೆಸಿದ್ದಾರೆ.

ಲೇಬರ್ ಬ್ಯುರೊ ಮಾಹಿತಿ ಪ್ರಕಾರ 2013–14 ಮತ್ತು 2015–166ರ ನಡುವೆ ದೇಶದಲ್ಲಿ ಒಟ್ಟು ಉದ್ಯೋಗಾವಕಾಶ ವಾರ್ಷಿಕವಾಗಿ 0.4% ದಷ್ಟು ಸಂಕುಚಿತಗೊಂಡಿದೆ. ಅಂದರೆ 37.4 ಲಕ್ಷ ಜನ ನಿರುದ್ಯೋಗಿಗಳಾಗಿದ್ದಾರೆ.

ಉದ್ಯೋಗ ನಿರ್ಮಾಣದಲ್ಲಿ ಇಳಿಕೆ ಕಳೆದ ಮೂರುವರ್ಷಗಳಲ್ಲಿ ಅತ್ಯಂತ ತೀವ್ರ ಮಟ್ಟವನ್ನು ತಲುಪಿದೆ ಎಂದು ಈ ಅಧ್ಯಯನದಲ್ಲಿ ಕಂಡು ಬಂದಿದೆಯಂತೆ.

ಆರಿಸಿದ ವಲಯಗಳಲ್ಲಿ ಉದ್ಯೋಗ ನಿರ್ಮಾಣ * ಮಾರ್ಚ್ 2010ರಿಂದ ಮಾರ್ಚ್ 2012 ರ ನಡುವೆ 18.15 ಲಕ್ಷದಷ್ಟಿತ್ತು * ಮಾರ್ಚ್ 2012ರಿಂದ ಮಾರ್ಚ್ 2014 ರ ನಡುವೆ ಅದು 6.2ಲಕ್ಷಕ್ಕೆ ಇಳಿಯಿತು.* ಮಾರ್ಚ್ 2014ರಿಂದ ಡಿಸೆಂಬರ್ 2015 ರ ನಡುವೆ 5.92ಲಕ್ಷಕ್ಕೆ ಇಳಿಯಿತು. ಈ ಅಂಕಿ–ಅಂಶಗಳ ಆಧಾರದಲ್ಲಿ ಅಬ್ರಹಾಂ ಪ್ರಕಾರ ಮೂಡಿ ಬರುವ ಚಿತ್ರ ಎಂದರೆ, **"ಇದು ಸಂಘಟಿತ ವಲಯದಲ್ಲಿ ಉದ್ಯೋಗಾವಕಾಶಗಳ ಬೆಳವಣಿಗೆ ದರ ತೀವ್ರವಾಗಿ ಇಳಿಯುತ್ತಿದ್ದರೆ, ಬಹುಶಃ ಬಹುಪಾಲು ಅಸಂಘಟಿತ ವಲಯದಲ್ಲಿ ಇದ್ದ ಉದ್ಯೋಗಗಳೇ ಕಡಿತಗೊಳ್ಳುತ್ತಿವೆ, ಇದರಿಂದಾಗಿ ಭಾರತದಲ್ಲಿ ಉದ್ಯೋಗಗಳ ಪ್ರಮಾಣವೇ ಇಳಿಯುತ್ತಿದೆ,"**

ಇಂತಹ ಉದ್ಯೋಗ ಮಾರುಕಟ್ಟೆಯ ಬಿಕ್ಕಟ್ಟಿನ ಅಂದರೆ ಉದ್ಯೋಗಾವಕಾಶಗಳಲ್ಲಿ ಕಡಿತದ ಬಹುಪಾಲು ಹೊರೆ ಕಾರ್ಮಿಕ ವರ್ಗದ ಅತಿ ದುರ್ಬಲ ಭಾಗದ ಮೇಲೆ ಬಿದ್ದಿದೆ ಎನ್ನುತ್ತಾರೆ ವಿನೋಜ್ ಅಬ್ರಹಾಂ.

ಕೆಲವು ಪ್ರಮುಖ ಸಂಘಟಿತ ವಲಯದ ಉದ್ದಿಮೆಗಳ ಅಂಕಿ–ಅಂಶಗಳನ್ನು 'ಇಂಡಿಯನ್ ಎಕ್ಸ್‌ಪ್ರೆಸ್' ಸಂಗ್ರಹಿಸಿ ಪ್ರಕಟಿಸಿದೆ. ಕೇಂದ್ರ ಜವಳಿ ಇಲಾಖೆಯ ಪ್ರಕಾರ, ಬಟ್ಟೆ ಉದ್ಯಮದಲ್ಲಿ 2015 ಮತ್ತು 2017 ರ ಹಣಕಾಸು ವರ್ಷಗಳ ನಡುವೆ 67 ಘಟಕಗಳು ಮುಚ್ಚಿವೆ, ಇದರಿಂದಾಗಿ 17,600 ಉದ್ಯೋಗಗಳು ನಷ್ಟಗೊಂಡಿವೆ; ತಯಾರಿಕಾ ವಲಯದ ಲಾರ್ಸನ್–ಟುಬ್ರೊ 14,000 ನೌಕರರನ್ನು ಲೇ ಆಫ್ ಮಾಡಿದೆ; ಪ್ರಸಕ್ತ ಹಣಕಾಸು ವರ್ಷದ ಮೂರು ತಿಂಗಳಲ್ಲಿ ಟಿಸಿಎಸ್ ನಲ್ಲಿ 1414, ಇನ್ಫೊಸಿಸ್‌ನಲ್ಲಿ 1811 ಮತ್ತು ಟೆಕ್ ಮಹಿಂದ್ರದಲ್ಲಿ 1713 ಉದ್ಯೋಗಗಳು ಕಡಿತಗೊಂಡಿವೆ ಎನ್ನಲಾಗಿದೆ.

ಹಣಕಾಸು ವಲಯದಲಿಯೂ ಇಂತಹುದೇ ಕತೆ. ಹೆಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ಕಳೆದ ವರ್ಷ ಅಕ್ಟೋಬರ್–ಡಿಸೆಂಬರ್‌ನಲ್ಲಿ ನೌಕರರ ಸಂಖ್ಯೆಯಲ್ಲಿ 4581 ಕಡಿತಗೊಂಡಿದ್ದರೆ, ಈ ವರ್ಷ ಜನವರಿ–ಮಾರ್ಚ್‌ನಲ್ಲಿ ಇನ್ನೂ 6096 ಕಡಿತಗೊಂಡಿದೆ. ಇತರ ಖಾಸಗಿ ಬ್ಯಾಂಕುಗಳಲ್ಲಿಯೂ ಇಂತಹುದೆ ಕಡಿತ ನಡೆಯುತ್ತಿರುವುದಾಗಿ ಇಂಡಿಯನ್ ಎಕ್ಸ್‌ಪ್ರೆಸ್ ವರದಿ ಮಾಡಿದೆ.

2016ರಲ್ಲಿ 212 ಸ್ಟಾರ್ಟ್‌ಅಪ್‌ಗಳು ಮುಚ್ಚಿದವು. ಇದು ಹಿಂದಿನ ವರ್ಷದ ಒಂದೂವರೆ ಪಟ್ಟು.

ನಿಂತು ಹೋದ ಪ್ರಾಜೆಕ್ಟುಗಳ ಪ್ರಮಾಣ ಸತತ ಐದನೇ ತ್ರೈಮಾಸಿಕದಲ್ಲೂ ಏರುತ್ತ ಹೋಗಿ ಸಪ್ಟಂಬರ್ 30, 2017ರ ವೇಳೆಗೆ ಇಂತಹ ಪ್ರಾಜೆಕ್ಟ್‌ಗಳ ಮೊತ್ತ 13.22 ಲಕ್ಷ ಕೋಟಿ ರೂ.ಗಳಿಗೇರಿದೆ. ಇದು ಇನ್ನೊಂದು ಶಿಖರ ಎಂದು ಸಿಎಂಐಇ ಹೇಳಿದೆ.

ಈ ಹಿನ್ನೆಲೆಯಲ್ಲಿ ರಿಝರ್ವ್ ಬ್ಯಾಂಕ್ ಕೂಡ ತನ್ನ ದ್ವೈಮಾಸಿಕ ಪರಾಮರ್ಶೆಯಲ್ಲಿ ಸರಕಾರವೂ ಸೇರಿದಂತೆ ಹಲವರು, ಹೆಚ್ಚಾಗಿ ಬಂಡವಳಿಗರು ಬಯಸಿದಂತೆ ಬ್ಯಾಂಕ್ ದರಗಳನ್ನು ಬದಲಿಸಲು ನಿರಾಕರಿಸಿ ಆರ್ಥಿಕ ವ್ಯವಸ್ಥೆ ಗಂಭೀರ ಸ್ಥಿತಿಯಲ್ಲಿದೆ ಎಂಬುದರ ಸಂಕೇತವನ್ನು ಕೊಟ್ಟಿದೆ.

ಆಳುವ ಪಕ್ಷದ ಅಧ್ಯಕ್ಷರು ಇವೆಲ್ಲ 'ತಾಂತ್ರಿಕ' ಸಂಗತಿಗಳಷ್ಟೇ, ಆರ್ಥಿಕ ಪ್ರಗತಿ ಭರದಿಂದ ಸಾಗಿದೆ ಎಂದು ಹೇಳಿದ ಎರಡು ವಾರಗಳ ನಂತರ ಈಗ ಪ್ರಧಾನ ಮಂತ್ರಿಗಳೂ ಆರ್ಥಿಕ ಮುಗ್ಗರಿಸುತ್ತಿದೆ ಎಂದು ನೇರವಾಗಿ ಒಪ್ಪಿಕೊಳ್ಳದಿದ್ದರೂ ಬೆಳವಣಿಗೆ ನಿಧಾನಗೊಂಡಿದೆ ಎಂದು ಒಪ್ಪಿಕೊಂಡಿದ್ದಾರೆ. ಆದರೆ ಅದಕ್ಕೆ ಹಿಂದಿನ ಯುಪಿಎ ಸರಕಾರ ಕಾರಣ ಎಂದು ತನ್ನ ಮೂರು ವರ್ಷಗಳ ಆಳ್ವಿಕೆಯ ನಂತರ ಹೇಳಿರುವುದು ಹಾಸ್ಯಾಸ್ಪದವೆನಿಸದಿರದು.


ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಅಬಕಾರಿ ಸುಂಕಗಳನ್ನು ಮೊತ್ತ ಮೊದಲ ಬಾರಿಗೆ ತುಸು ಇಳಿಸಲು ಮುಂದಾಗಿರುವುದೂ ಸರಕಾರವನ್ನು ಜನಗಳನ್ನು ಎದುರಿಸಬೇಕಾದ ಭೀತಿ ಆವರಿಸುವುದರ ಸಂಕೇತ ಎಂದು ವೀಕ್ಷಕರು ಅಭಿಪ್ರಾಯ ಪಡುತ್ತಿದ್ದಾರೆ.

ಕೆಲವೇ ದಿನಗಳ ಹಿಂದೆ ಈ ಸರಕಾರದ ಮಂತ್ರಿಗಳಲ್ಲಿ ಒಬ್ಬರು ಪೆಟ್ರೋಲ್–ಡೀಸೆಲ್ ಬಳಸುವವರು ಶ್ರೀಮಂತರು, ತೆರಲಿ ಬಿಡಿ ಎಂಬಂತೆ ಮಾತಾಡಿದರೆ, ಇನ್ನೊಬ್ಬರು ಇದರಿಂದ ದೇಶದ ಪ್ರಗತಿಗೆ ಹಣ ಸಿಗುತ್ತದೆ ಎಂದು ಸಮರ್ಥಿಸಿಕೊಂಡಿದ್ದರು. ಆದರೆ ಜನಗಳು ಈಗ ಇಂತಹ ಸಬೂಬುಗಳನ್ನು ಒಪ್ಪುವುದಿಲ್ಲ ಎಂದು ಮನಗಂಡ ನಂತರ ಸಾಂಕೇತಿಕವಾಗಿ ಅಬಕಾರಿ ಸುಂಕವನ್ನು ಲೀಟರಿಗೆ 2ರೂ. ಇಳಿಸಲಾಗಿದೆ.

ಕಳೆದ ಮೂರು ವರ್ಷಗಳಲ್ಲಿ ಈ ಸರಕಾರ 11ಬಾರಿ ಅಬಕಾರಿ ಸುಂಕಗಳನ್ನು ಏರಿಸಿ ಅದನ್ನು ಪೆಟ್ರೋಲ್ ಮೇಲೆ ಲೀಟರಿಗೆ 21.48 ರೂ.ಗೆ, ಲೀಟರ್ ಮೇಲೆ 17.33ಗೆ ತಲುಪಿಸಿ ಈಗ ಭಾರೀ ಪ್ರತಿಭಟನೆಯ ನಂತರ 19.48ರೂ.ಮತ್ತು 15.33ರೂ.ಗಷ್ಟೇ ಇಳಿಸಿದೆ ಎಂಬುದು ಗಮನಾರ್ಹ.

ಮುಂಬೈ ಸೇತುವೆ ದುರಂತ, ಸಂತಾಪ ಟ್ವೀಟ್ ಮತ್ತು 'ಉತ್ತಮ ಆಳ್ವಿಕೆ'

"ಮುಂಬೈಯಲ್ಲಿ ಕಾಲ್ತುಳಿತದಿಂದ ಪ್ರಾಣ ಕಳಕೊಂಡಿರುವ ಎಲ್ಲರಿಗೂ ನನ್ನ ಅತ್ಯಂತ ಆಳವಾದ ಸಂತಾಪಗಳು. ಗಾಯಗೊಂಡಿರುವವರ ಜೊತೆಗೆ ಪ್ರಾರ್ಥನೆಗಳು" ಇದು ಸಪ್ಟಂಬರ್ 29 ರಂದು ಪ್ರಧಾನ ಮಂತ್ರಿಗಳು ಮುಂಬೈಯ ಎಲ್ಫಿನ್‌ಸ್ಟನ್ ರೋಡ್ ರೈಲ್ವೆ ನಿಲ್ದಾಣದ ಪಾದಚಾರಿ ಮೇಲ್ಸೇತುವೆಯಲ್ಲಿ ಕಾಲ್ತುಳಿತದಿಂದ 22 ಜನ ಪ್ರಾಣ ಕಳಕೊಂಡ ಮತ್ತು 35ಕ್ಕೂ ಹೆಚ್ಚು ಮಂದಿ ಗಾಯಗೊಂಡ ಘಟನೆಯ ಬಗ್ಗೆ ಮಾಡಿದ್ದ ಟ್ವೀಟ್. ಆದರೆ ಕೆಲವೇ ಗಂಟೆಗಳಲ್ಲಿ ಅದನ್ನು ತೆ–ಗೆದು ಹಾಕಲಾಯಿತು. ಸಾಮಾನ್ಯವಾಗಿ ಪ್ರಧಾನಿಗಳೇ ಸ್ವತಃ ತಮ್ಮ ಟ್ವೀಟ್‌ಗಳನ್ನು ಹಾಕುವುದರಿಂದ ಅದನ್ನು ತೆಗೆದಿರುವುದು ಕೂಡ ಅವರೇ ಇರಬಹುದು ಎಂದು ಊಹಿಸಲಾಗಿದೆ.



ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಂಸ್ ಆಫ್ ಇಂಡಿಯ

ಎಂಟು ವರ್ಷಗಳಿಂದ ಟ್ವಿಟ್ ಮಾಡುತ್ತಿರುವ ಪ್ರಧಾನಿಗಳು ಇದುವರೆಗೆ 16,722 ಬಾರಿ ಅದನ್ನು ಬಳಸಿದ್ದಾರಂತೆ. ಆದರೆ ಹೀಗೆ ಹಿಂತೆಗೆದುಕೊಂಡದ್ದಿಲ್ಲವಂತೆ. ಹಾಗಿದ್ದರೆ ಏಕೆ ಹಿಂತೆದುಕೊಂಡರು? ಭಾಷೆ ಸರಿಯಾಗಿಲ್ಲವೆಂದಿರಬಹುದೇ? ಏಕೆಂದರೆ ಸಂತಾಪವನ್ನು ಸತ್ತವರ ಕುಟುಂಬಗಳಿಗೆ ತಿಳಿಸುವ ಬದಲು ಸತ್ತವರಿಗೇ ತಿಳಿಸಲಾಗಿದೆ. ಆದರೆ ಅದು ನಿಜವಾದ ಕಾರಣವಿರಲಿಕ್ಕಿಲ್ಲ ಎಂದು ಭಾವಿಸಲಾಗಿದೆ.

ವಾಸ್ತವವಾಗಿ ಅವರ ಈ ಟ್ವೀಟ್‌ನ್ನು ಟೀಕಿಸುವ, ಮೂದಲಿಸುವ ಟ್ವೀಟ್‌ಗಳು ದೊಡ್ಡ ಸಂಖ್ಯೆಯಲ್ಲಿ ಬಂದಿವೆ, ಹೆಚ್ಚಾಗಿ ಆಕ್ರೋಶಗೊಂಡ ಮುಂಬೈ ನಿವಾಸಿಗಳಿಂದ. ಏಕೆಂದರೆ ಕಳೆದ ಎರಡು ವರ್ಷಗಳಲ್ಲಿ ಇಂತಹುದೊಂದು ಅಪಘಾತ ನಡೆಯದಂತೆ ಕ್ರಮ ಕೈಗೊಳ್ಳಿ ಎಂದು ಸರಕಾರಕ್ಕೆ, ರೈಲ್ವೆ ಇಲಾಖೆಗೆ ನೂರಾರು ಮನವಿಗಳು ಹೋಗಿದ್ದುವಂತೆ. ಒಬ್ಬರಂತೂ ಹಿಂದಿನ ರೈಲ್ವೆ ಮಂತ್ರಿ ಸುರೇಶ ಪ್ರಭುರವರಿಗೆ "ಯಾರಾದರೂ ಸತ್ತಾಗ, ಅಥವ ಅವಘಡ ಸಂಭವಿಸಿದರೆ ಮಾತ್ರವೇ ಎಚ್ಚೆತ್ತುಕೊಳ್ಳುತ್ತೀರಾ" ಎಂದೂ ಆಕ್ರೋಶ ವ್ಯಕ್ತಪಡಿಸಿದ್ದರಂತೆ. ಈಗ ಹಾಗೇ ಆಗಿದೆ. ಈ ಸೇತುವೆಯ ವಿಸ್ತರಣೆಗೆ ಕೊನೆಗೂ ಅರೆಮನಸ್ಸಿನಿಂದ ಮಂಜೂರು ಮಾಡಿದ್ದ ಹಣವನ್ನು ಈಗ ಬಿಡುಗಡೆ ಮಾಡಲಾಗಿದೆ.

ಆದ್ದರಿಂದ ಸಹಜವಾಗೇ 1.1ಲಕ್ಷ ಕೋಟಿ ರೂ.ಬುಲೆಟ್ ಟ್ರೇನ್, 3600 ಕೋಟಿ ರೂ. ಶಿವಾಜಿ ಪ್ರತಿಮೆ, ಹೆಸರು ಬದಲಾವಣೆಯಂತಹ ಢಂಬಾಚಾರದ ಪ್ರಾಜೆಕ್ಟುಗಳ ಬಗ್ಗೆ ತೀವ್ರವಾಗಿ ಟೀಕೆಗಳನ್ನು ಪ್ರಧಾನಿಗಳ ಈ ಟ್ವೀಟ್ ಎದುರಿಸಬೇಕಾಗಿ ಬಂತು. ರೈಲ್ವೆಯಲ್ಲಿ ಮಾತ್ರವಲ್ಲ, ಒಟ್ಟಾರೆ–ಯಾಗಿ ಈ ಸರಕಾರದ ಆದ್ಯತೆಗಳೇನು, ಅಂದರೆ ಇವರ 'ಉತ್ತಮ ಆಳ್ವಿಕೆ' ಯಾರಿಗಾಗಿ ಎಂಬ ಪ್ರಶ್ನೆಯನ್ನು ಇದು ಮತ್ತೆ ಮುಂಚೂಣಿಗೆ ತಂದಿದೆ.



'ನಯಾಭಾರತ್ ▷ -2022' !

ಗಾಂಧೀ ನಾಡಿನಲ್ಲಿ–ಗಾಂಧಿಜಯಂತಿಯ ವಾರದಲ್ಲಿ

ಸಪ್ಟಂಬರ್ 25. ಗುಜರಾತಿನ ರಾಜಧಾನಿಯಿರುವ ಗಾಂಧೀನಗರ ಜಿಲ್ಲೆಯ ಒಂದು ಹಳ್ಳಿ. 24 ವರ್ಷದ ಪೀಯೂಷ್ ಪರ್ಮಾರ್ ನವರಾತ್ರಿ ಸಂದರ್ಭದಲ್ಲಿ ಗುಜರಾತಿನಾದ್ಯಂತ ನಡೆಯುವ ಗರ್ಭಾ ನೃತ್ಯದ ಒಂದು ಕಾರ್ಯಕ್ರಮವನ್ನು ನೋಡಿ ಹಿಂದಿರುಗುತ್ತಿದ್ದಾಗ ಕೆಲವರು ಅವನನ್ನು ತಡೆದು ವಿಪರೀತವಾಗಿ ಥಳಿಸಿದರು. ಕಾರಣ ಆತ ದಲಿತನಾಗಿದ್ದರೂ ರಜಪೂತರಂತೆ ಮೀಸೆ ಹೊಂದಿದ್ದ. ಹೊಡೆದವರು ರಜಪೂತ ಕೋಮಿಗೆ ಸೇರಿದವರಂತೆ. **ಸಪ್ಟಂಬರ್29.** ಅದೇ ಹಳ್ಳಿಯ ಇನ್ನೊಬ್ಬ ದಲಿತ ವಕೀಲ 30ವರ್ಷದ ಕ್ರುನಾಲ್ ಮಹೇರಿಯ ತನ್ನ ಗೆಳೆಯನ ಮನೆಗೆ ಹೋಗುತ್ತಿದ್ದ. ದಾರಿ ಮಧ್ಯದಲ್ಲಿ ಆತನನ್ನು ತಡೆದ ಮೇಲ್ಜಾತಿಯ ವಘೇಲಾ ಕೋಲಿನಿಂದ ಥಳಿಸಿದ. ಕಾರಣ ಮತ್ತೆ ಅದೇ–ದಲಿತನಾದರೂ ಮೀಸೆ ಹೊಂದಿದ್ದು. **ಅಕ್ಟೋಬರ್ 3.** ಶಾಲೆಯಿಂದ ಹಿಂದಿರುಗುತ್ತಿದ್ದ ದಿಗಂತ್ ಮಹೇರಿಯನನ್ನು ಹಿಂದಿನಿಂದ ಮೋಟಾರ್ ಬೈಕಿನಲ್ಲಿ ಬಂದ ಇಬ್ಬರು ಇರಿದು ಓಡಿಹೋಗಿದ್ದಾರೆ. ಆತನನ್ನು ಅಸ್ಪತ್ರೆಗೆ ಸೇರಿಸಬೇಕಾಗಿ ಬಂದಿದೆ. ದಿಗಂತ್ ಸಪ್ಟಂಬರ್ 25ರಂದು ಪೀಯೂಷ್ ಪರ್ಮಾರ್ ಜತೆಗಿದ್ದ. ಪೀಯೂಷ್ ತನ್ನ ಮೇಲಿನ ಹಲ್ಲೆ ಕುರಿತು ಪೋಲಿಸ್ ದೂರು ನೀಡಿದ್ದೇ ಈ ಹಲ್ಲೆಗೆ ಕಾರಣ ಎನ್ನಲಾಗಿದೆ.

ಈ ನಡುವೆ ಮತ್ತೊಂದು ಹಲ್ಲೆ ನಡೆಯಿತು, ಇದು ಮಾರಣಾಂತಿಕ ಹಲ್ಲೆ. **ಸಪ್ಟಂಬರ್ 30.** 21 ವರ್ಷದ ಜಯೇಶ್ ಸೋಲಂಕಿ ತನ್ನ ಮೂವರು ಗೆಳೆಯರೊಂದಿಗೆ(ಎಲ್ಲರೂ ದಲಿತರು) ತನ್ನೂರಿನ ದೇವಸ್ಥಾನದಲ್ಲಿ ನವರಾತ್ರಿ ಉತ್ಸವದ ಕಾರ್ಯಕ್ರಮಗಳನ್ನು ವೀಕ್ಷಿಸಿ ಹಿಂದಿರುಗುತ್ತಿದ್ದಾಗ ಅವನದ್ದೇ ಊರಿನ ಸಂಜಯ್ ಪಟೇಲ್ ಮತ್ತಿತರರು ಅಡ್ಡ ಗಟ್ಟಿ "ನಿಮಗೆ ಗರ್ಭಾ ನೋಡುವ ಹಕ್ಕಿಲ್ಲ" ಎಂದರಂತೆ. ಏಕೆಂದು ಕೇಳಿದಾಗ ಸಂಜಯ್ ಪಟೇಲ್ ಜಯೇಶ್‌ನ ತಲೆಯನ್ನು ಗೋಡೆಗೆ ಅಪ್ಪಳಿಸಿದ. ತೀವ್ರವಾಗಿ ಗಾಯಗೊಂಡ ಜಯೇಶನನ್ನು ಆಸ್ಪತ್ರೆಗೆ ಒಯ್ಯುತ್ತಿದ್ದಾಗ ದಾರಿಯಲ್ಲೇ ಕೊನೆಯುಸಿರೆಳೆದ.

***


"ಗೋಡ್ಸೆ ವಾಸ್ ಗಾಡ್ ಸೆಂಟ್"(ಗೋಡ್ಸೆಯನ್ನು ದೇವರೇ ಕಳಿಸಿದ್ದು), "ಗಾಂಧೀಜಿಯನ್ನು ನೇಣಿಗೆ ಹಾಕಬೇಕಿತ್ತು", "ಗಾಂಧೀಜಿಯನ್ನು ಕೊಲ್ಲಲು ಗೋಡ್ಸೆಗೆ ಕಾರಣಗಳಿದ್ದವು", "ನಾನು ಮತ್ತೆ ಹೇಳುತ್ತೇನೆ, ನಾನು ಗೋಡ್ಸೆ ಅಭಿಮಾನಿ, ಏನೀಗ?" –ಈ ವಿಭಿನ್ನ ಟ್ವೀಟ್‌ಗಳನ್ನು ಮಾಡಿದವರ ನಡುವಿನ ಸಾಮ್ಯತೆಯೇನು ಗೊತ್ತೇ? ಇವರನ್ನೆಲ್ಲ ಮಾನ್ಯ ಪ್ರಧಾನ ಮಂತ್ರಿಗಳು 'ಫಾಲೋ' ಮಾಡುತ್ತಿದ್ದಾರೆ ಎಂದು ಆಲ್ಟ್ ನ್ಯೂಸ್ ವೆಬ್‌ತಾಣದ ಸಂಶೋಧನೆ ತಿಳಿಸುತ್ತದೆ. ಅಷ್ಟೇ ಅಲ್ಲ.

"ಗಾಂಧೀ ಜಯಂತಿ ಪರ್ ಬಾಪೂ ಕೊ ಶತ–ಶತ ಪ್ರಣಾಮ್. ಅವರ ಉನ್ನತ ಆದರ್ಶಗಳು ಜಗತ್ತಿನಾದ್ಯಂತ ಕೋಟಿಗಟ್ಟಲೆ ಜನರಿಗೆ ಸ್ಫೂರ್ತಿ ನೀಡುತ್ತಿವೆ" ಎಂದು ಮಾನ್ಯ ಪ್ರಧಾನ ಮಂತ್ರಿಗಳು ಟ್ವೀಟ್ ಮಾಡುತ್ತಿರುವಾಗಲೂ ಅವರು ಗಾಂಧೀಜಿಯ ಹತ್ಯೆಯನ್ನು ಆಚರಿಸುತ್ತಿರುವವರನ್ನು 'ಫಾಲೋ' ಮಾಡುತ್ತಿದ್ದಾರೆ ಎಂದಿದೆ ಆಲ್ಟ್‌ನ್ಯೂಸ್.

***

ಈ ವರ್ಷ **ಉಪ ರಾಷ್ಟ್ರಪತಿಗಳಾಗಿರುವ ವೆಂಕಯ್ಯ ನಾಯ್ಡು ಅವರು ಭಾರತ ಗಾಂಧೀಜಿಯ ಕನಸಿನ, ಸಮತ್ವದ ಮತ್ತು ಸಂಕುಚಿತತೆ ಇಲ್ಲದ ರಾಮರಾಜ್ಯವನ್ನು ಕಟ್ಟಬೇಕು ಎಂದಿದ್ದಾರೆ.** ಅವರಿಗೆ ಕೃತಜ್ಞತೆಗಳು. ಆದರೆ ಒಬ್ಬ ಹಿರಿಯ ಆರೆಸ್ಸೆಸ್ ಪ್ರಚಾರಕನಾಗಿ, ಗಾಂಧೀಜಿಯನ್ನು ಹತ್ಯೆ ಮಾಡಿದವರ ಕುರಿತು, ಮತ್ತು ಪ್ರಧಾನಿಗಳು ಈಗಲೂ 'ಫಾಲೊ' ಮಾಡುತ್ತಿರುವ ಅವರ 'ಅಭಿಮಾನಿ'ಗಳ ಕುರಿತು ಅವರ ಅಭಿಪ್ರಾಯವೇನು? ಅದಕ್ಕಿಂತಲೂ ಹೆಚ್ಚಾಗಿ **"ಆರೆಸ್ಸೆಸ್ ಮಂದಿ ಗಾಂಧೀಜಿಯ ಹತ್ಯೆಯ ನಂತರ ಸಂತೋಷ ವ್ಯಕ್ತಪಡಿಸಿ ಸಿಹಿ ಹಂಚಿದರು" ಎಂದು ಸ್ವತಃ ದೇಶದ ಮೊದಲ ಗೃಹಮಂತ್ರಿ ಸರ್ದಾರ್ ಪಟೇಲ್** ಆರೆಸ್ಸೆಸ್ ಮುಖ್ಯಸ್ಥರಿಗೆ ಸಪ್ಟಂಬರ್ 19, 1948ರಲ್ಲಿ ಬರೆದ ಪತ್ರದಲ್ಲಿ ಹೇಳಿದ ಬಗ್ಗೆ ಏನು ಹೇಳುತ್ತಾರೆ? –ಹೀಗೆ–ಂದು ಒಬ್ಬ ಪತ್ರಕರ್ತ (ಸಬ್‌ರಂಗ್‌ಇಂಡಿಯಾ, ಅಕ್ಟೊ.3) ಕೇಳಿದ್ದಾರೆ. ಇದು ಅವರೊಬ್ಬರ ಪ್ರಶ್ನೆಯಷ್ಟೇ ಅಲ್ಲ ತಾನೇ?

ವ್ಯಂಗ್ಯಚಿತ್ರ: ಆರ್.ಪ್ರಸಾದ್, ಟ್ವಿಟರ್



ಏರುತ್ತಿರುವ ಆದಾಯದ ಅಸಮಾನತೆಯನ್ನು ಹಿಮ್ಮೆಟ್ಟಿಸಲು ನವ-ಉದಾರವಾದವನ್ನು ತೊರೆಯುವುದೇ ದಾರಿ



ಭಾರತದಂತಹ ದೇಶಗಳಲ್ಲಿ ನಿಜವಾಗಿ ಆಗಿರುವ ಜಿಡಿಪಿ ಏರಿಕೆ ಸಾಧಿಸಲು ಆದಾಯದ ಅಸಮಾನತೆಯಲ್ಲಿ ಹೆಚ್ಚಳ ಅತ್ಯಗತ್ಯ ಎನ್ನುವ ನವ ಉದಾರವಾದದ ಸಮರ್ಥಕರ ವಾದ ಸಂಪೂರ್ಣ ಅಸಂಬದ್ಧ. ಏರುತ್ತಿರುವ ಅದಾಯದ ಅಸಮಾನತೆಯನ್ನು ಹಿಮ್ಮೆಟ್ಟಿಸಲು ಕೈಗೊಳ್ಳಬೇಕಾದ ಕ್ರಮಗಳು ನವ-ಉದಾರವಾದವನ್ನು ತೊರೆಯುವುದರಿಂದ ಮಾತ್ರ ಸಾಧ್ಯ. ಆದರೆ ನವ ಉದಾರವಾದ ನಮ್ಮ ಮನಸ್ಸಿಗೆ ಬಂದಂತೆ ತೊರೆದುಬಿಡಬಹುದಾದ ಆಯ್ಕೆಯಲ್ಲ. ಏಕೆಂದರೆ ಇದು 'ಅಂತರಾಷ್ಟ್ರೀಯ ಹಣಕಾಸು ಬಂಡವಾಳ' ಯಜಮಾನಿಕೆ ಪಡೆದಿರುವ ಬಂಡವಾಳಶಾಹಿಯ ಘಟ್ಟಕ್ಕೆ ಸಂಬಂಧಪಟ್ಟದ್ದು. ಅದರಿಂದಾಗಿಯೇ, ನವ ಉದಾರವಾದವನ್ನು ಮೀರಿ ನಿಲ್ಲಬೇಕಾದರೆ ಈ ಯಜಮಾನಿಕೆಯ ವಿರುದ್ಧ ಒಂದು ವರ್ಗ ಹೋರಾಟ ಬೇಕಾಗುತ್ತದೆ, ಅದನ್ನು ಕಾರ್ಮಿಕರು ಮತ್ತು ರೈತರನ್ನು ವ್ಯಾಪಕವಾಗಿ ಅಣಿನೆರೆಸುವ ಮೂಲಕ ಮಾಡಬೇಕಾಗುತ್ತದೆ ಎನ್ನುತ್ತಾರೆ **ಪ್ರೊ. ಪ್ರಭಾತ್ ಪಟ್ನಾಯಕ್.**

ಅನುವಾದ: ಭಾರತಿ ಗಾಂವ್ಕರ್

ಥಾಮಸ್ ಪಿಕೆಟಿ ಮತ್ತು ಲೂಕಾಸ್ ಚಾನ್ಸೆಲ್ ಅವರು ಭಾರತದಲ್ಲಿನ ಆದಾಯದ ಅಸಮಾನತೆಯ ಚಲನೆಯುನ್ನು ಚರ್ಚಿಸುವದರೊಂದಿಗೆ 'ವಿಶ್ವ ಅಸಮಾನತೆ ವರದಿ'ಗಾಗಿ ಇತ್ತೀಚೆಗಷ್ಟೇ ಒಂದು ಪ್ರಬಂಧ ಬರೆದಿದ್ದಾರೆನಿದರಲ್ಲಿ ಅವರು ಭಾರತದ ಆದಾಯ ಅಸಮಾನತೆಯ ಮಟ್ಟವು ಕಳೆದ ನೂರು ವರ್ಷಗಳಲ್ಲಿ ಎಂದೂ ಆಗದಷ್ಟು ಹೆಚ್ಚಿನ ಪ್ರಮಾಣದಲ್ಲಿದೆ ಎಂಬ ತೀರ್ಮಾನಕ್ಕೆ ಬಂದಿದ್ದಾರೆ.

ಭಾರತದಲ್ಲಿ ಆದಾಯ ತೆರಿಗೆ ಆರಂಭವಾದ, 1922ನೇ ಇಸವಿಯಿಂದ ಅವರ ಆದಾಯದ ಅಸಮಾನತೆಯ ಅಂದಾಜು ಆರಂಭವಾಗುತ್ತದೆ. ದೇಶದ ಒಟ್ಟು ಆದಾಯದಲ್ಲಿ ಮೇಲ್‌ಸ್ತರದಲ್ಲಿರುವ 1% ಜನಸಂಖ್ಯೆಯ ಆದಾಯದ ಪಾಲು ಆ ಸಂದರ್ಭದಲ್ಲಿ ಸರಿಸುಮಾರು 13% ಇತ್ತು. 1930 ರ ವೇಳೆಗೆ ಅದು 29% ಕ್ಕೆ ಏರಿತು. 1980ರ ವೇಳೆಗೆ 6% ಕ್ಕೆ ಇಳಿದು, ನಂತರ ಏರುತ್ತ ಅವರ ಅಧ್ಯಯನದ ಅಂತ್ಯದ ಅವಧಿಯಲ್ಲಿ ಅಂದರೆ 2014ರ ವೇಳೆಗೆ 22% ಆಗಿತ್ತು.

ಅವರ ಈ ಪ್ರಬಂಧದಲ್ಲಿ ಕಂಡುಬರುವ ಗಮನಾರ್ಹ ಸಂಗತಿ ಎಂದರೆ, ಸಮಾನತೆಯ ಪ್ರವೃತ್ತಿಗಳಲ್ಲಿ ಬದಲಾವಣೆ ಮತ್ತು ಸರಕಾರೀ ನಿಯಂತ್ರಣದ ಅವಧಿಯಿಂದ ನವ-ಉದಾರವಾದದತ್ತ ಪರಿವರ್ತನೆ ಸುಮಾರಾಗಿ ಒಂದೇ ಸಮಯದಲ್ಲಿ ಆಗಿರುವುದು.

1951 ರಿಂದ 1980ರ ಅವಧಿಯಲ್ಲಿ, ಕೆಳಸ್ತರದಲ್ಲಿನ 50% ಜನಸಂಖ್ಯೆ, ಒಟ್ಟು ಆದಾಯದ ಏರಿಕೆಯಲ್ಲಿ 28% ಲಾಭ ಪಡೆಯಿತು. ಅದೇ ವೇಳೆ ಮೇಲ್‌ಸ್ತರದಲ್ಲಿನ 0.1% ಜನಕ್ಕೆ ತಮ್ಮ ಆದಾಯದಲ್ಲಿ ಇಳಿಕೆ ಕಂಡಿತು. ವಾಸ್ತವವಾಗಿ ಈ ಅವಧಿಯಲ್ಲಿ'ಳಸ್ತರದ 50% ಜನರ ಅದಾಯದಲ್ಲಿ ಒಟ್ಟು ಸರಾಸರಿಗಿಂತ ವೇಗವಾಗಿ ಏರಿಕೆ ಆಯಿತು.

1980 ಮತ್ತು 2014ರ ಅವಧಿಯಲ್ಲಿ ಆದಾಯಗಳಲ್ಲಿ ಏರಿಕೆಯಲ್ಲಿ ಮೇಲಿನ 0.1% ಮಂದಿಯ ಪಾಲು(12%) ಕೆಳಸ್ತರದ 50% ಜನಗಳ ಪಾಲಿಗಿಂತ (11%) ಹೆಚ್ಚಾಯಿತು.

ನಿಶ್ಚಿತವಾಗಿ ಹೇಳಬೇಕೆಂದರೆ, ಆದಾಯದ ಅಸಮಾನತೆಗೆ ಸಂಬಂಧಪಟ್ಟ ಮಾಹಿತಿಗಳನ್ನು ಯಾವಾಗಲೂ ಪ್ರಶ್ನಿಸಬಹುದು. ಮೊದಲನೆಯದಾಗಿ, ಭಾರತದಲ್ಲಿ ಆದಾಯ ಸಮೀಕ್ಷೆ ಇಲ್ಲ. ನಮ್ಮ ಬಳಿ ಇರುವ ಏಕೈಕ ಸಮೀಕ್ಷೆ ಎಂದರೆ ಅನುಭೋಗದ ವೆಚ್ಚಕ್ಕೆ ಸಂಬಂದ ಪಟ್ಟಂತ ಮಾದರಿ ಸಮೀಕ್ಷೆ. ಅನುಭೋಗದ ವೆಚ್ಚದ ಮೇಲಿನ ವಿತರಣೆಯಿಂದ ಆದಾಯದ ವಿತರಣೆಯನ್ನು ಪಡೆಯುವದು ಸಮಸ್ಯೆಗಳಿಮದ ಕೂಡಿದೆ. ಕಾರಣ ಈ ಎರಡರ ನಡುವಿನ ವ್ಯತ್ಯಾಸವಾದ ಉಳಿತಾಯ ಹೇಗೆ ಹಂಚಿಕೆ ಆಗುತ್ತದೆ ಎಂಬುದು ನಮಗೆ ತಿಳಿದಿಲ್ಲ.ಎರಡನೇಯದಾಗಿ, ಎಲ್ಲಾ ಮಾದರಿ ಸಮೀಕ್ಷೆಗಳಲ್ಲೂ ಉನ್ನತಸ್ತರದಲ್ಲಿ ಇರುವವರ ಶೇಕಡಾವಾರು ಸಮರ್ಪಕವಾಗಿರುವುದಿಲ್ಲ. ಅವರು ಬಹಳ ಕಡಿಮೆ ಸಂಖ್ಯೆಯಲ್ಲಿ ಇರುವುದೇ ಇದಕ್ಕೆ ಕಾರಣ. ಆದ್ದರಿಮಧ ಸಂಖ್ಯಾಶಾಸ್ತ್ರಜ್ಞರು ದೇಶದ ಜನಸಂಖ್ಯೆಯ ಮೇಲ್‌ಸ್ತರದ 1% ಅಥವ 0.1% ಜನರ ಆದಾಯದ ಪಾಲಿನಲ್ಲಿ ಹಂಚಿಕೆ ಹೇಗೆ ಉಂಟಾಗುತ್ತದೆ ಎಂಬುವದರ ಬಗ್ಗೆ ಎಲ್ಲ ರೀತಿಯ ಊಹೆಗಳನ್ನು ಮಾಡುತ್ತಾರೆ. ಹಾಗೂ ಈ ಊಹೆಗಳನ್ನು ಯಾವಾಗಲೂ ಪ್ರಶ್ನಿಸಬಹುದು.

ಹಾಗಾಗಿ, ಪಿಕೆಟಿ-ಚಾನ್ಸೆಲ್ ಅವರ ಅಂದಾಜನ್ನು ಹಲವಾರು ಟಿಪ್ಪಣಿಗಾರರು ಪ್ರಶ್ನಿಸುವದರಲ್ಲಿ ಆಶ್ಚರ್ಯವೇನಿಲ್ಲ. ಆದರೆ, ಅವರು ಅಂದಾಜು ಮಾಡಿರುವ ಅಂಕಿ ಅಂಶಗಳನ್ನು ಯಾವ ರೀತಿಯಲ್ಲಿ ನೋಡಿದರೂ, ಅವರು ಪ್ರಕಟಪಡಿಸಿರುವ ಅಸಮಾನತೆಯ ಏರಿಳಿತದ ಪ್ರವೃತ್ತಿಯನ್ನು ಪ್ರಶ್ನಿಸುವುದ ಕಷ್ಟಸಾಧ್ಯ. ಈ ಪ್ರವೃತ್ತಿ ಇತರ ಸಂಶೋಧನಾಕಾರರು ಹೇಳುತ್ತಾ ಬಂದಿರುವುದಕ್ಕೆ ಸಂಪೂರ್ಣವಾಗಿ ಅನುರೂಪವಾಗಿದೆ. ಅಷ್ಟೇ ಅಲ್ಲದೇ, ಸೈದ್ಧಾಂತಿಕವಾಗಿ ನಿರೀಕ್ಷಿಸಬಹುದಾದ್ದಂತದೂ ಕೂಡಾ.

ಉದಾಹರಣೆಗೆ, ಕ್ರೆಡಿಟ್ ಸ್ಯುಸೆ ಸಂಸ್ಥೆ ಸಂಪತ್ತಿನ ವಿತರಣೆ ಬಗ್ಗೆ ಮಾಹಿತಿ ನೀಡುತ್ತದೆ. ಇದರ ಪ್ರಕಾರ, ಪ್ರಸ್ತುತ ಭಾರತದಲ್ಲಿ ಮೇಲ್‌ಸ್ತರದ 1% ಕುಟುಂಬಗಳು, ಒಟ್ಟು ಕುಟುಂಬಗಳ ಸಂಪತ್ತಿನ ಅರ್ಧಕ್ಕಿಂತ ಹೆಚ್ಚಿನ(57%) ಸಂಪತ್ತಿನ ಮಾಲಿಕರಾಗಿದ್ದಾರೆ, ಸಂಪತ್ತಿನ ಅಸಮಾನತೆ ಭಾರತದಲ್ಲಿ ಅಮೇರಿಕಾಕ್ಕಿಂತ ಅತಿ ಹೆಚ್ಚು ವೇಗವಾಗಿ ಏರುತ್ತಿದೆ.

ಸಂಪತ್ತಿನ ವಿತರಣೆಯು ಆದಾಯದ ವಿತರಣೆಗಿಂದ ಸಾಮಾನ್ಯವಾಗಿಯೇ ಹೆಚ್ಚು ಅಪಮಾನವಾಗಿರುತ್ತದೆ. ಏಕೆಂದರೆ ಸಂಪತ್ತೇ ಇಲ್ಲದೆ ಕಾರ್ಮಿಕ ವರ್ಗಕ್ಕೆ ಆದಾಯ ಎಂಬುದಿದೆ, ಈ ಕಾರಣಕ್ಕಾಗಿ, ಪಿಕೆಟಿ-ಚಾನ್ಸಲ್ ಅವರ ಮೇಲಣ 1% ಜನರ ಆದಾಯದ ಅಂಕಿ, ಅಂಶಗಳು, ಕ್ರೆಡಿಟ್ ಸ್ಯುಸೆ ನೀಡಿರುವ ಅವರ ಸಂಪತ್ತಿನ ಪಾಲಿನ ಅಂಕಿ-ಅಂಶಕ್ಕಿಂತ ಭಿನ್ನವೇನೂ ಅಲ್ಲ.(ಆದರೆ ಇದೇ ತರ್ಕದ ಪ್ರಕಾರ, ಮೇಲಿನ 1% ಜನಂಸಂಖ್ಯೆಯ ಸಂಪತ್ತಿನ ಪಾಲು 28% ಎಂಬ ಅಂದಾಜು ಗಂಭೀರವಾಗಿ ಪ್ರಶ್ನಾರ್ಹವಾಗುತ್ತದೆ; ಆದರೂ 1991ರ ನವ ಉದಾರವಾದಿ ಸುಧಾರಣೆಗಳು ಆರಂಭವಾದನಂತರ ಸಂಪತ್ತಿನ ಅಸಮಾನತೆ ಗಣನೀಯವಾಗಿ ಏರಿದೆ ಎಂಬುದನ್ನು ಈ ಅಂದಾಜು ಕೂಡ ಗುರುತಿಸುತ್ತದೆ, ಏಕೆಂದರೆ 1991ರಲ್ಲಿ ನವ-ಉದಾರವಾದಿ ಸುಧಾರಣೆಗಳು ಆರಮಭವಾದಾಗ ಮೇಲಿನ 1% ಮಂದಿ ಒಟ್ಟು ಸಂಪತ್ತಿನಲ್ಲಿ 17% ಹೊಮದಿದ್ದರು ಎಂದು ಅವರ ಅಂದಾಜೈ ಹೇಳುತ್ತದೆ)

ಸಾಮಾನ್ಯವಾಗಿ ಅಸಮಾನತೆಯನ್ನು ಅಳೆಯಲು ವಾಸ್ತವವಾಗಿ ಕಾಣುವ ವಿತರಣೆ ಮತ್ತು ಅಪ್ಪಟ ಸಮಾನತೆ ಇರುವಾಗಿನ ಆದರ್ಶ ವಿತರಣೆ ನಡುವೆ ಇರುವ ಅಂತರವನ್ನು ಗ್ರಹಿಸುವ ಗಿನಿ ಗುಣಾಂಕವನ್ನು ಬಳಸಲಾಗಿರುತ್ತದೆ. ಆದಾಗ್ಯೂ ಈ ಗಿನಿ ಗುಣಾಂಕದಿಂದ ಉಂಟಾಗುವ ಸಮಸ್ಯೆ ಎಂದರೆ, ಇದು ವಿತರಣೆಯನ್ನು ಒಟ್ಟಾರೆಯಾಗಿ ನೋಡುತ್ತದೆ ಹಾಗಾಗಿ ಮೇಲ್‌ಸ್ತರದ ಶೇಕಡಗಳ ಪಾಲು ಎಷ್ಟೆಂಬುದನ್ನು ಗುರುತಿಸುವುದಿಲ್ಲ. ಉದಾಹರಣೆಗೆ ಮೇಲ್‌ಸ್ತರದ 1% ಜನರ ಪಾಲು ಏರಿಕೆ ಆಗಿರುವಾಗಲೂ, ಕೆಳಸ್ತರಗಳಲ್ಲಿ, ಉದಾ: 'ಬಡವರು' ಮತ್ತು 'ಅತಿ ಬಡವರು' ಎನ್ನಬಹುದಾದವರ ನಡುವೆ ಆಗುತ್ತಿರಬಹುದಾದ ಮರುಹಂಚಿಕೆಯಿಂದಾಗಿ ಗಿನಿ ಗುಣಾಂಕ ಅಸಮಾನತೆ ಇಳಿಯುತ್ತಿದೆ ಎಂದೇ ತೋರಿಸಬಹುದು. ಆದ್ದರಿಂದ ಪಿಕಟೆ-ಚಾನ್ಸೆಲ್ ಗಿನಿ ಗುಣಾಂಕವನ್ನು ಬಳಸದೆ, ಮೇಲಿನ ಕೆಲವು ಸ್ತರಗಳ ಪಾಲನ್ನು ನೋಡುತ್ತಾರೆ. ನಾವು ಆರ್ಥಿಕ ಶಕ್ತಿಯ ಬಗ್ಗೆ ಹೇಳುತ್ತಿದ್ದರೆ, ಇದು ಹೆಚ್ಚು ಪ್ರಯೋಜನಕಾರಿ ಅಳತೆ,

ಪಿಕೆಟಿ-ಚಾನ್ಸಲ್ ಅವರ ಪ್ರಕಾರ, ಮೇಲ್ ಸ್ತರದಲ್ಲಿರುವ 1% ಜನರ ಆದಾಯದ ಪಾಲು, 1983-84ರ ಅವಧಿಯಲ್ಲಿ ತುಂಬಾ ಕಡಿಮೆಗೆ ಇಳಿದಿತ್ತು, ಆನಂತರದಿಂದ ಏರಿಕೆ ಪ್ರಾರಂಭವಾಯಿತು. ನವ-ಉದಾರವಾದ ಮೊದಲು ಕಾಣಿಸಿಕೊಂಡದ್ದು ಇದೇ ಸಮಯದಲ್ಲಿ ಎಂಬುದನ್ನು ನೆನಪಿಸಿಕೊಳ್ಳಬಹುದು. ಅಂದು ರಾಜೀವ ಗಾಂಧಿ ಸರ್ಕಾರದಲ್ಲಿ ಹಣಕಾಸು ಮಂತ್ರಿಯಾಗಿದ್ದ ವಿಶ್ವನಾಥ ಪ್ರತಾಪ್ ಸಿಂಗ್ ಅವರು 1985ರಲ್ಲಿ ಮಂಡಿಸಿದ್ದ ಬಜೆಟಿನಲ್ಲಿ ಆ ದಿಕ್ಕಿನಲ್ಲಿ ಸಾಗುವ ಗಮನಾರ್ಹ ಕ್ರಮಗಳಿದ್ದವು. (ಇದರ ವಿರುದ್ಧ ಆಗ ಎಡ ಪಕ್ಷಗಳು ದೆಹಲಿಯಲ್ಲಿ ಸಮಾವೇಶ ಒಂದನ್ನು ಏರ್ಪಡಿಸಿದ್ದವು).

ಹೀಗೆ ಅಸಮಾನತೆಯಲ್ಲಿ ಏರಿಕೆ ಮತ್ತು ನವ ಉದಾರವಾದದ ಅನುಸರಣೆಯ ಮಧ್ಯೆ ನಿಕಟವಾದ ಸಹಯೋಗವಿದೆ. ಇಂತಹ ಅಸಮಾನತೆಯ ಹೆಚ್ಚಳ 'ಜಾಗತೀಕರಣ'ದ ಅವಧಿಯಲ್ಲಿ ಸುಮಾರಾಗಿ ಎಲ್ಲ ದೇಶಗಳಲ್ಲಿ ಕಂಡುಬಂದ ಲಕ್ಷಣಗಳು ಎಂದರೆ ಅದರಲ್ಲಿ ಆಶ್ಚರ್ಯವೇನಿಲ್ಲ. ಅಂತರಾಷ್ಟ್ರೀಯ ಹಣಕಾಸು ಬಂಡವಾಳದ ಆದೇಶದಂತೆ ಸುಮಾರಾಗಿ ಸಾರ್ವತ್ರಿಕವಾಗಿಯೇ ನವ ಉದಾರವಾದಿ ಧೋರಣೆಗಳ ಅನುಸರಣೆ ಈ 'ಜಾಗತೀಕರಣ'ದ ಪ್ರಮುಖ ಲಕ್ಷಣ ತಾನೇ?

ಈ ಇಬ್ಬರೂ ಬರಹಗಾರರು ಈ ಪ್ರಬಂಧದಲ್ಲಿಯೂ ಮತ್ತು ವೈಯಕ್ತಿಕ ಸಂದರ್ಶನಗಳಲ್ಲೂ, ಈ ಅವಧಿಯಲ್ಲಿ ಭಾರತದಲ್ಲಿ ಆದಾಯದ ಅಸಮಾನತೆ ಹೆಚ್ಚಲು ಹಲವಾರು ಕಾರಣಗಳನ್ನು ನೀಡುತ್ತಾರೆ, ಅವೆಲ್ಲ ನವ ಉದಾರವಾದಿ ಧೋರಣೆಗಳ ಅನುಸರಣೆಗೆ ಸಂಬಂಧಪಟ್ಟವುಗಳು. ಅತ್ಯುನ್ನತ ಮಟ್ಟದ ಆದಾಯ ತೆರಿಗೆಯ ದರವನ್ನು 98% ದಿಂದ 30%ಕ್ಕೆ ಇಳಿಸಿದ್ದು, ಭೂ ಮಾಲಿಕತ್ವದಲ್ಲಿ ಇನ್ನೂ ಉಳಿದುಕೊಂಡಿರುವ ಅಸಮಾನತೆ, ಬಡವರಿಗೆ ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯದ ಕೊರತೆ, ಇವು ಈ ಲೇಖಕರಿಬ್ಬರು ಎತ್ತಿರುವ ಕೆಲವು ಅಂಶಗಳು.

ಇವೆಲ್ಲವೂ ತುಂಬಾ ಪ್ರಮುಖವಾದವು. ಆದರೆ ಇಲ್ಲಿ ಇನ್ನೊಂದು ಅಂಶವನ್ನು ಸೇರಿಸಲೇಬೇಕು. ಅದೆಂದರೆ, ನವ ಉದಾರವಾದಿ ನೀತಿ ಜಾರಿಗೆ ಬಂದ ಹಿನ್ನೆಲೆಯಲ್ಲಿ, ರೈತಾಪಿ ಕೃಷಿಯನ್ನೂ ಒಳಗೊಂಡಂತೆ ಸಣ್ಣ ಉತ್ಪಾದನೆ ಮೇಲಿನ ಧಾಳಿ. ರೈತಾಪಿ ಸ್ಥಿತಿಗತಿಗಳು ಉತ್ತಮಗೊಂಡಾಗ ಕೃಷಿಕೂಲಿಕಾರರ ಪರಿಸ್ತಿತಿಗಳು ತಂತಾನೇ ಉತ್ತಮಗೊಳ್ಳಬೇಕೆಂದೇನೂ ಇಲ್ಲವಾದರೂ, ರೈತಾಪಿ ಜನಗಳ ಪರಿಸ್ಥಿತಿಗಳು ಹದಗೆಡಲಾರಂಭಿಸಿದಾಗ ಅದು ನಿಶ್ಚಿತವಾಗಿ ಕೃಷಿ ಕೂಲಿಕಾರರಿಗೂ ವರ್ಗಾಯಿಸಲ್ಪಡುತ್ತದೆ. ಇಷ್ಟೇ ಅಲ್ಲ, ಹೀಗೆ ಪರಿಸ್ಥಿತಿ ಹದಗೆಟ್ಟಾಗ, ಕಡುಬಡವ ರೈತರು ನಗರ ಆರ್ಥಿಕತೆಯಲ್ಲಿ ಉದ್ಯೋಗ ಅರಸಲು ಹೊರಡುತ್ತಾರೆ. ಅಲ್ಲಿಯೂ ಹೆಚ್ಚುವರಿ ಉದ್ಯೋಗಗಳ ನಿರ್ಮಾಣ ಬಹಳ ಕಡಿಮೆಯಿರುವುದರಿಂದ, ಅವರು ಕಾರ್ಮಿಕರ ಮೀಸಲು ಪಡೆಯನ್ನೇ ಸೇರಿಕೊಂಡು ಅದನ್ನು ಬೆಳೆಸುತ್ತಾರೆ, ಇದು ನಗರಗಳ ಕಾರ್ಮಿಕರ ಕೂಲಿಗಳ ಮೇಲೂ ಪರಿಣಾಮ ಬೀರುತ್ತದೆ ಮತ್ತು ಆಮೂಲಕ ನಗರದ ಒಟ್ಟಾರೆ ಆದಾಯದ ಹಂಚಿಕೆಯ ಮೇಲೂ ಪರಿಣಾಮ ಬೀರುತ್ತದೆ.

ಬೇರೆ ಪದಗಳಲ್ಲಿ ಹೇಳುವುದಾದರೆ, ಸರಾಸರಿಯಾಗಿ ಗ್ರಾಮೀಣ ಭಾರತದ ಆದಾಯ ನಗರ ಭಾರತಕ್ಕಿಂತ ಕಡಿಮೆ ಇರುವುದರಿಂದ, ನಗರ-ಗ್ರಾಮೀಣದಂತರ ಹೆಚ್ಚಾದಾಗ, ಒಟ್ಟಾರೆಯಾಗಿ ಕೂಡ ಆದಾಯದ ಅಸಮಾನತೆ (ಪಿಕೆಟಿ-ಚಾನ್ಸಲ್ ಅಳತೆಯ ಪ್ರಕಾರ) ಹೆಚ್ಚುತ್ತದೆ. ಆದರೆ ಇದರಲ್ಲಿ ನಗರ ಆರ್ಥಿಕತೆಯ ಒಳಗಡೆಯೂ ಕೂಡ ಆದಾಯದ ಅಸಮಾನತೆ ವಿಸ್ತಾರಗೊಳ್ಳುತ್ತದೆ. ಕಡುಬಡವ ರೈತಾಪಿ ಜನ ನಗರ ವಲಸೆಯಿಂದ ನಗರದ ಮೀಸಲು ಕಾರ್ಮಿಕ ಪಡೆ ದೊಡ್ಡದಾಗುತ್ತದೆ. ಈ ಎರಡೂ ಕಾರಣಗಳಿಂದಾಗಿ, ನವ ಉದಾರವಾದಿ ನೀತಿಯು ಜಾರಿಗೆ ತಂದಿರುವ ಸಣ್ಣ ಉತ್ಪಾದನೆ ಮೇಲಿನ ಧಾಳಿ ಆದಾಯ ಅಸಮಾನತೆಯ ಏರಿಕೆಯಲ್ಲಿ ಒಂದು ಪ್ರಮುಖ ಅಂಶವಾಗುತ್ತದೆ.

ಚೀನಾದ ದೃಷ್ಟಾಂತವನ್ನು ಇಲ್ಲಿ ನೋಡಬಹುದು. ಈ ಲೇಖಕರ ಪ್ರಕಾರ, ಅಲ್ಲಿ ಆದಾಯದ ಅಸಮಾನತೆ ಈ ಹಿಂದೆ ವೇಗವಾಗಿ ಏರುತ್ತಿತ್ತು ಆದರೆ ಪ್ರಸಕ್ತ ಶತಮಾನದಲ್ಲಿ ಅದನ್ನು ಹಿಮ್ಮೆಟ್ಟಿಸಲಾಗಿದೆ. ಭಾರತ ಮತ್ತು ಚೈನಾ ಆರ್ಥಿಕತೆಯಲ್ಲಿ ಮೂಲಭೂತ ವ್ಯತ್ಯಾಸ ಇರುವದಂತೂ ಖಂಡಿತ, ಆದರೆ ಏರುತ್ತಿರುವ ಆದಾಯದ ಅಸಮಾನತೆಯನ್ನು ಹಿಮ್ಮೆಟ್ಟಿಸುವಲ್ಲಿ ಇರುವ ಒಂದು ನಿಕಟತಮ ಅಂಶ ಎಂದರೆ, ಚೀನಾ ಕಮ್ಯುನಿಸ್ಟ್ ಪಕ್ಷ 'ಒಂದು ಸಮಾಜವಾದಿ ಗ್ರಾಮಾಂತರದೆಡೆಗೆ' ಎನ್ನುವ ಘೋಷಣೆಯಡಿ ಅನುಸರಿಸಿದ ಧೋರಣೆ. ಒಂದು ಅವಿಶ್ರಾಂತ ರಫ್ತು-ಪ್ರೇರಿತ ಕೈಗಾರಿಕೀಕರಣದ ಪ್ರಯತ್ನದ ಧಾವಂತದಲ್ಲಿ ರೈತ ಕೃಷಿಯ ಮೇಲಿನ ಕೆಲವು ಒತ್ತುವರಿಗಳನ್ನು ನಿಲ್ಲಿಸಿ ಹಿಮ್ಮೆಟ್ಟಿಸುವ ಅಂಶ ಈ ಧೋರಣೆಯಲ್ಲಿತ್ತು.

ಒಂದು ಸಂಪತ್ತು ತೆರಿಗೆಯನ್ನು ವಿಧಿಸುವುದು(ಭಾರತದಲ್ಲಿ ಇದು ಇನೂ ಬಂದಿರದಿರುವುದು ಆಶ್ಚರ್ಯಕರ ಸಂಗತಿ), ಶ್ರೀಮಂತರ ಮೇಲೆ ಆದಾಯ ತೆರಿಗೆ ದರಗಳನ್ನು ಹೆಚ್ಚಿಸುವುದು, ಸರ್ಕಾರದ ಆಶ್ರಯದಲ್ಲಿ ಎಲ್ಲರಿಗೂ ಗುಣಮಟ್ಟದ ಶಿಕ್ಷಣ ಆರೋಗ್ಯವನ್ನು ಒದಗಿಸುವುದು ಮತ್ತು ಭೂಮಿಯ ಪುನರ್ ಹಂಚಿಕೆ, ಇವು ಏರುತ್ತಿರುವ ಅದಾಯದ ಅಸಮಾನತೆಯನ್ನು ಹಿಮ್ಮೆಟ್ಟಿಸಲು ಕೈಗೊಳ್ಳಬೇಕಾದ ಕ್ರಮಗಳು ಎಂಬುದರಲ್ಲಿ ಸಂದೇಹವಿಲ್ಲ; ಮತ್ತು ಇದು ನವ-ಉದಾರವಾದವನ್ನು ತೊರೆಯುವುದರಿಂದ ಮಾತ್ರ ಸಾಧ್ಯ.

ಇದನ್ನು ಗುರುತಿಸುವಾಗಲೇ, ಇಂತಹ ಸಂದರ್ಭದಲ್ಲಿ, ಎರಡೂ ಲೇಖಕರು ಗುರುತಿಸಲು ವಿಫಲರಾಗಿರುವ ಅಂಶವೊಂದನ್ನು ನಾವು ತಿಳಿಯಬೇಕು. ಅದೇನೆಂದರೆ ನವ ಉದಾರವಾದ ನಮ್ಮ ಮನಸ್ಸಿಗೆ ಬಂದಂತೆ ತೊರೆದುಬಿಡಬಹುದಾದ ಆಯ್ಕೆಯಲ್ಲ. ಏಕೆಂದರೆ ಇದು 'ಅಂತರಾಷ್ಟ್ರೀಯ ಹಣಕಾಸು ಬಂಡವಾಳ' ಯಜಮಾನಿಕೆ ಪಡೆದಿರುವ ಬಂಡವಾಳಶಾಹಿಯ ಘಟ್ಟಕ್ಕೆ ಸಂಬಂಧಪಟ್ಟದ್ದು. ಅದರಿಂದಾಗಿಯೇ, ನವ ಉದಾರವಾದವನ್ನು ಮೀರಿ ನಿಲ್ಲಬೇಕಾದರೆ ಈ ಯಜಮಾನಿಕೆಯ ವಿರುದ್ಧ ಒಂದು ವರ್ಗ ಹೋರಾಟ ಬೇಕಾಗುತ್ತದೆ, ಅದನ್ನು ಕಾರ್ಮಿಕರು ಮತ್ತು ರೈತರನ್ನು ವ್ಯಾಪಕವಾಗಿ ಅಣಿನೆರೆಸುವ ಮೂಲಕ ಮಾಡಬೇಕಾಗುತ್ತದೆ.

ಆದರೆ ಈ ಲೇಖಕರು, ಭಾರತದಂತಹ ದೇಶಗಳಲ್ಲಿ ನಿಜವಾಗಿ ಆಗಿರುವ ಜಿಡಿಪಿ ಏರಿಕೆ ಸಾಧಿಸಲು ಆದಾಯದ ಅಸಮಾನತೆಯಲ್ಲಿ ಹೆಚ್ಚಳ ಅತ್ಯಗತ್ಯ ಎನ್ನುವ ನವ ಉದಾರವಾದದ ಸಮರ್ಥಕರ ವಾದವನ್ನು ಸರಿಯಾಗಿಯೆ ಎದುರಿಸಿದ್ದಾರೆ. ಈ ಸಮರ್ಥಕರದ್ದು ಅಸಂಬದ್ಧ ತರ್ಕ. ವಿಶ್ವ ಬಂಡವಾಳಶಾಹಿಯಲ್ಲಿ ಆದಾಯದ ದರದಲ್ಲಿ ಅತಿ ಹೆಚ್ಚು ಏರಿಕೆ ಆದದ್ದು ಜಾಗತಿಕ ಯುದ್ಧದ ನಂತರ, 'ಬಂಡವಾಳಶಾಹಿಯ ಸುವರ್ಣ ಯುಗ' ಎಂದು ಕರೆಯಲ್ಪಡುವ ಅವಧಿಯಲ್ಲಿ. ವಾಸ್ತವವಾಗಿ ಈ ಅವದಿಯಲ್ಲಿ ಜಗತ್ತಿನಾದ್ಯಂತ ಆದಾಯದ ಅಸಮಾನತೆ ಇಳಿಯುತ್ತಿತ್ತು. ಆದಾಯದ ಅಸಮಾನತೆ ಹಾಗೆ ಇಳಿಯಲಾರಂಭಿಸಿದ್ದು ಬಂಡವಾಳಶಾಹಿ ನಿರ್ವಹಣೆಯಿಂದಂತೂ ಖಂಡಿತಾ ಅಲ್ಲ, ಬದಲಿಗೆ ಸಮಾಜವಾದೀ ಬೆದರಿಕೆಯ ಎದುರು ಬಂಡವಾಳಶಾಹಿ ಹಲವು ರಿಯಾಯ್ತಿಗಳನ್ನು ಕೊಡಲೇಬೇಕಾಗಿ ಬಂದದ್ದರಿಂದ. ಉನ್ನತ ಬೆಳವಣಿಗೆಗೆ ಆದಾಯದ ಅಸಮಾನತೆ ಹೆಚ್ಚಬೇಕಾದ್ದು ಅತ್ಯಗತ್ಯ ಎನ್ನುವ ವಾದ ಸಂಪೂರ್ಣ ತರ್ಕಹೀನ ಎಂಬುದನ್ನು ಇದು ತೋರಿಸುತ್ತದೆ. ●

ಅಕ್ಟೋಬರ್ 20ರಂದು 'ಬಲಿರಾಜ ಮಹಾರ್‍ಯಾಲಿ'ಗಳು : ಮಹಾರಾಷ್ಟ್ರ ರೈತರ ನಿರ್ಧಾರ





ಸರಕಾರದ ಮೇಲೆ ಐಪಿಸಿ ಸೆಕ್ಷನ್ 302, 306 ಮತ್ತು 420 ಅಡಿ ಕೊಲೆಪ್ರಯತ್ನ, ಆತ್ಮಹತ್ಯೆಗೆ ಕುಮ್ಮಕ್ಕು ಮತ್ತು ವಂಚನೆಯ ಕೇಸ್ ಹಾಕಲು ಕರೆ

ಮಹಾರಾಷ್ಟ್ರದ ಜಲಗಾಂವ್‌ನಲ್ಲಿ ಸಪ್ಟಂಬರ್ 26ರಂದು ನಡೆದ 10,000ಕ್ಕೂ ಹೆಚ್ಚು ರೈತರ ಬೃಹತ್ ಸಮಾವೇಶ ಬಿಜೆಪಿ ಸರಕಾರದ ಮೋಸ, ವಚನಭ್ರಷ್ಟತೆಯ ವಿರುದ್ಧ ಮುಂದಿನ ಹಂತದ ಹೋರಾಟಕ್ಕೆ ಕರೆ ನೀಡಿದೆ. ಬಲಿಪಾಡ್ಯಮಿಯ ದಿನವಾದ ಅಕ್ಟೋಬರ್ 20ರಂದು ರಾಜ್ಯಾದ್ಯಂತ ಎಲ್ಲ ಜಿಲ್ಲಾ ಮತ್ತು ತಹಸೀಲ್ ಕೇಂದ್ರಗಳಲ್ಲಿ 'ಬಲಿರಾಜ' ಮಹಾರ್‍ಯಾಲಿಗಳನ್ನು ನಡೆಸಿ ಬಿಜೆಪಿ ಸರಕಾರದ ಮೋಸ, ವಚನಭ್ರಷ್ಟತೆಯನ್ನು ಬಯಲಿಗೆಳೆಯಲು ಕರೆ ನೀಡಿದೆ. **ಹಾಗೂ ಸರಕಾರದ ಇಂತಹ ಧೋರಣೆಗಳಿಂದಾಗಿ ರೈತರು ಆತ್ಮಹತ್ಯೆಗಳನ್ನು ಮಾಡಿಕೊಳ್ಳುತ್ತಿರುವುದರಿಂದ ಸರಕಾರದ ಮೇಲೆ ಐಪಿಎ ಸೆಕ್ಷನ್ 302(ಕೊಲೆಪ್ರಯತ್ನ), 306(ಆತ್ಮಹತ್ಯೆಗೆ ಕುಮ್ಮಕ್ಕು) ಮತ್ತು 420(ವಂಚನೆ) ಅಡಿಯಲ್ಲಿ ಕೇಸು ಹಾಕಿ ವಿಚಾರಣೆಗೆ ಗುರಿಪಡಿಸಬೇಕು ಎಂದು ಕರೆ ನೀಡಿದೆ.**

ಜೂನ್ ತಿಂಗಳಲ್ಲಿ ಮಹಾರಾಷ್ಟ್ರ ರೈತರ ಚಾರಿತ್ರಿಕ ಮುಷ್ಕರಕ್ಕೆ ನೇತೃತ್ವ ನೀಡಿದ ಮಹಾರಾಷ್ಟ್ರದ ರೈತ ಸಂಘಟನೆಗಳ ಸಮನ್ವಯ ಸಮಿತಿ ಈ ರಾಜ್ಯಮಟ್ಟದ ಬೃಹತ್ ಸಮಾವೇಶವನ್ನು ಸಂಘಟಿಸಿತ್ತು.

ಜೂನ್ ಮುಷ್ಕರದ ಯಶಸ್ಸಿನಿಂದ ಹೆದರಿದ ರಾಜ್ಯದ ಬಿಜೆಪಿ ಸರಕಾರ 1.5ಲಕ್ಷ ರೂ.ವರೆಗೆ ರೈತರ ಸಾಲಮನ್ನಾ ಮಾಡುವ ಮತ್ತು ಸ್ವಾಮಿನಾಥನ್ ಆಯೋಗದ ಫಲದಾಯಕ ಬೆಲೆಯ ಶಿಫಾರಸಿನ ಜಾರಿಯ ಪ್ರಶ್ನೆಯನ್ನು ಕೇಂದ್ರ ಸರಕಾರದ ಮುಂದೆ ಎತ್ತಿಕೊಳ್ಳುವ ಭರವಸೆ ನೀಡಿತ್ತು. ಆದರೆ ಸಾಲಮನ್ನಾಕ್ಕೆ ಇಲ್ಲ ಸಲ್ಲದ ಶರತ್ತುಗಳನ್ನು ಹಾಕಿ ಅದನ್ನು ಒಂದು ತಮಾಷೆಯ ಮಟ್ಟಕ್ಕೆ ಇಳಿಸಲು ಅದು ಹೇಸಿಲ್ಲ. ರೈತರಿಗೆ ಫಲದಾಯಕ ಬೆಲೆ ಕೊಡುವ ಪ್ರಶ್ನೆಯನ್ನೂ ಎತ್ತಿಕೊಳ್ಳಲಿಲ್ಲ. ಈ ಮಹಾವಂಚನೆಯ ವಿರುದ್ಧ ರೈತರು ಈವರ್ಷದ ಸ್ವಾತಂತ್ರ್ಯದಿನದ ಮುನ್ನಾದಿನ ರಾಜ್ಯಾದ್ಯಂತ 200 ಕೇಂದ್ರಗಳಲ್ಲಿ ವ್ಯಾಪಕ 'ಚಕ್ಕಾ ಜಾಮ್'(ರಸ್ತೆ ತಡೆ) ನಡೆಸಿದ ನಂತರ ಹೋರಾಟದ ಮುಂದಿನ ಭಾಗವಾಗಿ ನಡೆಸಿರುವ ಈ ಬೃಹತ್ ಸಮಾವೇಶ ಈ ಹೋರಾಟವನ್ನು ಇನ್ನಷ್ಟು ದೃಢನಿರ್ಧಾರದಿಂದ ಮುಂದೊಯ್ಯುವ ಕರೆ ನೀಡಿದೆ.

ಬರಪೀಡಿತ ರೈತರಿಗೆ ಮಧ್ಯಪ್ರದೇಶ ಪೋಲೀಸರಿಂದ ಬಟ್ಟೆಬಿಚ್ಚಿ ಲಾಟಿಯೇಟಿನ 'ಪರಿಹಾರ'!



ಮಂದಸೌರ್‌ನಲ್ಲಿ ಗೋಲೀಬಾರ್ ನಡೆಸಿ ಆರು ರೈತರ ಆಹುತಿ ಪಡೆದ ನಂತರ ಉಪವಾಸ ಮಾಡಿ ತಾನೂ ರೈತನ ಮಗನೇ ಎಂದಿದ್ದ ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಚೌಹಾಣರ ಪೋಲೀಸರು ರೈತರಿಗೆ ಮತ್ತೊಂದು ಕೊಡುಗೆ ನೀಡಿದ್ದಾರೆ. ರಾಜ್ಯದ ಬುಂದೇಲ್‌ಖಂಡ್ ಪ್ರದೇಶದಲ್ಲಿ ಕುಡಿಯುವ ನೀರಿಗೂ ತತ್ವಾರವಾಗಿರುವಂತಹ ಬರ ವ್ಯಾಪಿಸಿದ್ದು ಟೀಕಮ್‌ಗಡ್ ಜಿಲ್ಲೆಯನ್ನು ಬರಪೀಡಿತ ಎಂದು ಘೋಷಿಸಿ, ಕುಡಿಯುವ ನೀರಿಗೆ ಮತ್ತು ಬರಪರಿಹಾರಕ್ಕೆ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾ ಕಲೆಕ್ಟರ್‌ಗೆ ಮನವಿ ಕೊಡಲು ಪಟ್ಟು ಹಿಡಿದದ್ದೇ ಪೋಲಿಸರ ಪ್ರಕಾರ ಈ ರೈತರು ಮಾಡಿದ ಮಹಾತಪ್ಪು! ಅದಕ್ಕಾಗಿ ಅವರ ಮೇಲೆ ಅಶ್ರುವಾಯು ಪ್ರಯೋಗ ಮತ್ತು ಲಾಠೀ ಪ್ರಹಾರ ನಡೆಸಿದ್ದಲ್ಲದೆ, ರೈತರನ್ನು ಬಂಧಿಸಿ ಲಾಕಪ್ಪಿಗೊಯ್ದು ಅವರ ಬಟ್ಟೆ ಬಿಚ್ಚಿಸಿ ಮತ್ತಷ್ಟು ಅಟ್ಟಾಡಿಸಿಕೊಂಡು ಥಳಿಸಿ ಅವಮಾನ ಮಾಡಿದ ಘಟನೆ ಇಡೀ ರಾಜ್ಯದಲ್ಲಿ ಭಾರೀ ಆಕ್ರೋಶವನ್ನುಂಟು ಮಾಡಿದೆ. ಇದನ್ನು ಪ್ರತಿಭಟಿಸಿ ಅಕ್ಟೋಬರ್ 4ರಂದು ಟೀಕಮ್‌ಗಡ್ ಬಂದ್ ನಡೆದಿದೆ.

ಇಂತಹ ನಾಚಿಕೆಗೇಡಿ ಬರ್ಬರ ವರ್ತನೆ ಸಭ್ಯಸಮಾಜವನ್ನು ವಿಚಲಿತಗೊಳಿಸುವಂತದ್ದು, ಇಂತಹ ವರ್ತನೆಯನ್ನು ಬ್ರಿಟಿಶರ ಕಾಲದಲ್ಲೂ ದೇಶದ ಜನ ಕಂಡಿರಲಿಲ್ಲ ಎಂದು ಇದನ್ನು ಸಿಪಿಐ(ಎಂ) ಮಧ್ಯಪ್ರದೇಶ ರಾಜ್ಯ ಕಾರ್ಯದರ್ಶಿ ಬಾದಲ್ ಸರೋಜ್ ಬಲವಾಗಿ ಖಂಡಿಸಿದ್ದಾರೆ. ಈ ಅಸಭ್ಯ ವರ್ತನೆಗಾಗಿ ಮುಖ್ಯಮಂತ್ರಿಗಳು ಟೀಕಮ್‌ಗಡ್‌ನ ರೈತರ ಮತ್ತು ಮಧ್ಯಪ್ರದೇಶದ ಜನತೆಯ ಕ್ಷಮೆ ಕೇಳಬೇಕು, ಟೀಕಮ್‌ಗಡ್‌ನ ಕಲೆಕ್ಟರ್ ಮತ್ತು ಎಸ್‌ಪಿಯನ್ನು ತಕ್ಷಣ ಅಮಾನತು ಮಾಡಬೇಕು, ಸಂಪೂರ್ಣ ಬುಂದೇಲ್‌ಖಂಡ್‌ಗೆ ಕುಡಿಯುವ ನೀರನ್ನು ಪೂರೈಸುವ ವ್ಯವಸ್ತೆ ಮಾಡಬೇಕು ಮತ್ತು ಸಂಪೂರ್ಣ ಮಧ್ಯಪ್ರದೇಶವನ್ನು ಬರಪೀಡಿತ ಎಂದು ಘೋಷಿಸಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

ಕುಡಿಯುವ ನೀರಿನ ಖಾತೆಯ ಕೇಂದ್ರೀಯ ಮಂತ್ರಿ ಉಮಾಭಾರತಿ ಟೀಕಮ್‌ಗಡ್‌ನವರು, ಇಲ್ಲಿಯ ಲೋಕಸಭಾ ಸದಸ್ಯರಾದ ವೀರೇಂದ್ರ ಖಟೀಕ್ ಕೂಡ ಕೇಂದ್ರೀಯ ಮಂತ್ರಿಗಳಾಗಿದ್ದಾರೆ. ತಮ್ಮ ಜಿಲ್ಲೆಯ ಜನತೆಯೊಂದಿಗೆ ಇಂತಹ ಜಘನ್ಯ ವರ್ತನೆಗೆ ಅವರು ಏನಾದರೂ ಹೇಳುತ್ತಾರೆಯೇ ಎಂದು ಬಾದಲ್ ಸರೋಜ್ ಪ್ರಶ್ನಿಸಿದ್ದಾರೆ.

ರಾಜ್ಯದ ಎಲ್ಲ ಪ್ರಜಾಪ್ರಭುತ್ವವಾದಿಗಳು ಈ ನಾಚಿಕೆಗೆಟ್ಟ ಬರ್ಬರ ವರ್ತನೆಯನ್ನು ಪ್ರತಿಭಟಿಸಬೇಕು ಎಂದು ಸಿಪಿಐ(ಎಂ) ಕರೆ ನೀಡಿದೆ.

ಒಡಿಶಾದಲ್ಲಿ ಆದಿವಾಸಿಗಳು ಮತ್ತು ದಲಿತರ ಮಹಾ ಸಮಾಬೇಶ್'

ಸಪ್ಟಂಬರ್ 30 ರಂದು ಮಲ್ಕನ್‌ಗಿರಿ ಜಿಲ್ಲೆಯ ಚಿತ್ರಕೊಂಡದಲ್ಲಿ 'ಆದಿವಾಸಿ ಅಧಿಕಾರ್ ರಾಷ್ಟ್ರೀಯ ಮಂಚ್' (ಎಎಆರ್‌ಎಂ) ನಡೆಸಿದ 'ಮಹಾ ಸಮಾವೇಶ್'ನಲ್ಲಿ ನೂರಾರು ಆದಿವಾಸಿಗಳು ಮತ್ತು ದಲಿತರು ಕೆಂಬಾವುಟಗಳನ್ನು ಹಿಡಿದುಕೊಂಡು ಭೂಮಿ, ಮನೆ ಪಟ್ಟಾ, ಕೆಲಸ, 600ರೂ. ದಿನಗೂಲಿ, ರಸ್ತೆ, ವಿದ್ಯುತ್ ಬೇಕು ಎಂಬ ಘೋಷಣೆಗಳೊಂದಿಗೆ ಭಾಗವಹಿಸಿದರು.



ಮಹಾ ಸಮಾವೇಶ ಬಿಜೆಪಿಯ ವಿಭಜನಕಾರಿ ಧೋರಣೆಗಳು ಮತ್ತು ಮೋದಿ ಸರಕಾರದ ದುರಾಡಳಿತದ ವಿರುದ್ಧ ಹೋರಾಟ ನಡೆಸುವ ಪ್ರತಿಜ್ಞೆ ಮಾಡಿತು. ಎಎಆರ್‌ಎಂ ಅಧ್ಯಕ್ಷ ಹಾಗೂ ಮಾಜಿ ಸಂಸದ ಎಂ ಬಾಬುರಾವ್, ಸಿಪಿಐ(ಎಂ) ಒಡಿಶಾ ರಾಜ್ಯ ಕಾರ್ಯದರ್ಶಿ ಅಲಿ ಕಿಶೋರ್ ಪಟ್ನಾಯಕ್ ಮುಂತಾದವರು ಮಾತನಾಡಿದರು.

ರಾಜ್ಯಗಳ ಸುತ್ತ

ವಸಾಹತುಶಾಹಿಗಳ ಸೇವೆ ಮಾಡಿದವರಿಂದ ರಾಷ್ಟ್ರೀಯವಾದದ ಸಲಹೆ ಬೇಕಿಲ್ಲ –ಪಿಣರಾಯಿ ವಿಜಯನ್

ಕೇರಳೀಯರಿಗೆ ಸ್ವಾತಂತ್ರ್ಯ ಆಂದೋಲನಕ್ಕೆ ಬೆನ್ನು ತೋರಿ ವಸಾಹತುಶಾಹಿಗಳ ಸೇವೆ ಮಾಡಿದವರಿಂದ ರಾಷ್ಟ್ರೀಯವಾದದ ಬಗ್ಗೆ ಯಾವುದೇ ಸಲಹೆಯ ಅಗತ್ಯ ಇಲ್ಲ ಎಂದು ಸಿಪಿಐ(ಎಂ) ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ್‌ರವರಿಗೆ ಬಲವಾದ ಪ್ರತ್ಯುತ್ತರ ನೀಡಿದ್ದಾರೆ.

"ಸ್ವಾತಂತ್ರ್ಯ ಹೋರಾಟದಲ್ಲಿ ಕೇರಳಿಗರು ಮತ್ತು ಕೇರಳ ಸ್ಮರಣೀಯ ಕೊಡುಗೆಗಳನ್ನು ನೀಡಿದ್ದಾರೆ. ಈ ಆರೆಸ್ಸೆಸ್ ಮುಖಂಡ ಕೇರಳಿಯರೀಗೆ ದೇಶಪ್ರೇಮದ ಮೇಲೆ ಪಾಟ ಹೇಳಬೇಕಾಗಿಲ್ಲ" ಎಂದು ಅವರು ಖಾರವಾಗಿ ಪ್ರತಿಕ್ರಿಯಿಸಿದ್ದಾರೆ

ಆರೆಸ್ಸೆಸ್ ಮುಖ್ಯಸ್ಥರು ನಾಗಪುರದಲ್ಲಿ ತಮ್ಮ ವಿಜಯದಶಮಿ ಭಾಷಣದಲ್ಲಿ ಎಡ ಆಡಳಿತದ ಕೇರಳ ಮತ್ತು ಮಮತಾ ಬ್ಯಾನರ್ಜಿ ಆಡಳಿತದ ಪಶ್ಚಿಮ ಬಂಗಾಲದಲ್ಲಿ 'ಜಿಹಾದಿ ಮತ್ತು ರಾಷ್ಟ್ರ–ವಿರೋಧಿ' ಶಕ್ತಿಗಳು ಕೆಲಸ ಮಾಡುತ್ತಿವೆ, ಅಲ್ಲಿಯ ಸರಕಾರಗಳೂ ಆ ಬಗ್ಗೆ ನಿರ್ಲಕ್ಷ್ಯದಿಂದಿವೆ, ಮಾತ್ರವಲ್ಲ, ಕೆಲವೊಮ್ಮೆ ಅವುಗಳಿಗೆ ಸಹಾಯಹಸ್ತವನ್ನೂ 'ಅಲ್ಪ ರಾಜಕೀಯ ಹಿತಗಳಿಗಾಗಿ' ಚಾಚಿದ್ದಾರೆ ಎಂದಿದ್ದರು.

ಇದನ್ನು ಬಲವಾಗಿ ನಿರಾಕರಿಸುತ್ತ ಕೇರಳ ಮುಖ್ಯಮಂತ್ರಿಗಳು, ಕೇರಳದಲ್ಲಿ ರಾಜಕೀಯ ವಾತಾವರಣವನ್ನು ಕದಡುವಲ್ಲಿ ಕೋಮುವಾದಿ ಶಕ್ತಿಗಳು ಒಂದು ಪ್ರಧಾನ ಪಾತ್ರ ವಹಿಸುತ್ತಿವೆ ಎಂಬುದು ಎಲ್ಲರಿಗೂ ತಿಳಿದ ಸಂಗತಿ, ಆದರೆ "ನಾವು ಕೋಮುವಾದಿ ಶಕ್ತಿಗಳನ್ನು ಕೋಮುವಾದಿ ಶಕ್ತಿಗಳಾಗಿ, ಭಯೋತ್ಪಾದಕರನ್ನು ಭಯೋತ್ಪಾದಕರಾಗಿ ಮತ್ತು ಕ್ರಿಮಿನಲ್ ಕೃತ್ಯಗಳನ್ನು ಕ್ರಿಮಿನಲ್ ಕೃತ್ಯಗಳಾಗಿಯೇ ಕಾಣುತ್ತೇವೆ" ಎಂದು ಟಿಪ್ಪಣಿ ಮಾಡಿದ್ದಾರೆ. **ಎಲ್‌ಡಿಎಫ್ ಸರಕಾರ ರಾಷ್ಟ್ರ–ವಿರೋಧಿಗಳಿಗೆ ಬೆಂಬಲ ನೀಡುತ್ತಿದೆ ಎಂಬುದು ಪ್ರತಿಯೊಬ್ಬ ಕೇರಳೀಯರಿಗೆ ಮತ್ತು ಒಟ್ಟಾಗಿ ಕೇರಳ ಸಮಾಜಕ್ಕೆ ಒಡ್ಡಿರುವ ಸವಾಲು ಎಂದು ಅವರು ಹೇಳಿದರು.**

ಈ ಮಹಾನುಭಾವ ಮತ್ತು ಆತನ ಸಂಘಟನೆ ಧಾರ್ಮಿಕ ಅಲ್ಪಸಂಖ್ಯಾತರು ದೇಶಕ್ಕೆ ಆಂತರಿಕ ಬೆದರಿಕೆ ಎಂದು ಪರಿಗಣಿಸುತ್ತಾರೆ. ಇದು ಆರೆಸ್ಸೆಸ್‌ನ ನೀತಿ ಸಂಹಿತೆ, ಆದರೆ ಎಲ್‌ಡಿಎಫ್ ಸರಕಾರ ಅಲ್ಪಸಂಖ್ಯಾತರ ರಕ್ಷಣೆಗೆ ಬದ್ಧವಾಗಿದೆ ಎಂದರು.

ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ, ಕೋಮುವಾದಿ ಧ್ರುವೀಕರಣವನ್ನು ಸಮರ್ಥಿಸಿಕೊಳ್ಳಲಾಗುತ್ತಿದೆ, ಗೋರಕ್ಷಣೆಯ ಹೆಸರಲ್ಲಿ ಹತ್ಯೆಗಳು ನಡೆಯುತ್ತಿವೆ, ಆದರೂ ಕೇರಳದಲ್ಲಿ ಹಿಂಸಾಚಾರ ನಡೆಯುತ್ತಿದೆ ಎಂದು ಪ್ರಚಾರ ಮಾಡಲಾಗುತ್ತಿದೆ. ಇದು ಒಂದು ತಪ್ಪು ದಿಕ್ಕಿನ ಪ್ರಯಾಣ ಎಂದಿರುವ ಪಿಣರಾಯಿ ವಿಜಯನ್, **"ಕೋಮುವಾದಿ ಶಕ್ತಿಗಳು ಎಷ್ಟೇ ದೊಡ್ಡದಿರಲಿ, ಜನಗಳ ಬದುಕುಗಳನ್ನು ಛಿದ್ರಗೊಳಿಸಲು ಪ್ರಯತ್ನಗಳನ್ನು ನಡೆಸಿದರೆ, ಎಲ್‌ಡಿಎಫ್ ಸರಕಾರ ಯಾವುದೇ ರಾಜಿ ಮಾಡಿಕೊಳ್ಳುವದಿಲ್ಲ, ಸಂವಿಧಾನ ಮತ್ತು ಅದರ ಮೌಲ್ಯಗಳ ನಡುವೆ ಬರುವವರಿಗೆ ಯಾವುದೇ ಸೈರಣೆಯನ್ನು ತೋರುವುದಿಲ್ಲ"** ಎಂದು ಎಚ್ಚರಿಸಿದ್ದಾರೆ.

ಉತ್ತರ ಕೊರಿಯಾ ಬಾಂಬ್ ಪರೀಕ್ಷೆ: ಹೆಚ್ಚುತ್ತಿರುವ ಬಿಕ್ಕಟ್ಟು;

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಸೆಪ್ಟಂಬರ್ 3 ಉತ್ತರ ಕೊರಿಯಾ "ಹೈಡ್ರೋಜನ್ ಬಾಂಬ್" ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿದ್ದೇವೆ ಎಂದು ಹೇಳಿಕೊಂಡಿದೆ. ಇದು ಸುಮಾರು 120 ಕಿಲೋ ಟನ್ನಿನಷ್ಟಿದ್ದು, 1945 ರಲ್ಲಿ ಅಮೆರಿಕವು ಹಿರೋಷಿಮಾದ ಮೇಲೆ ಹಾಕಿದ್ದ, ಅಣು ಬಾಂಬಿಗಿಂತ 8 ಪಟ್ಟು ಹೆಚ್ಚು ಶಕ್ತಿಯುತವಾದದ್ದು ಎಂದು ಅಂದಾಜಿಸಲಾಗಿದೆ. ಕಳೆದ ಒಂದು ವರ್ಷದಿಂದ 6 ಬಾರಿ ಅಣ್ವಸ್ತ್ರ ಪರೀಕ್ಷೆ ನಡೆಸಿರುವ ಉತ್ತರ ಕೊರಿಯಾವು ಅಮೆರಿಕಾ ಮತ್ತು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಎಲ್ಲಾ ನಿಯಮಾವಳಿಗಳನ್ನು ಉಲಂಘಿಸಿ ವಿರೋಧಕ್ಕೆ ತುತ್ತಾಗಿದೆ. ಇದರಿಂದಾಗಿ ಉತ್ತರ ಕೊರಿಯಾ ಮತ್ತು ಅಮೆರಿಕಾ ನಡುವಿನ ಬಿಕ್ಕಟ್ಟು ಮತ್ತಷ್ಟು ಬಿಗಡಾಯಿಸಿ ಯುದ್ಧದ ಕಾರ್ಮೋಡ ಕವಿಯುವ ಅಂಚಿಗೆ ಬಂದು ತಲುಪಿದೆ.

ಇತ್ತೀಚೆಗೆ ಇಂಟರ್ ಕಾಂಟಿನೆಂಟಲ್ ಬ್ಯಾಲೆಸ್ಟಿಕ್ ಕ್ಷಿಪಣಿ (ಐ.ಸಿ.ಬಿ.ಎಂ) ಪರೀಕ್ಷೆಗಳೊಂದಿಗೆ ಅಮೆರಿಕಾದ ಪಶ್ಚಿಮ ತೀರವನ್ನು ತಲುಪುವಂತಹ ಕ್ಷಿಪಣಿಗಳನ್ನು ತಾನು ಹೊಂದಿದ್ದೇನೆ ಎಂದು ಉತ್ತರ ಕೊರಿಯಾ ಸಾಬೀತು ಪಡಿಸಿದೆ. ವರದಿಗಳಿಂದ ಕುಪಿತಗೊಂಡಿರುವ ಅಮೇರಿಕಾದ ಅಧ್ಯಕ್ಷ ಟ್ರಂಪ್ ಕೀಳು ಪದಗಳಿಂದ ಕಿಮ್ ಮೇಲೆ ವಾಗ್ದಾಳಿ ನಡೆಸಿದ್ದರು. ಇದು ಉತ್ತರ ಕೊರಿಯಾದ ಪರಮಾಣು ಶಸ್ತ್ರಾಸ್ತ್ರ ಮತ್ತು ಕ್ಷಿಪಣಿ ಪರೀಕ್ಷೆಗಳನ್ನು ನಿಲ್ಲಿಸುವ ಅಮೆರಿಕದ ಪ್ರಯತ್ನ ವಿಫಲಗೊಂಡಿರುವುದನ್ನು ಪ್ರತಿಬಿಂಬಿಸುತ್ತದೆ. ಜಗತ್ತಿನ ರಾಷ್ಟ್ರಗಳಿಗೆ ಆತಂಕ ಉಂಟುಮಾಡಿರುವ ಈ ಬೆಳವಣಿಗೆಗಳು ಚೀನಾ ಮತ್ತು ರಷ್ಯಾಗಳಂತ ಬಲಿಷ್ಠ ರಾಷ್ಟ್ರಗಳ ನಾಯಕರುಗಳಿಗೂ ನಿದ್ದೆಗೆಡಿಸಿದೆ. ಯು. ಎಸ್. ಮಿಲಿಟರಿ ನಾಯಕರು ಹಾಗೂ ಟ್ರಂಪ್‌ರ ಟ್ವೀಟರಗಳ ಬೆದರಿಕೆಗಳು ಉತ್ತರ ಕೊರಿಯಾವನ್ನು ಪರಮಾಣು ಅಂಚಿನಿಂದ ದೂರವಿಡಲು ಯಾವುದೇ ಸಹಾಯ ಮಾಡುವುದಿಲ್ಲ ಎಂಬ ಅಭಿಪ್ರಾಯಕ್ಕೆ ಈ ಎರಡೂ ರಾಷ್ಟ್ರಗಳ ಬಂದಂತಿವೆ.

ಉತ್ತರ ಕೊರಿಯಾದೊಂದಿಗೆ ಹಾಗೂ ಪರಮಾಣು ಗುಂಪಿನ ಇನ್ನಿತರೆ ರಾಷ್ಟ್ರಗಳೊಂದಿಗೆ ಮಾತುಕತೆಯನ್ನು ಪುನಃ ಆರಂಭಿಸುವುದೇ ಇದೀಗ ಇರುವ ಏಕೈಕ ಮಾರ್ಗವಾಗಿದೆ ಎಂದು ವಿಶ್ವದ ದೊಡ್ಡ ರಾಷ್ಟ್ರಗಳ ಬಲವಾದ ಅಭಿಪ್ರಾಯವಾಗಿದೆ.

ಅಣ್ವಸ್ತ್ರದ ಅಸಾಮಾನ್ಯ ಶಕ್ತಿ

ಉತ್ತರ ಕೊರಿಯಾವು ಕಳೆದ ಒಂದು ವರ್ಷದಿಂದ ನಿರಂತರವಾಗಿ ನಡೆಸಿಕೊಂಡು ಬರುತ್ತಿರುವ ಕ್ಷಿಪಣಿ ಪರೀಕ್ಷೆಗಳು ಅನೇಕ ಬಾರಿ ವಿಫಲಗೊಂಡಿವೆಯಾದರೂ, ಕಳೆದ ಜುಲೈ–ಆಗಸ್ಟ್‌ನಲ್ಲಿ ಪರಮಾಣು ಅಣ್ವಸ್ತ್ರದ ಪರೀಕ್ಷೆಗಳು ಯಶಸ್ವಿಯಾಗಿವೆ. ಸೆಪ್ಟೆಂಬರ್ 3 ರಂದು ಪರೀಕ್ಷೆಗೆ ಒಳಪಟ್ಟ 'ಹೈಡ್ರೋಜನ್ ಬಾಂಬ್' ಅತ್ಯಂತ ಅಪಾಯಕಾರಿ ಹಾಗೂ ತುಂಬ ಶಕ್ತಿಶಾಲಿಯಾದದ್ದು. ಇದು ಪೂರ್ಣ ಪ್ರಮಾಣದ ಹೈಡ್ರೋಜನ್ ಬಾಂಬು ಕೂಡ ಆಗಿರಬಹುದು ಅಥವಾ ಒಂದು ವರ್ದಿತ – ಉತ್ತೇಜನಾಕಾರಕ ವಿದಳದ (Boosted fission device) ಸಾಧನವಾಗಿರಬಹುದು. ಇತ್ತೀಚೆಗೆ ಸಂಭವಿಸಿರುವ 3.5 ತೀವ್ರತೆಯ ಭೂಕಂಪನವು ಉತ್ತರ ಕೊರಿಯಾದ ಅಣುಬಾಂಬ್ ಪರೀಕ್ಷಾ ಕೇಂದ್ರದ ಬಳಿಯೇ ಇರುವುದು. ಅಣುಸ್ಫೋಟದಿಂದಲೇ ಕಂಪನದ ಸಾಧ್ಯತೆ ಎಂದು ಚೀನಾ ಸಮೇತ ಹಲವು ದೇಶಗಳು ಬಲವಾಗಿ ಶಂಕೆ ವ್ಯಕ್ತಪಡಿಸಿವೆ.

ಈ ಎರಡೂ ಹಂತಗಳಲ್ಲಿಯೂ ಉತ್ತರ ಕೊರಿಯಾದ ಪರಮಾಣು ಅಣ್ವಸ್ತ್ರದ ಸಾಮರ್ಥ್ಯದ ಪ್ರಮಾಣವು ಅಧಿಕವಾಗಿಯೇ ಇದೆ ಎಂದು ಪರಿಗಣಿಸಲಾಗಿದೆ 'ಕಿಂಗ್ ಜಂಗ್' ರ ಇತ್ತೀಚಿನ ಅಣ್ವಸ್ತ್ರ ಪರೀಕ್ಷೆ'ಯ ಇಳುವರಿ ಪ್ರಮಾಣದ ತೀವ್ರತೆ 120 ಕಿ.ಲೋ. ಟನ್ನಿನಷ್ಟು ಎಂಬುದು ಪ್ರಮುಖವಾದದ್ದು. ಇದರಿಂದಾಗಿ ಉತ್ತರ ಕೊರಿಯಾವು ವಾಸ್ತವವಾಗಿ ಪರಮಾಣು ಅಣ್ವಸ್ತ್ರ ಹೊಂದಿರುವ 'ರಾಷ್ಟ್ರಗಳ ಕ್ಲಬ್'ಗೆ ಪ್ರವೇಶಿಸಿದೆ ಎಂದು ವಿಶ್ವವು ಒಪ್ಪಿಕೊಳ್ಳಬೇಕಾಗಿದೆ ಎಂಬುದನ್ನು ಸಾಬೀತು ಪಡಿಸುವುದೇ ಅದರ ನಾಯಕ 'ಕಿಮ್ ಜಂಗ್–ಯುನ್'ರ ರಣನೀತಿ ಆಗಿದೆ.

ಹುಚ್ಚು–ಸಿದ್ಧಾಂತಗಳನ್ನು ಬಿಟ್ಟು–ಮಾತುಕತೆಗೆ ಮುಂದಾಗಿ

ಉತ್ತರ ಕೊರಿಯಾ ಈಗ ಎದುರಿಸುತ್ತಿರುವ ಏಕೈಕ ಪ್ರಶ್ನೆ ಎಂದರೆ, ಅಣ್ವಸ್ತ್ರ ಪುನರ್–ಪ್ರವೇಶದ ಮೇಲೆ ನಾಶವಾಗದಂತೆ, ರಕ್ಷಿಸಲು ಅವಶ್ಯಕವಾದ ಶಾಖ–ಗುರಾಣಿಗಳನ್ನು **(Heat-Shield)** ಅಭಿವೃದ್ಧಿ ಪಡಿಸಿದೆಯೇ ಎಂಬುದು? ಉತ್ತರ ಕೊರಿಯಾವು ಪರಮಾಣು ವಿನಿಮಯ ಕೇಂದ್ರದಲ್ಲಿ ಶಾಖದ ಗುರಾಣಿಯನ್ನು ಹೊಂದಿಲ್ಲ ಎಂದು ಅಮೆರಿಕವು ಕಾರಣ ನೀಡುತ್ತಿದೆ. ಆದರೆ, ಉತ್ತರ ಕೊರಿಯಾ ತನ್ನ ಪರಮಾಣು ಮತ್ತು ಕ್ಷಿಪಣಿ ಕಾರ್ಯಕ್ರಮಗಳೊಂದಿಗೆ "ನಿರೋಧಕ ಹಂತ"ಕ್ಕೆ ತಲುಪಿದೆ ಎಂಬುದು ಸ್ಪಷ್ಟವಾಗಿದೆ. ಅಸಹಜವಾದ ಹುಚ್ಚು ಸಿದ್ಧಾಂತಗಳ ಸಮಸ್ಯೆಗಳಿಗೆ ಸಿಕ್ಕಿಹಾಕಿಕೊಂಡು, ಶಾಂತಿಯುತವಾದ ಮಾರ್ಗಗಳನ್ನು ಮುಚ್ಚಿ ಹಾಕಿ ಪರಸ್ಪರ ನಾಶಮಾಡಿಕೊಳ್ಳುವ ಈ ಸಿದ್ಧಾಂತಗಳ ಕೆಸರೆರಚಾಟಗಳ ಇಬ್ಬರ ಆಟಗಳಿಗೆ ಇಡೀ ವಿಶ್ವವೇ ರಣಬೀತಿಯಲ್ಲಿ ಮುಳುಗುವಂತಾಗಿದೆ.

ಉತ್ತರ ಕೊರಿಯಾವು ಕ್ಷಿಪಣಿ ಮತ್ತು ಪರಮಾಣು ಶಸ್ತ್ರಾಸ್ತ್ರಗಳ ಪರೀಕ್ಷೆಗಳ ಪ್ರಚೋದನಕಾರಿ ಕೃತ್ಯಗಳನ್ನು ನಿಲ್ಲಿಸಬೇಕೆಂದು ಚೀನಾ ಮತ್ತು ರಷ್ಯಾ ಎರಡೂ ರಾಷ್ಟ್ರಗಳ ನಾಯಕರು ವಾದ ವ್ಯಕ್ತಪಡಿಸಿದ್ದಾರೆ. ಜೊತೆಗೆ ಉತ್ತರ ಕೊರಿಯಾದ ಪರ್ಯಾಯ ದ್ವೀಪಗಳ–ಗಡಿಗಳಲ್ಲಿ ದಕ್ಷಿಣ ಕೊರಿಯಾದೊಂದಿಗೆ ಅದಕ್ಕೆ ಸರಿಸಾಟಿ ಎಂಬಂತೆ ನಡೆಸುತ್ತಿರುವ ಪ್ರಚೋದನಕಾರಿ ಮಿಲಿಟರಿ ಜಂಟೀ–ಕವಾಯತುಗಳ ಚಟುವಟಿಕೆಗಳನ್ನು ನಿಲ್ಲಿಸಿ ಉದ್ಭವಗೊಂಡಿರುವ ಪರಮಾಣು ಯುದ್ಧದ ಬಿಕ್ಕಟನ್ನು ಪರಿಹರಿಸಿಕೊಳ್ಳುವ ದಿಸೆಯಲ್ಲಿ ಮಾತುಕತೆಗೆ ಹಾದಿಯನ್ನು ಸುಗಮ ಪಡಿಸಿಕೊಳ್ಳಬೇಕು ಎಂದು ಅಮೆರಿಕಾಕ್ಕೂ ತಿಳಿಸಿದ್ದಾರೆ.



ಉದ್ರೇಕಕ್ಕೆ ಕಾರಣ

ಅಮೆರಿಕಾದ 17,000 ಯುದ್ಧ ಸಿಬ್ಬಂದಿಗಳು ಹಾಗೂ ದಕ್ಷಿಣ ಕೊರಿಯಾದ 50,000 ಸೈನಿಕರು ಒಳಗೊಂಡಿರುವ ಜಂಟೀ–ಕವಾಯತು, 2016 ರಿಂದಲೇ ನಿರಂತರವಾಗಿ ಉತ್ತರಕೊರಿಯಾದ ಪರ್ಯಾಯ ದ್ವೀಪ–ಪೆನಿನ್ಸ್‌ಲ್ಲಾ ಪ್ರದೇಶದಲ್ಲಿ ನಡೆಸುತ್ತಿರುವುದು ಕಿಮ್ ಗೆ ಕಿರಿ–ಕಿರಿ ತರುತ್ತಿತು. ಅಷ್ಟೇ ಅಲ್ಲದೇ ಅಮೆರಿಕಾದ ಬಿ–1ಬಿ ಸೂಪರ್ ಬಾಂಬುಗಳು ಗೌಹ್ಮ್ ಮತ್ತು ಉತ್ತರ ಕೊರಿಯಾದ ದ್ವೀಪ ಪ್ರದೇಶದ ಸುತ್ತ, ಕಳೆದ ಆಗಸ್ಟ್‌ನಲ್ಲಿ 11 ದಿನಗಳ ಕಾಲ ನಿರಂತರವಾಗಿ ಸರ್ಜಿಕಲ್ ದಾಳಿ ಹಾಗೂ ಕ್ಷಿಪಣಿ ದಾಳಿಗಳನ್ನು ಯಥೇಚ್ಛವಾಗಿ ನಡೆಸಿದ್ದು ಯುವ ನಾಯಕ 'ಕಿಮ್' ನನ್ನು ಮತ್ತಷ್ಟು ಕೆರಳಿಸಿತು. ಇದರ ಪರಿಣಾಮವೇ ಪ್ರಸಕ್ತ ಸೆಪ್ಟೆಂಬರ್ 3 ರ ಹೈಡ್ರೋಜನ್ ಬಾಂಬ್ ಪರೀಕ್ಷೆಯಾಗಿದೆ ಎಂದು ಅಂದಾಜು ಮಾಡಲಾಗಿದೆ.

ಅಮೆರಿಕಾ ಯಜಮಾನಿಕೆಯ ನಿರಂತರ ಆಕ್ರಮಣಗಳು

ಉತ್ತರ ಕೊರಿಯಾದ ಅಣ್ವಸ್ತ್ರ ಪರೀಕ್ಷೆಯ ನಂತರ ಇವನೊಬ್ಬ 'ಹುಚ್ಚುತನದ' ಮನುಷ್ಯ, ಇದೊಂದು 'ರಾಕ್ಷಸ ರಾಜ್ಯ' ವೆಂದು ಅಧ್ಯಕ್ಷ ಟ್ರಂಪ್ ಟ್ವೀಟ್ ಮಾಡಿದ್ದಾರೆ. ಜೊತೆಗೆ ಉತ್ತರ ಕೊರಿಯಾದ 8 ಬ್ಯಾಂಕುಗಳ ಮೇಲೆ ಆರ್ಥಿಕ ದಿಗ್ಬಂಧನ ಹೇರಲಾಗಿದೆ ಎಂದು ಇತ್ತೀಚೆಗೆ ವರದಿಯಾಗಿದೆ. ಚೀನಾ ಮತ್ತು ರಷ್ಯಾಗಳಿಗೂ ದಿಗ್ಬಂಧನ ಹೇರಲು ತಿಳಿಸಲಾಗಿದೆ.

ಆದರೆ, ಜಗತ್ತಿಗೆ ಗೊತ್ತಿರುವ ಸಂಗತಿಯೆಂದರೆ, ಅಮೆರಿಕವು ಕಳೆದ 70 ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವ ಆಕ್ರಮಣಗಳಿಗೆ ಎಡೆ ಇಲ್ಲದಿರುವುದು. ಇದರ ಯಜಮಾನಿಕೆಯ ದರ್ಬಾರಿನಲ್ಲಿ ಆಕ್ರಮಣಗಳು, ದಿಗ್ಬಂದನಗಳು, ಇದರ ಮಾತನ್ನು ಪಾಲಿಸದ ರಾಷ್ಟ್ರಗಳ ಆಡಳಿತಗಳ ಬದಲಾವಣೆಗಳು, ಮಿಲಿಟರಿ ದಾಳಿಗಳು, ಬಗ್ಗದಿದ್ದರೆ ಯುದ್ಧಗಳನ್ನು ಮಾತ್ರವಲ್ಲದೆ, ಅಣು–ಬಾಂಬುಗಳನ್ನು ದೇಶಗಳ ಮೇಲೆ ಎಸೆಯುವುದು (ಜಪಾನಿನ ಹಿರೋಷಿಮಾ–ನಾಗಸಾಕೀಯ ಉದಾರಣೆಗಳು)– ಇಂಥಹ ಮಾನವ ಧ್ವಂಸ ಕೃತ್ಯಗಳನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿರುವ ಜಗತ್ತಿನ ಏಕೈಕ ದೇಶ ಸಾಮ್ರಾಜ್ಯಶಾಹಿ ಅಮೆರಿಕವೆಂಬುದು ಜಗಜ್ಜಾಹಿರ ವಿಚಾರವಾಗಿದೆ.

ಯಾವುದೇ ಒಂದು ಸಣ್ಣ ರಾಷ್ಟ್ರವು 'ಇತಿಹಾಸದಲ್ಲಿಯೇ' ಇದುವರೆಗೂ, ಮಿಲಿಟರಿ ಬಳಸಿ ದೊಡ್ಡ ಪ್ರಮಾಣದ ಆಕ್ರಮಣ ನಡೆಸಿರುವ ಉದಾಹರಣೆಗಳು ಇಲ್ಲ. ಹಾಗೇನಾದರೂ ಆಕ್ರಮಣಗಳ ನಿರಂತರತೆ ಕಾಯ್ದುಕೊಂಡು ಬಂದಿರುವ ಸಾಮ್ರಾಜ್ಯಶಾಹಿಯೇ ಈ ಅಮೆರಿಕ ಎಂದು ಮುಜುಗರವಿಲ್ಲದೆ ದೂರಬಹುದು.

ಬುಷ್'ನ ಘೋಷಣೆಗಳನ್ನು ಮತ್ತಷ್ಟು ಪ್ರತಿಗಾಮಿಯಾಗಿ ಪಾಲಿಸುತ್ತಿರುವ ಟ್ರಂಪ್

ಹಿಂದಿನ ಅಧ್ಯಕ್ಷ ಬುಷ್ ರವರ 'ಇರಾಕ್ ಘೋಷಣೆ' ಗಳೆಂದರೆ, ಇರಾಕ್, ಲಿಬ್ಯಾ ಮತ್ತು ಉತ್ತರ ಕೊರಿಯಾ ದೇಶಗಳು ದುಷ್ಟ ಕೂಟಗಳ "ಒಂದು ಅಕ್ಷ ಗುಂಪು" ಎಂದು ಘೋಷಿಸಿದ್ದರು. ಇದರ ಪ್ರಕಾರ ಇದೀಗ ಉತ್ತರ ಕೊರಿಯಾದ ಮೇಲೆ ಆಕ್ರಮಣದ ಮೂಲಕ ಅಲ್ಲಿನ ಆಡಳಿತದ ಬದಲಾವಣೆಯು ಪ್ರಮುಖ ಗುರಿಯಾಗಿದೆ. ಆ 'ಇರಾಕ್ ಘೋಷಣೆ'ಯಲ್ಲಿ ಬಾಕಿ ಉಳಿದಿರುವುದು ಉತ್ತರ ಕೊರಿಯಾ ಮಾತ್ರ ಅದನ್ನು ಜಾರಿ ಮಾಡುವ ದಿಸೆಯಲ್ಲಿ ಟ್ರಂಪ್ ಕಾರ್ಯ ಪ್ರವೃತ್ತರಾಗಿದ್ದಾರೆ. ಆದರೆ 'ಕಿಮ್' ಇದಾವುದಕ್ಕು ಸೊಪ್ಪು ಹಾಕುತ್ತಿಲ್ಲದಿರುವುದು, 'ಟ್ರಂಪ್'ನ ನಿದ್ದೆಗೆಡಿಸಿದೆ.

ಇರಾಕ್‌ನಲ್ಲಿ 'ಸದ್ದಾಂ ಹುಸೇನ್', ಆ ನಂತರ ಲಿಬ್ಯಾದ 'ಗಡ್ಡಾಫಿ'ಯವರನ್ನೂ ಕೊಂದ ನಂತರ, ಉ.ಕೊರಿಯಾವನ್ನು ಮುಗಿಸುವುದೇ 'ಬುಷ್'ನ ಆಶಯವಾಗಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಸದ್ದಾಂ, ಗಢಾಫಿ ಹಾಗೂ ಯಾಸರ್ ರವರು ಪರಮಾಣು ಹಾಗೂ ರಾಸಾಯನಿಕ ಶಸ್ತ್ರಾಸ್ತ್ರಗಳನ್ನು ಬಿಟ್ಟುಕೊಟ್ಟಿದ್ದರಿಂದ, ತರುವಾಯ ಉಂಟಾದ ಪರಿಣಾಮಗಳು ಇದೀಗ ಮಿಲಿಟರಿ ಇತಿಹಾಸದ ಪುಟಗಳನ್ನು ಸೇರಿವೆ. ಇದರ ಪೂರ್ಣ ಅರಿವಿರುವ ಉತ್ತರ ಕೊರಿಯಾವು 'ಕಿಮ್' ನಾಯಕತ್ವದಲ್ಲಿ ಪರಮಾಣು ಶಸ್ತ್ರಾಸ್ತ್ರಗಳ ಹೊಸ ಕಥನ ಸೃಷ್ಟಿಸಲು ಹೊರಟಂತಿದೆ. ಉತ್ತರ ಕೊರಿಯಾ ಪರಮಾಣು ಅಣ್ವಸ್ತ್ರ ಬಿಟ್ಟು ಕೊಡುವುದು ಅಸಂಭವವಾಗಿದೆ. ತಮ್ಮನ್ನು ತಾವೇ ಸ್ವತಃ ರಕ್ಷಿಸಿಕೊಳ್ಳಬೇಕೆಂದು ಅನೇಕ ವಿಶ್ಲೇಷಕರು ಕೂಡ ವಾದಿಸುತ್ತಿದ್ದಾರೆ. ಸೆನೆಟರ್ ಡಾನ್ ಕೋಟ್ಸ್ ರವರು ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕಿಮ್ ರವರ ಕ್ರಿಯೆಯ ಹಿಂದೆ ಸಮರ್ಥನೆ ಮತ್ತು ಬೆಂಬಲ ಸೂಚಿಸಿದ್ದಾರೆ. ಅದಕ್ಕೆ ಅವರು ತಾರ್ಕಿಕ ಹಿನ್ನೆಲೆಯ ವಿವರಣೆ ಒದಗಿಸಿದ್ದಾರೆ. 'ತಾನು, ತನ್ನ ದೇಶದ ಉಳಿವಿಗಾಗಿ, ತನ್ನ ಜನರ ಉಳಿವಿಗಾಗಿ' ಪರಮಾಣು ಬಾಂಬುಗಳನ್ನು ಹೊಂದುವುದು ಅಗತ್ಯವಿದೆ. ಆದರೆ ಪರಮಾಣು ಹೊಂದಿರುವ ದೇಶಗಳು ಅದರ ಸಾಮಾರ್ಥ್ಯವನ್ನು ಹಾಗೂ ಅದರ 'ನಿರೋಧಕ ಸಾಮರ್ಥ್ಯ' ಗಳ ಮೇಲೆ ಹತೋಟಿ ಹೊಂದಿರ ಬೇಕಾಗುತ್ತದೆ ಎಂದಿದ್ದಾರೆ.

ದುರದೃಷ್ಟವಶಾತ್, ಲಿಬಿಯಾ ಮತ್ತು ಉಕ್ರೇನ್ ಅಣ್ವಸ್ತ್ರಗಳನ್ನು ಬಿಟ್ಟುಕೊಟ್ಟ ಪರಿಣಾಮದಿಂದ ಕಲಿತ ಪಾಠಗಳನ್ನು ಮರೆಯುವಂತಿಲ್ಲ. ಆದ್ದರಿಂದ ಯಾವುದೇ ದೇಶಗಳು ' ಅಣ್ವಸ್ತ್ರಗಳನ್ನು' ಹೊಂದಿದ್ದರೆ "ಎಂದಿಗೂ ಬಿಟ್ಟುಕೊಡಬೇಡಿರಿ–ಇಲ್ಲದಿದ್ದರೆ ಪಡೆದುಕೊಳ್ಳಿ" ಎಂಬ ಹೇಳಿಕೆಯನ್ನು ಆಸ್ಪೆನ್ ಭದ್ರತಾ ಪೋರಂನಲ್ಲಿ ಸೆನೆಟರ್ ಡಾನ್ ಕೋಟ್ಸ್' ಕೊಟ್ಟಿದ್ದಾರೆ.

ಉತ್ತರ ಕೊರಿಯಾವು ಅಮೆರಿಕಾ ಮತ್ತು ದಕ್ಷಿಣ ಕೊರಿಯಾದಿಂದ ಆಕ್ರಮಣಗಳ ಅಪಾಯವನ್ನು ಎದುರಿಸುತ್ತಿರುವುದರಿಂದ, ಅಣ್ವಸ್ತ್ರ ಪರೀಕ್ಷೆ ನಡೆಸಿ ಅವರಿಗೆ ಎಚ್ಚರಿಕೆಯನ್ನು ಕೊಟ್ಟಿದೆ. ಉತ್ತರ ಕೊರಿಯಾ ಮತ್ತು ಅಮೆರಿಕದ ನಡುವೆ ಇರುವ ಏಕೈಕ ಒಪ್ಪಂದವೆಂದರೆ, '1953 ರ ಕದನ ವಿರಾಮ'ದ ತಾತ್ಕಾಲಿಕ ಒಪ್ಪಂದ. ಆದರೀಗ ಇದು ಅಪ್ರಯೋಜಕ ಅಥವಾ ಕಡೆಗಣಿಸಲಟ್ಟಿದೆ. ಉತ್ತರ ಕೊರಿಯಾದೊಂದಿಗೆ ಯಾವುದೇ 'ಶಾಶ್ವತ ಶಾಂತಿಗಾಗಿ' ಅಮೆರಿಕವು ನಿರಾಕರಿಸಿರುವುದೇ ಇದಕ್ಕೆ ಕಾರಣ.

1950–53 ರಲ್ಲಿ ನಡೆದ ಕೊರಿಯನ್ ಯುದ್ಧಕ್ಕೆ ಸಂಬಂಧಿಸಿದಂತೆ, ಅಮೆರಿಕಾವು ಸಂಪೂರ್ಣ ವಿಸ್ಮೃತಿ ಪ್ರವೃತಿ ಹೊಂದಿದೆ. ಎರಡನೇ ಜಾಗತಿಕ ಯುದ್ಧದ ಅವಧಿಯಲ್ಲಿ ಅಮೆರಿಕವು ಹೆಚ್ಚು ಬಾಂಬುಗಳನ್ನು ಉತ್ತರ ಕೊರಿಯಾದ ಮೇಲೆ, ಆ ನಂತರ ಇಡೀ ಪೆಸಿಫಿಕ್ ಕಣದಲ್ಲಿ ಬೀಳಿಸಿತ್ತು. ಒಂದು ಅಂದಾಜಿನಂತೆ ಸುಮಾರು 4 ರಿಂದ 5 ದಶಲಕ್ಷ ಕೊರಿಯಾದ ಜನರು ಕೊಲ್ಲಲ್ಪಟ್ಟಿದರು. ಅಮೆರಿಕ ಇದರ ಕುರಿತಂತೆ ಮಾತನಾಡುತ್ತಿಲ್ಲ. ಮೂರು ವರ್ಷಗಳ ಅವಧಿಯ ಆ ಯುದ್ಧದಲ್ಲಿ ಉತ್ತರ ಕೊರಿಯಾದ ಯಾವ ಒಂದು ಮನೆಗಳು ನಿಂತಿರಲಿಲ್ಲ–ಸರ್ವನಾಶವಾಗಿತ್ತು ಎಂದು ಜನರಲ್ ಮ್ಯಾಕ್ ಆರ್ಥರ್ ರವರು ಸಾಕ್ಷ್ಯ ನೀಡಿದ್ದಾರೆ. ಅಮೆರಿಕದ ಸೆನೆಟ್ ಸಮಿತಿಯ ಸೈನಿಕ ಸೇವೆ ಮತ್ತು ವಿದೇಶಿ ಸಂಬಂಧಗಳ ಸದಸ್ಯರಾಗಿದ್ದ ಇವರು, 1951 ರಲ್ಲಿ 82 ನೇ ಸೆನೆಟ್ ಕಾಂಗ್ರೇಸ್ ಅಧಿವೇಶನದಲ್ಲಿ ಮಾತನಾಡುತ್ತಾ, ಇದುವರೆಗೂ 20ಲಕ್ಷ ಕ್ಕೂ ಮಿಗಿಲಾಗಿ ಉತ್ತರ ಕೊರಿಯಾದವರು ನಾಶವಾಗಿದ್ದಾರೆ ಎಂದು ಪ್ರತ್ಯಕ್ಷ ಸಾಕ್ಷಿಯಾಗಿದ್ದವರ ಹೇಳಿಕೆ ಇದಾಗಿದೆ. ಅಮೆರಿಕದ ಕ್ರೂರ ಮಾನವ ವಿರೋದಿ ನೀತಿಗೆ ಇದಕ್ಕಿಂತ ಬೇರೆ ಉದಾಹರಣೆ ಬೇಕೆ?

ಶಾಶ್ವತ ಶಾಂತಿಗಾಗಿ ಮಾಡಿಕೊಂಡಿದ್ದ ಒಪ್ಪಂದ ಚೌಕಟ್ಟಿನ ಮೂಲಭೂತ ತರ್ಕವು ಉತ್ತಮವಾಗಿತ್ತು. ಉತ್ತರ ಕೊರಿಯಾವು 1994 ರಲ್ಲಿ ಪುಟೋನಿಯಂನ ಸಣ್ಣದಾದ, ಅಪರಿಚಿತ ಸಂಗ್ರಹಣೆಯನ್ನು ಹೊಂದಿತ್ತು. ಮತ್ತಷ್ಟು ಮಗದಷ್ಟು ಹೆಚ್ಚು ಹೊಂದಿಸಲು ಪ್ರಯತ್ನಿಸಿತು. ಅಮೆರಿಕವು ಆ ಸಂಗ್ರಹಣೆಯನ್ನು ಯಶಸ್ವಿಯಾಗಿ ಸ್ಥಗಿತಗೊಳಿಸಿತ್ತು.

ಬುಷ್ ಆಡಳಿತವು ಈ ಒಪ್ಪಂದವನ್ನು ಮುರಿಯಲು ನಿರ್ಧರಿಸಿತು. ಎಂಟು ವರ್ಷಗಳ ಕಾಲ ಉತ್ತರ ಕೊರಿಯಾವು ಪರಮಾಣು ಅಣ್ವಸ್ತ್ರ ಹೊಂದಲು ಸಾಧ್ಯವಾಗಿರಲಿಲ್ಲ. ಆದರೀಗ ಬಿಕ್ಕಟ್ಟು ಉಲ್ಬಣಿಸಲು ಅಮೆರಿಕದ ಇಬ್ಬಗೆ ನೀತಿಯೇ ಕಾರಣವಾಗಿದೆ.

ಉತ್ತರ ಕೊರಿಯಾದೊಂದಿಗೆ ಯಾವುದೇ ಆಶಯದ ಬಗ್ಗೆ ಮಾತನಾಡದೇ ಇರುವ ವಿಶ್ವಸಂಸ್ಥೆಯ ದಿಗ್ಬಂದನಗಳು ಕೆಲಸ ಮಾಡುವುದಿಲ್ಲ. ಬದಲಿಗೆ ಅಮೆರಿಕವು ಮಾತುಕತೆಗಳಿಗೆ ಹಿಂದಿರುಗುವ ಪ್ರಕ್ರಿಯೆಗಳನ್ನು ಮರು ಆರಂಭಿಸಬೇಕು. ಕೇವಲ ಕ್ಷಿಪಣಿಗಳು ಮತ್ತು ಪರಮಾಣು ಶಸ್ತ್ರಾಸ್ತ್ರಗಳಿಗಷ್ಟೆ ಸೀಮಿತವಾಗದೆ ಕೊರಿಯಾದಲ್ಲಿ ಶಾಶ್ವತ ಶಾಂತಿ ನೆಲೆಸುವ ವಿಚಾರವು ಮಾತುಕತೆಗಳ ಭಾಗವಾಗಿರಬೇಕು. ಮಾತುಕತೆಗಳಲ್ಲಿ ಚೀನಾ ಮತ್ತು ರಷ್ಯಾವನ್ನು ಪಾಲುದಾರರಾಗಿ ಸೇರಿಸುವ ಮೂಲಕ ಮತ್ತು ದಿಗ್ಬಂಧನಗಳನ್ನು ಮತ್ತು ಅಪಾಯಕಾರಿ ನೀತಿಗಳನ್ನು ರದ್ದು ಪಡಿಸುವ ಮೂಲಕ ಉತ್ತರ ಕೊರಿಯವನ್ನು ಪರಮಾಣು 'ಕ್ಲಬ್'ನ ಪಾಲುದಾರನಾಗಿ ಒಪ್ಪಿಕೊಳ್ಳುವ ವಾತಾವರಣವನ್ನು ಕ್ರಮೇಣವಾಗಿ ಸೃಷ್ಟಿಸುವ ಮೂಲಕ ವ್ಯವಸ್ಥೆಯನ್ನು ರಚಿಸಬಹುದು.

ಈ ದಿಕ್ಕಿನಲ್ಲಿ ಚಲಿಸುವಲ್ಲಿ ವೈಫಲ್ಯ ಉಂಟಾದರೆ, ಯುದ್ಧದ ಸಾಧ್ಯತೆ ನಮ್ಮೆಲ್ಲರನ್ನು ಕಾಡುತ್ತಿರುತ್ತದೆ. ಅಮೆರಿಕದ ಅಧ್ಯಕ್ಷರಾದ ಡೊನಾಲ್ಡ್ ಟ್ರಂಪ್‌ರು ಶಾಂತಿಯುತ ಮಾರ್ಗವನ್ನು ಹಾದುಹೋಗಲು ಸಿದ್ದರಿದ್ದಾರೆಯೆ? ಕಾದು ನೋಡೋಣ.

JANASHAKTHI KANNADA VARA PATRIKE OCTOBER 9-15, 2017 Price : Rs. 10/- Date of Publication: 6 OCTOBER 2017 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಸಂವಿಧಾನ ಕತೆ ಕಾದಂಬರಿಯಲ್ಲ, ಪಾಳೆಯಗಾರಿ ವ್ಯವಸ್ಥೆಯನ್ನು ಪ್ರಜಾಪ್ರಭುತ್ವಕ್ಕೆ ಬದಲಾಯಿಸುವ ಕಾರ್ಯಕ್ರಮ : ನ್ಯಾ. ದಾಸ್.



"ನಮ್ಮ ದೇಶದ ಸಂವಿಧಾನವು ಕತೆ ಕಾದಂಬರಿಯಲ್ಲ. ಬದಲಾಗಿ ಪಾಳೆಯಗಾರಿ ವ್ಯವಸ್ಥೆಯನ್ನು ಪ್ರಜಾಪ್ರಭುತ್ವ ವ್ಯವಸ್ಥೆಗೆ ಬದಲಾಯಿಸುವ ಕಾರ್ಯಕ್ರಮವಾಗಿದೆ. ಅಸಮಾನ ಸಮಾಜವನ್ನು ಸಮಸಮಾಜವಾಗಿ ಕಟ್ಟುವ ಕಾರ್ಯಕ್ರಮವೇ ನಮ್ಮ ಸಂವಿಧಾನ." ಇದು ನ್ಯಾಯಮೂರ್ತಿ ನಾಗಮೋಹನ ದಾಸ್ ಅವರ ಉದ್ಗಾರವಾಗಿತ್ತು.

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್ಐ)ನ 11 ನೇ ರಾಜ್ಯ ಸಮ್ಮೇಳನದ ಅಂಗವಾಗಿ ಸಮ್ಮೇಳನದ 2 ನೇ ದಿನದಂದು **'ಭಾರತದ ಸಂವಿಧಾನ'**ದ ಕುರಿತು ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ನಿವೃತ್ತ ಹೈಕೋರ್ಟು ನ್ಯಾಯಾದೀಶರಾದ ಜಸ್ಟೀಸ್ ನಾಗಮೋಹನ್ ದಾಸ್‌ರವರು ಈ ವಿಷಯದ ಕುರಿತು ಉಪನ್ಯಾಸವನ್ನು ನೀಡಿದರು. ಉಪನ್ಯಾಸದ ಲಿಖಿತ ರೂಪವನ್ನು ಈ ಕೆಳಗೆ ನೀಡಲಾಗಿದೆ.

'ದೇಶಮಂಟೆ ಮಂಟಿ ಕಾದೋ ಮನುಷ್ಯಲೋಯ್' ಎಂದು ತೆಲುಗಿನಲ್ಲಿ ಪ್ರಸಿದ್ದ ಮಾತೊಂದಿದೆ. ಅಂದರೆ ದೇಶವೆಂದರೆ ಬರೀ ಕಲ್ಲು ಮಣ್ಣು ಅಷ್ಟೆ ಅಲ್ಲ, ಮನುಷ್ಯರು ಅಂತ ಅದರ ಅರ್ಥ. ಭಾರತದ ಸಂವಿಧಾನವನ್ನು ಅರ್ಥ ಮಾಡಿಕೊಳ್ಳಬೇಕಾದರೆ ಬರೀ ಸಂವಿಧಾನವನ್ನು ಓದಿಕೊಂಡರೆ ಸಾಲದು. ಭಾರತದ ಸಾಮಾಜಿಕ, ಆರ್ಥಿಕ ರಾಜಕೀಯ ವಾಸ್ತವಗಳನ್ನು ಅರ್ಥ ಮಾಡಿಕೊಳ್ಳಬೇಕು. ಭಾರತವನ್ನು ಅರ್ಥಮಾಡಿಕೊಳ್ಳಬೇಕು. ಆಗ ಮಾತ್ರ ಸಂವಿಧಾನವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯ.

ಭಾರತದಲ್ಲಿ ನೂರಾರು ಜಾತಿಗಳು, ಉಪಜಾತಿಗಳು, ಭಾಷೆಗಳು, ಧರ್ಮಗಳು, ವೈವಿಧ್ಯಮಯ ಸಂಸ್ಕೃತಿಗಳು, ಉಪಸಂಸ್ಕೃತಿಗಳು ಇವೆ. ಜಗತ್ತಿನಲ್ಲಿ ಭಾರತದ ಸಂವಿಧಾನಕ್ಕೆ ವಿಶೇಷವಾದ ಸ್ಥಾನವಿದೆ. ಭಾರತದಲ್ಲಿ ಹಿಂದೂಗಳಿಗೆ ಭಗವದ್ಗೀತೆ ಪವಿತ್ರ ಗ್ರಂಥವಾಗಿದೆ. ಕ್ರಿಶ್ಚಿಯನ್ನರಿಗೆ ಬೈಬಲ್, ಮುಸಲ್ಮಾನರಿಗೆ ಖುರಾನ್ ಪವಿತ್ರ ಗ್ರಂಥವಿದೆ. ಆದರೆ ಭಾರತೀಯರಿಗೆ ಸಂವಿಧಾನವೇ ಪವಿತ್ರ ಗ್ರಂಥವಾಗಿದೆ. ಜಗತ್ತಿನ ಬಹಳಷ್ಟು ಸಂವಿಧಾನದಲ್ಲಿ ಪ್ರಸ್ತಾವನೆ ಎಂಬುದಿಲ್ಲ. ಆದರೆ ಭಾರತದ ಸಂವಿಧಾನದಲ್ಲಿ ಪ್ರಸ್ತಾವನೆ ಅಥವಾ ಪೀಠಿಕೆ ಇದೆ. ಅದರಲ್ಲಿ ಸಂವಿಧಾನ ಮೂಲ ತತ್ವಗಳನ್ನು ವಿವರಿಸಲಾಗಿದೆ.

ಭಾರತದ ಸಂವಿಧಾನವು ಜಗತ್ತಿನ ನಾನಾ ಆಧುನಿಕ ಕ್ರಾಂತಿಗಳ ಅನುಭವದ ಸಾರವನ್ನು ಒಳಗೊಂಡಿದೆ. ಅಮೇರಿಕಾದ ಕ್ರಾಂತಿಯ ಅನುಭವದ ಆಧಾರದಲ್ಲಿ 'ಎಲ್ಲ ಮನುಷ್ಯರು ಸಮಾನರು' ಎಂಬ ತತ್ವವನ್ನು ಅದು ಒಳಗೊಂಡಿದೆ. ಫ್ರಾನ್ಸ್ ಕ್ರಾಂತಿಯ ಅನುಭವದ ಆಧಾರದಲ್ಲಿ 'ಸಮಾನತೆ, ಸ್ವಾತಂತ್ರ್ಯ, ಸಹೋದರತ್ವ'ದ ಮೌಲ್ಯಗಳನ್ನು ಒಳಗೊಂಡಿದೆ. ರಷ್ಯಾದ ಕ್ರಾಂತಿಯ ಅನುಭವದ ಆಧಾರದಲ್ಲಿ 'ಪ್ರತಿಯೊಬ್ಬರ ದುಡಿಮೆಗೆ ತಕ್ಕಂತಹ ಪ್ರತಿಫಲ' ಎಂಬ ತತ್ವವನ್ನು ಒಳಗೊಂಡಿದೆ.

ಭಾರತವು ಅನಕ್ಷರತೆಯ ಕಡೆಯಿಂದ ಸಾಕ್ಷರತೆಯ ಕಡೆಗೆ, ಕೃಷಿ ಪ್ರಧಾನ ದೇಶದಿಂದ ಕೈಗಾರಿಕಾ ಪ್ರಧಾನ ದೇಶವಾಗುವ ಕಡೆಗೆ ಸಾಮಾಜಿಕ ನ್ಯಾಯದ ಆಧಾರದಲ್ಲಿ ಸರ್ವತೋಮುಖ ಅಭಿವೃದ್ಧಿಯ ಕಡೆಗೆ ಹೋಗಬೇಕೆಂದು ತೀರ್ಮಾನಿಸಿಕೊಳ್ಳಲಾಯಿತು.

ಶಾಸನಗಳನ್ನು ರಚಿಸಲು ಸ್ವತಂತ್ರ ಶಾಸಕಾಂಗ, ಶಾಸನಗಳನ್ನು ಜಾರಿಮಾಡಲು ಸ್ವತಂತ್ರ ಕಾರ್ಯಾಂಗ, ವಿವಾದಗಳನ್ನು ಬಗೆಹರಿಸಿ ನ್ಯಾಯ ನೀಡಲು, ಸಂವಿಧಾನವನ್ನು ಸರಿಯಾಗಿ ಅರ್ಥೈಸಲು ಸ್ವತಂತ್ರ ನ್ಯಾಯಾಂಗವನ್ನು ರೂಪಿಸಲಾಯಿತು.

ಸಂವಿಧಾನವು ನಮಗೆ ಕೆಲವು ಮೂಲಭೂತ ಹಕ್ಕುಗಳನ್ನು ಕೊಡಮಾಡಿದೆ. ಧಾರ್ಮಿಕ ಸ್ವಾತಂತ್ರ್ಯದ ಹಕ್ಕು, ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು, ದೇಶದ ಎಲ್ಲೇ ಆಗಲಿ ವಾಸಿಸುವ ಸ್ವಾತಂತ್ರ್ಯದ ಹಕ್ಕು, ಯಾವುದೇ ಉದ್ಯೋಗವನ್ನು ಕೈಗೊಳ್ಳುವ ಹಕ್ಕು, ಸಂಘಟನೆ ಮಾಡಿಕೊಳ್ಳುವ ಹಕ್ಕು ಮುಂತಾದವುಗಳನ್ನು ನೀಡಿದೆ.

ದೇಶ ಸ್ವಾತಂತ್ರ್ಯ ಪಡೆದುಕೊಂಡಾಗ ದೇಶಕ್ಕೆ ಯಾರಾದರೂ ಚಕ್ರವರ್ತಿ ಅಥವಾ ರಾಜ ಮಹಾರಾಜರಿಗೆ ಅಧಿಕಾರ ನೀಡಬೇಕೆ ಎಂಬ ಪ್ರಶ್ನೆ ಬಂದಿತ್ತು. ಆದರೆ ಪಾಳೇಗಾರಿ ರಾಜ ಮಹಾರಾಜರನ್ನು ತಿರಸ್ಕರಿಸಿ ಪ್ರಜೆಗಳೇ ಪ್ರಭುಗಳು ಎಂಬ ಪ್ರಜಾಪ್ರಭುತ್ವ ತತ್ವದ ಆಧಾರದಲ್ಲಿ ಗಣರಾಜ್ಯ ತತ್ವವನ್ನು ಒಪ್ಪಿಕೊಳ್ಳಲಾಯಿತು. ವಿಶಾಲವಾದ ಮತ್ತು ವೈವಿಧ್ಯಮಯ ಸಂಸ್ಕೃತಿಯ ದೇಶದಲ್ಲಿ ದೆಹಲಿಯಿಂದಲೇ ಆಡಳಿತ ಮಾಡಲು ಸಾಧ್ಯವಿಲ್ಲವೆಂದು ಒಕ್ಕೂಟ ತತ್ವವನ್ನು ಒಪ್ಪಿಕೊಳ್ಳಲಾಯಿತು. ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಸಿಖ್, ಜೈನ, ಬೌದ್ಧ ಮುಂತಾದ ನಾನಾ ಮತಧರ್ಮಗಳಿರುವ ದೇಶವನ್ನು ಹಿಂದೂ ರಾಷ್ಟ್ರವನ್ನು ಮಾಡಲು ಸಾಧ್ಯವಿಲ್ಲವೆಂದು ಜಾತ್ಯತೀತ ತತ್ವವನ್ನು ಒಪ್ಪಿಕೊಳ್ಳಲಾಯಿತು.

ನಮ್ಮ ದೇಶದಲ್ಲಿ ಮೇಲ್ಜಾತಿಗಳಿವೆ ಮತ್ತು ಬಹುತೇಕ ಅವೇ ಮೇಲ್ವರ್ಗಗಳಾಗಿವೆ ಎಂಬ ತಿಳುವಳಿಕೆಯ ಆಧಾರದಲ್ಲಿ ಸಾಮಾಜಿಕ ನ್ಯಾಯದ ತತ್ವವನ್ನು ಅಳವಡಿಸಿಕೊಳ್ಳಲಾಯಿತು. ಸಾಮಾಜಿಕ ನ್ಯಾಯ ಎಂದರೆ ಕೇವಲ ಉದ್ಯೋಗ ಮೀಸಲಾತಿ ಮಾತ್ರವಲ್ಲ. ಭೂಸುಧಾರಣೆ ಸೇರಿದಂತಹ ನಾನಾ ಕ್ರಮಗಳು ಒಳಗೊಳ್ಳುತ್ತವೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಈಗಿನ ಭಾರತವು ಹೊಂದಿರುವಂತಹ ಭೂಪ್ರದೇಶವನ್ನು ಭಾರತವು ಹಿಂದೆ ಏಕಕಾಲದಲ್ಲಿ ಎಂದಿಗೂ ಹೊಂದಿರಲಿಲ್ಲ. ಇಲ್ಲಿ ಅಶೋಕನ ಭಾರತ, ಗುಪ್ತರ ಭಾರತ, ಅಕ್ಬರನ ಭಾರತ.. ಹೀಗೆ ಒಂದೊಂದು ಕಾಲದಲ್ಲಿ ಒಂದೊಂದು ಪ್ರಾದೇಶಿಕ ವ್ಯಾಪ್ತಿಯನ್ನು ಭಾರತ ಹೊಂದಿತ್ತು. ಆದರೆ ಸ್ವಾತಂತ್ರ್ಯದ ನಂತರ ಭಾರತಕ್ಕೆ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗಿನ ಪ್ರಾದೇಶಿಕ ವ್ಯಾಪ್ತಿಯನ್ನು ನಿರ್ಧರಿಸಿಕೊಂಡು ನಿರ್ದಿಷ್ಟ ಗಡಿಗಳನ್ನು ಗುರುತಿಸಿಕೊಳ್ಳಲಾಯಿತು. ದೇಶಕ್ಕೊಂದು ಬಾವುಟ, ಚಿನ್ಹೆ, ರಾಷ್ಟ್ರಗೀತೆಯನ್ನು ನಿಗದಿಪಡಿಸಿಕೊಂಡೆವು.

ಭಾರತ ದೇಶವು ಸಂವಿಧಾನವನ್ನು ಅಂಗೀಕರಿಸಿದ 67 ವರ್ಷಗಳಲ್ಲಿ ಕೆಲವೊಂದು ಮಹತ್ವದ ಸಾಧನೆಗಳನ್ನು ಮಾಡಿದೆ. ಬಾಹ್ಯಾಕಾಶ ವಿಜ್ಞಾನ, ಅಣು ತಂತ್ರಜ್ಞಾನ, ಆಹಾರ ಉತ್ಪಾದನೆ, ಮಾಹಿತಿ ತಂತ್ರಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ಮುನ್ನಡೆ ಆಗಿದೆ. ಆದರೆ ಭಾರತದಲ್ಲಿ ತೀವ್ರವಾದ ಆರ್ಥಿಕ ಅಸಮಾನತೆ ರೂಪುಗೊಂಡಿದೆ. ದೇಶದ ಶೇ. 58 ಸಂಪತ್ತು ಶೇ. 1ರಷ್ಟು ಜನರ ಕೈಯಲ್ಲಿ ಕೇಂದ್ರೀಕರಣಗೊಂಡಿದೆ. ನಿರುದ್ಯೋಗ ತೀವ್ರಗೊಳ್ಳುತ್ತಿದೆ. ರೈತರು ಆತ್ಮಹತ್ಯೆಗೆ ಮುಂದಾಗುತ್ತಿದ್ದಾರೆ. ದಲಿತರು, ಮಹಿಳೆಯರು, ಮಕ್ಕಳ ಮೇಲೆ ದೌರ್ಜನ್ಯ, ಅತ್ಯಾಚಾರಗಳಾಗುತ್ತಿವೆ.

ದೇಶದಲ್ಲಿ ಇಂದು ಭಾರತದ ಸಂವಿಧಾನದ ಮೇಲೆ ನಂಬಿಕೆ ಇಲ್ಲದವರು ಅಧಿಕಾರವನ್ನು ಹಿಡಿದಿದ್ದಾರೆ. ಭಯೋತ್ಪಾದನೆ, ಕೋಮುವಾದ ಉಲ್ಬಣಗೊಂಡಿವೆ. ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದಿದೆ. ಭಿನಾಭಿಪ್ರಾಯಗಳನ್ನು, ವಿಮರ್ಶೆ ಟೀಕೆಗಳನ್ನು ಹತ್ತಿಕ್ಕಲಾಗುತ್ತಿದೆ. ಪತ್ರಕರ್ತೆ ಗೌರಿ ಲಂಕೇಶ್, ಸಂಶೋಧಕ ಎಂ.ಎಂ. ಕಲ್ಬುರ್ಗಿಯವರನ್ನು ಗುಂಡಿಟ್ಟು ಕೊಲ್ಲಲಾಯಿತು. ನಿರುದ್ಯೋಗದಿಂದ ಹತಾಶರಾಗಿರುವ ಯುವಜನರನ್ನು ಭಯೋತ್ಪಾದಕ ಮತ್ತು ಕೋಮುವಾದಿ ಶಕ್ತಿಗಳು ದಾರಿ ತಪ್ಪಿಸುತ್ತಿವೆ. ಭಾಷಾಂಧ, ಪ್ರದೇಶಾಂಧ ಚಳುವಳಿಗಳೂ ಯುವಜನರನ್ನು ದಿಕ್ಕು ತಪ್ಪಿಸುತ್ತಿವೆ. ಕೋಮುವಾದಿ ಶಕ್ತಿಗಳು ಜನರ ಆಹಾರ ಮತ್ತು ಬಟ್ಟೆ ಇತ್ಯಾದಿಗಳ ವಿಷಯದಲ್ಲಿಯೂ ತಮ್ಮ ಫರ್ಮಾನುಗಳನ್ನು ಹೊರಡಿಸುತ್ತಿದ್ದಾರೆ. ದೇಶದಲ್ಲಿ ಕಾನೂನಿನ ಆಡಳಿತಕ್ಕೆ ಆತಂಕ ಎದುರಾಗಿದೆ.

ಸಂವಿಧಾನದ ಮೂಲ ಆಶಯಗಳು ಕಳೆದ 67 ವರ್ಷಗಳಲ್ಲಿ ಈಡೇರಿಲ್ಲ. ಆದರೆ ಅದರ ಅರ್ಥ ಸಂವಿಧಾನ ಸರಿಯಿಲ್ಲ ಎಂದು ಅಲ್ಲ. ಸಂವಿಧಾನವನ್ನು ಜಾರಿಮಾಡುವವರು ಕೆಟ್ಟವರಾದ್ದರಿಂದ ಆಶಯಗಳು ಜಾರಿಯಾಗಲಿಲ್ಲ ಎಂದು ಅರ್ಥ. ದೇಶದ 16 ನೇ ಲೋಕಸಭೆಗೆ ಆಯ್ಕೆಯಾದ 539 ಸಂಸದರಲ್ಲಿ 178 ಜನರ ಮೇಲೆ ಕ್ರಿಮಿನಲ್ ಮೊಕದ್ದಮೆಗಳಿದ್ದವು. ಶೇ. 85 ರಷ್ಟು ಸಂಸದರು ಕೋಟ್ಯಾಧಿಪತಿಗಳಾಗಿದ್ದರು. ಇಂತಹ ಪರಿಸ್ಥಿತಿಯನ್ನು ಬದಲಿಸಬೇಕು. ದೇಶದ ಯುವಜನರು ಸಂವಿಧಾನದ ಮೂಲತತ್ವಗಳನ್ನು ಅರಿತುಕೊಂಡು ಉತ್ತಮ ನಾಯಕರಾಗಿ ಬೆಳೆದು ಬರಬೇಕು. ಸಂವಿಧಾನದ ಆಶಯಗಳ ಜಾರಿಗೆ ಶ್ರಮಿಸಬೇಕು ಎಂದೂ ನಾಗಮೋಹನದಾಸ್ ರವರು ಕರೆ ನೀಡಿದರು.



"ನಾವು ಪ್ರಕಾಶ ರೈ ಅವರೊಂದಿಗೆ ಇದ್ದೇವೆ"

ಪ್ರಕಾಶ ರೈ ಡಿವೈ.ಎಫ್.ಐ ಸಮ್ಮೇಳನದಲ್ಲಿ ಮೋದಿ, ಯೋಗಿ ಬಗ್ಗೆ ಆಡಿದ ಮಾತುಗಳು ಸಂಘ ಪರಿವರದವರಿಗೆ ಅರಗಲಿಲ್ಲ. ಅಂದೇ ಪ್ರಕಾಶ ರೈ ಅವರ ಟ್ರಾಲಿಂಗ್ ಕೀಳು ಅಭಿರುಚಿಯ ವೈಯಕ್ತಿಕ ಟೀಕೆಗಳನ್ನು ಮಾಡಲಾಯಿತು. ಕುಖ್ಯಾತ ಟ್ರಾಲ್ ಕಿಂಗ್ ಸಂಸದ ಪ್ರತಾಪ ಸಿಂಹ ಸ್ವತಃ ಇಳಿದಿದ್ದರು. ಇದನ್ನು ಖಂಡಿಸಿ ಡಿವೈ.ಎಫ್.ಐ ಸಮ್ಮೇಳನ ಮುಗಿಸಿ ಮೈಸೂರು ಬ್ಯಾಂಕ್ ವೃತ್ತದಲ್ಲಿ ಎಸ್.ಎಫ್.ಐ.– ಡಿ.ವೈ.ಎಫ್.ಐ ಜಂಟಿಯಾಗಿ ಪ್ರತಿಭಟನೆ ಹಮ್ಮಿಕೊಂಡಿದ್ದವು.



JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**